Mr. SPEAKER.—The question is :

" That Leave be granted to introduce the Mysore Urban Development Boards Bill, 1967."

The motion was adopted.

MYSORE URBAN DEVELOPMENT BOARDS BILL, 1967

(*Introduction*)

Sri R. M. PATIL.—I introduce the Mysore Urban Development Boards Bill, 1967.

Mr. SPEAKER.—The Bill is introduced.

BUDGET ESTIMATES FOR 1967-68—DEMANDS FOR GRANTS

(DEMANDS No. 17 AND 37)

Sri K. V. SHANKARA GOWDA (Minister for Education).—Sir, on the recommendation of the Governor, I beg to move :

"That a sum not exceeding Rs. 33,57,28,700 be granted to the Government to defray the charges which will come in course of payment during the financial year for the period ending 31st day of March 1968, in respect of 'Education'.

Mr. SPEAKER.—Motion moved on the recommendation of the Governor :

" That a sum not exceeding Rs. 33,57,28,700 be granted to the Government to defray the charges which will come in course of payment during the financial year for the period ending 31st day of March 1968, in respect of 'Education'.

This demand as well as Demand 37 shall be deemed to have been moved. Now debate will take place : Sri Sivappa.

Sri K. H. PATIL (Gadag).—Sir, I have given notice of a Privilege Motion. What happened to it ? I want to know.

Mr. SPEAKER.—I am looking into it.

†ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದ್ದೆ, ಅಲ್ಲಿ ಕ್ಯಾನ್ಸರ್ ವಾರ್ಡ್‌ನಲ್ಲಿ ಬಹಳ ತಗಣಿ ಇದೆ. ಅಧಿಕಾರಿಗಳಿಗೆ ತಿಳಿಸಿದರೂ ಕೂಡ 'I am helpless' ಅಂತ ಹೇಳುತ್ತಾರೆ. ಮಂಚದ ಮೇಲೆ ಖಾದಿ ಬಟ್ಟೆಯ ಬೆಡ್‌ಷೀಟು ಹಾಕಿದ್ದಾರೆ, ಅದರಲ್ಲೂ ಕೂಡ ತಗಣಿ ಸೇರಿಕೊಂಡು ಬಹಳ ತೊಂದರೆಯಾಗಿದೆ. ಪೇಷಂಟ್ಸ್ ಅದರಲ್ಲಿ ಮಲಗುವುದು ಬಹಳ ದುಸ್ತರವಾಗಿದೆ ; ಅಲ್ಲಿ ಸುಮಾರು 50-60 ಬೆಡ್ಸ್ ಇವೆ, ಅವುಗಳನ್ನು ತೆಗೆದು ಹಾಕುವುದಕ್ಕೆ ಶಕ್ಯವಿಲ್ಲ. ಅದೂ ಅಲ್ಲದೆ ಅವು ಬ್ರೆಡ್‌ನಲ್ಲೂ ಕೂಡ ಹೋಗುತ್ತಾ ಇವೆ. ಈಗತಾನೆ ಅಲ್ಲಿಂದ ಬಂದೆ,

(ಶ್ರೀ ಸಿದ್ದಯ್ಯ ಕಾಶೀಮಠ್)

ಬೆಳಿಗ್ಗೆ ಹೊತ್ತಿನಲ್ಲೇ ಈ ರೀತಿ ಆದರೆ ಇನ್ನು ರಾತ್ರಿ ಹೊತ್ತಿನಲ್ಲಂತೂ ಅಲ್ಲಿ ಮಲಗುವುದು ಕಠಿಣವಾಗುತ್ತಾ ಇರುವುದರಿಂದ ಮಾನ್ಯ ಹೆಲ್ತ್ ಮಿನಿಸ್ಟರ್‌ರವರು ತೀವ್ರ ಒಂದು ಆಜ್ಞೆಯನ್ನು ಕೊಟ್ಟು ಅಲ್ಲಿರತಕ್ಕ ಬೆಡ್‌ಷೀಟ್ಸು ಮತ್ತು ಶಗಣಿಗಳನ್ನು ತೆಗೆದು ಹಾಕುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

Sri S. NIJALINGAPPA (Chief Minister).—It will be looked into.

[Mr. DEPUTY SPEAKER in the Chair].

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಗಳೇ, ವಿದ್ಯಾ ಖಾತೆಗೆ ಸಂಬಂಧಪಟ್ಟ ಮೂವತ್ತಮೂರೂವರೆ ಕೋಟಿ ರೂಪಾಯಿಗಳ ಈ ಅತಿ ದೊಡ್ಡ ಬೇಡಿಕೆಯನ್ನು ವಿರೋಧ ಮಾಡುವುದಕ್ಕೆ ನಾನು ನಿಂತಿದ್ದೇನೆ. ಸಭಾಪತಿಯವರೇ ಇವತ್ತು ನಮ್ಮ ದೇಶದಲ್ಲಿ ಈ ವಿದ್ಯಾಭ್ಯಾಸದ ನೀತಿಯೇ ನಮ್ಮ ದೇಶದ ಒಂದು ಆಧಾರ ಸ್ತಂಭವಾಗಿದೆ. ಇವತ್ತು ನಮ್ಮ ರಾಷ್ಟ್ರದ ನೀತಿ ಮತ್ತು ನಮ್ಮ ರಾಷ್ಟ್ರದ ಜೀವನದ ಗತಿಗಳು ಇವಕ್ಕೆ ನಮ್ಮ ಪಾಠಶಾಲೆಗಳೇ ಭವಿಷ್ಯದ ನಿರ್ಮಾಪಕವಾಗಿವೆ. ಇಂತಹ ಇಡೀ ದೇಶದ ಭವಿಷ್ಯವನ್ನೇ ನಿರ್ಮಾಪಕ ಮಾಡತಕ್ಕ ಈ ವಿದ್ಯಾಭ್ಯಾಸದ ನೀತಿ ಏನಿದೆ ಇದಕ್ಕೆ ಇವತ್ತು ನಮ್ಮ ದೇಶದಲ್ಲಿ ಕೋಟಿ ಕೋಟಿ ರೂಪಾಯಿಗಳು ಖರ್ಚಾಗುತ್ತಾ ಇದೆ. ಇಷ್ಟಾದರೂ ಕೂಡ ದೇಶದಲ್ಲಿ ವಿದ್ಯಾಭ್ಯಾಸದ ಪ್ರಗತಿ ಮತ್ತು ವಿದ್ಯಾಭ್ಯಾಸದ ನೀತಿ ಏನೊಂದೂ ಕೂಡ ಕ್ರಾಂತಿಕಾರಕವಾದ ರೀತಿಯಲ್ಲಿ ಬದಲಾವಣೆಯಾಗದೇ ಮೊದಲು ಎಲ್ಲಿ ನಿಂತಿತ್ತೋ ಅಲ್ಲೇ ನಿಂತಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ವಿದ್ಯಾಭ್ಯಾಸದ ಬದಲಾವಣೆ ಮಾಡುವುದಕ್ಕೋಸ್ಕರ ದೇಶದಲ್ಲಿ ಅನೇಕ ಕಮಿಟಿಗಳನ್ನು ನೇಮಕ ಮಾಡಲಾಗಿದೆ. ಮೊದಲನೆಯದು ನಿವೃತ್ತ ರಾಷ್ಟ್ರಾಧ್ಯಕ್ಷರಾದ ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿ ಅವರು ವಿದ್ಯಾಭ್ಯಾಸದ ಪುನರ್ರಚನೆಗೆ ಅನೇಕ ಶಿಫಾರಸುಗಳನ್ನು ಮಾಡಿದ್ದನ್ನು ನಾವು ನೋಡಿದ್ದೇವೆ. ಮತ್ತು ಇತ್ತೀಚೆಗೆ ಕೊಠಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ ಅವರು ಒಂದು ವರದಿಯನ್ನು ದೇಶದ ಮುಂದೆ ಇಟ್ಟಿದ್ದಾರೆ. ಯಾವ ರಿಪೋರ್ಟುಗಳೇ ಇರಲಿ ಇವತ್ತು ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ನೀತಿ ಇನ್ನೂ ಕೂಡ ಎಕ್ಸ್‌ಪರಿಮೆಂಟಲ್ ಸ್ಟೇಜ್‌ನಲ್ಲಿ ಇದ್ದು ಅದು ಒಂದು ಹದಕ್ಕೆ ಬಂದಿಲ್ಲ. ಇವತ್ತು ನಮ್ಮ ವಿದ್ಯಾರ್ಥಿಗಳ ಮೇಲೆ ಅದು ಒಂದು ಪ್ರಾಯೋಗಿಕವಾದ ರೀತಿಯಲ್ಲಿ ನಡೆಯುತ್ತಾ ಇದೆಯೇ ಹೊರತು ಒಂದು ಸ್ಥಿಮಿತವಾದ ಸ್ಥಿತಿಗೆ ಬಂದಿಲ್ಲ. ಒಬ್ಬೊಬ್ಬ ವ್ಯಕ್ತಿಗಳು ಮಂತ್ರಿಗಳಾಗಿ ಬಂದಾಗ ಅವರು ವಿದ್ಯಾಭ್ಯಾಸದ ನೀತಿನಿಲುವುಗಳನ್ನು ಮುರಿದು ಹಾಕಿ ತಮಗೆ ಇಷ್ಟ ಬಂದಹಾಗೆ ಮನಸೋ ಇಚ್ಛೆ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆಗಳನ್ನು ಮಾಡುತ್ತಾ ಬಂದಿದ್ದಾರೆ. ಇದಕ್ಕೆ ಅನೇಕ ನಿದರ್ಶನಗಳಿವೆ. ಹೀಗೆ ಸರ್ಕಾರದವರು ಕೈಗೊಂಡಿರತಕ್ಕ ಕ್ರಾಂತಿಕಾರವಾದ ಬದಲಾವಣೆಗಳನ್ನು ನಾವು ಈ ದಿವಸ ಎದುರಿಸಬೇಕಾಗಿದೆ. ನಮ್ಮ ರಾಷ್ಟ್ರವಾದರೋ unity in diversity ಅನ್ನುವಂಥ ವೈವಿಧ್ಯಗಳಿಂದ ಕೂಡಿದೆ. ಅಂತೂ ದೇಶದಲ್ಲಿ ವಿದ್ಯಾಭ್ಯಾಸ ಇಂದು ಒಂದು ದೊಡ್ಡ ಗೊಂದಲಕ್ಕೀಡಾಗಿದೆ. ಹೀಗೆ ಜನರನ್ನು ಗೊಂದಲಕ್ಕೀಡು ಮಾಡಿರತಕ್ಕ ಮತ್ತೊಂದು ಪ್ರಾಮುಖ್ಯವಾದ ವಿಷಯ ಎಂದರೆ ಅದು ಭಾಷಾ ಸಮಸ್ಯೆ. ಈ ವಿಚಾರದಲ್ಲಿ ನಿರ್ದಿಷ್ಟವಾದ ಒಂದು ಸರ್ಕಾರದ ನಿಲುವು ಏನಿದೆ ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ನಮ್ಮ ಮಕ್ಕಳು ಈ ದಿವಸ ಶಾಲೆಗಳಲ್ಲಿ ಯಾವ ಯಾವ ಹಂತದಲ್ಲಿ ಏನೇನು ಭಾಷೆಗಳನ್ನು ಕಲಿಯಬೇಕು ಎಂಬುದರ ಬಗ್ಗೆ ಅವರು ಒಂದು ದೊಡ್ಡ ಗೊಂದಲಕ್ಕೀಡಾಗಿದ್ದಾರೆ. ಈ ದಿವಸ ನಮ್ಮ ಮಕ್ಕಳು ಮೂರೂ ಭಾಷೆಗಳನ್ನು ಕಲಿಯಬೇಕಾಗಿದೆ. ಈ ದಿವಸ ನಮ್ಮ ಪಾರ್ಲಿಮೆಂಟಿನಲ್ಲಿ ನಮ್ಮ ಮಕ್ಕಳು 2 ಭಾಷೆಯನ್ನು ಕಲಿತರೆ ಸಾಕು ಎಂಬುದಾಗಿ ಅಲ್ಲಿ ಅವರು ಆಲೋಚನೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ದಕ್ಷಿಣ ಇಂಡಿಯಾದವರು ಬಹಳ ಆಳವಾಗಿ ಆಲೋಚನೆ ಮಾಡಬೇಕಾಗಿದೆ. ನಾವು ಈಗಾಗಲೇ ನಮ್ಮ ರಾಷ್ಟ್ರದಲ್ಲಿ 14 ಭಾಷೆಗಳನ್ನು ರಾಷ್ಟ್ರ ಭಾಷೆಗಳೆಂದು ನಾವು ಒಪ್ಪಿಕೊಂಡಿದ್ದೇವೆ. ಆದರೆ ಈ ದಿವಸ ಉತ್ತರಭಾರತದಲ್ಲಿರತಕ್ಕ ಜನರೆಲ್ಲಾ ಅಲ್ಲಿಯವರು ಹಿಂದೀ ಭಾಷೆಯನ್ನು ಮತ್ತು ಯಾವುದಾದರೂ ಇನ್ನೊಂದು ಭಾಷೆಯನ್ನು ಕಲಿತರೆ ಸಾಕು ಎಂಬುದಾಗಿ ಅವರು ಹೇಳುತ್ತಿದ್ದಾರೆ. ಆದರೆ ಅವರು ಹೇಳತಕ್ಕ ಹಿಂದೀ ಭಾಷೆ ನಮಗೆ ಮಾತೃ ಭಾಷೆಯಲ್ಲ. ನಮ್ಮ ಮಾತೃಭಾಷೆ ಕನ್ನಡ. ಇದರ ಜೊತೆಗೆ ನಾವು ಇನ್ನೂ ಎರಡು ಭಾಷೆಗಳನ್ನು ಕಲಿಯಬೇಕು ಎಂದರೆ—ಒಂದು ಇಂಗ್ಲೀಷ್ ಮತ್ತು ಇನ್ನೊಂದು ಹಿಂದೀ. ಹೀಗೆ ನಾವು ಮೂರು ಭಾಷೆಗಳನ್ನು ಕಲಿಯಬೇಕಾದುದು ಅಗತ್ಯ

ವೆಂದಾಗುತ್ತದೆ. ಇದನ್ನು ನಾವೆಲ್ಲರೂ ಬಹಳ ಆಳವಾಗಿ ಆಲೋಚನೆ ಮಾಡಬೇಕಾದ ವಿಷಯ ಇದು. ಇಲ್ಲಿಯವರೆಗೂ ನಾವು ನಮ್ಮ ಜನರಿಗೆ ಅಗತ್ಯವಾಗಿ ನಮ್ಮ ಮಾತೃ ಭಾಷೆಯಲ್ಲಿ ಎಷ್ಟು ಜ್ಞಾನಾಭಿವೃದ್ಧಿಯನ್ನು ಮಾಡಬೇಕಾಗಿತ್ತೋ ಅಷ್ಟನ್ನು ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಿರುವುದಿಲ್ಲ. ನಾವು ಅನೇಕ ವರ್ಷಗಳಿಂದಲೂ ನಮ್ಮ ಮಾತೃ ಭಾಷೆ ಇಲ್ಲಿಯ ಶಿಕ್ಷಣಮಾಧ್ಯಮವಾಗಬೇಕು, ನಮ್ಮ ಆಡಳಿತ ಭಾಷೆ ಮಾತೃ ಭಾಷೆಯಲ್ಲೇ ನಡೆಯಬೇಕು ಎಂದು ಸರ್ಕಾರದವರನ್ನು ಒತ್ತಾಯಮಾಡುತ್ತಲೇ ಬಂದಿದ್ದೇವೆ. ಆದರೆ ಅದಿನ್ನೂ ಕಾರ್ಯಗತವಾಗಿಲ್ಲ. ನಮ್ಮ ರಾಜ್ಯದಲ್ಲಿ ಶಿಕ್ಷಣಮಾಧ್ಯಮ ಮತ್ತು ಆಡಳಿತ ಭಾಷೆ ಎರಡೂ ಮಾತೃಭಾಷೆಯಲ್ಲೇ ನಡೆಯಬೇಕೆಂಬ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿರಲಾರದು, ನಾನು ಭಾವಿಸುತ್ತೇನೆ. ಇದರ ಜೊತೆಗೆ ನಾವು ಹಿಂದೀ ಒಂದನ್ನು ಕಲಿತು ಸಾಕೆಂದು ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳುವುಕ್ಕೆ ಆಗುವುದಿಲ್ಲ. ಹಿಂದಿ ಭಾಷೆಗಿಂತಲೂ ಇಂಗ್ಲೀಷ್ ಭಾಷೆ ಅನೇಕ ವಿಚಾರಗಳಲ್ಲಿ ಬಹಳ ಪ್ರಾಮುಖತೆಯನ್ನು ಗಳಿಸಿದೆ. ಆ ಭಾಷೆಯಲ್ಲಿ ಆಗತಕ್ಕ ಜ್ಞಾನಾರ್ಜನೆ ಬೇರೊಂದು ಭಾಷೆಯಲ್ಲಿ ಆಗಲಾರದು ಎಂಬುದಾಗಿ ಬಹುಜನಾಭಿಪ್ರಾಯವಿದೆ. ಅಷ್ಟೇ ಅಲ್ಲದೆ ಈ ದಿವಸ ಇಂಗ್ಲೀಷ್ ವಿಶ್ವವ್ಯಾಪಿ ಭಾಷೆಯಾಗಿದೆ. Internationl Language ಆಗಿದೆ. ಈ ದಿವಸ ಇಡೀ ವಿಶ್ವವನ್ನೇ ಒಂದು ಏಕೈಕ ನಾಡನ್ನಾಗಿ ಮಾಡಬೇಕೆಂಬುದರ ಕಡೆಗೆ ಜನರ ಮನಸ್ಸು ಹರಿಯುತ್ತಿರುವಾಗ ಇಂಟರ್‌ನ್ಯಾಷನಲ್ ಲಾಂಗ್ವೇಜಾಗಿರತಕ್ಕ ಇಂಗ್ಲೀಷನ್ನು ನಾವು ಈ ದಿವಸ ಕೈಬಿಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಮಗೆ ಇಂಗ್ಲೀಷೂ ಕೂಡ ಬಹಳ ಅಗತ್ಯವಾದ ಭಾಷೆಯಾಗಿದೆ. ಅಂದಾಗ ನಮ್ಮ ರಾಜ್ಯದಲ್ಲಿ ನಮ್ಮ ಮಕ್ಕಳಿಗೆ ಮೂರೂ ಭಾಷೆಗಳು ಅತ್ಯಗತ್ಯ ಆನ್ನುವಾಗ ಇವರಿಗೆ ಯಾವ ಯಾವ ಹಂತದಲ್ಲಿ ಯಾವ ಯಾವ ಭಾಷೆಯನ್ನು ಯಾವ ಯಾವ ಮಟ್ಟದ ವಿದ್ಯಾಭ್ಯಾಸದಲ್ಲಿ ಒದಗಿಸಬೇಕು ಎಂಬುದನ್ನು ವಿಮರ್ಶೆಮಾಡಿ ಈ ತ್ರಿಭಾಷಾ ಫಾರಮುಲಾ ಪ್ರಕಾರ ವಿದ್ಯಾಭ್ಯಾಸವನ್ನು ಮುಂದುವರಿಸತಕ್ಕದ್ದು ಸರಿಯಾದ ನೀತಿಯಾಗಿದೆ ಎಂದು ಇದನ್ನು ನಡೆಸುವುದಕ್ಕೆ ಒಂದು ಸುವ್ಯವಸ್ಥಿತವಾದ ಏರ್ಪಾಡನ್ನು ಕೂಡಲೇ ಕೈಗೊಳ್ಳಬೇಕೆಂದು ಹೇಳುತ್ತೇನೆ. ನಾವು ಇಲ್ಲಿಯವರೆಗೂ ನಮ್ಮ ಮಾತೃಭಾಷೆಯ ಬಗ್ಗೆ ಎಷ್ಟು ತೀವ್ರಗಮನ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿರುವುದಿಲ್ಲ. ಈ ದಿವಸ ಆ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅನೇಕ ರಾಜ್ಯಗಳಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳನ್ನು ಅವರವರ ರಾಜ್ಯಭಾಷೆಗಳಲ್ಲೇ ಮಾಡುವುದಕ್ಕೆ ಹೊರಟಿದ್ದಾರೆ ಹಾಗೆ ಅವರು ಆ ಪ್ರಯತ್ನದಲ್ಲಿರುವಾಗ ನಾವು ಇಲ್ಲಿ ನಮ್ಮ ಮಾತೃಭಾಷೆಯ ಬಗ್ಗೆ ನಿರ್ಲಕ್ಷದಿಂದ ಕುಳಿತಿದ್ದೇವೆ. ಅದು ಮಹಾ ಅಪರಾಧ. ಇನ್ನಾದರೂ ನಾವು ಎಚ್ಚೆತ್ತುಕೊಂಡು ನಮ್ಮ ಶಾಲೆಕಾಲೇಜುಗಳಲ್ಲಿ ಮಾತೃಭಾಷೆಯನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಬೇಕು. ನಾವು ಹಿಂದೆ ಬಿದ್ದರೆ ಯಾವ ಯಾವ ರಾಜ್ಯಗಳವರು ಅವರವರ ಮಾತೃಭಾಷೆಯಲ್ಲಿ ಮುಂದೆ ಹೋಗಿದ್ದಾರೋ ಅವರು ಹೆಚ್ಚು ಅನುಕೂಲ ಹೊಂದುತ್ತಾರೆ ನಾವು ತೊಂದರೆಗೀಡಾಗಬೇಕಾಗುತ್ತದೆ. ಆದ್ದರಿಂದ ನಾವು ಅತಿ ಶೀಘ್ರವಾಗಿ ಕಾಲೇಜ್ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿಯವರೆಗೂ ಕನ್ನಡವನ್ನು ಶಿಕ್ಷಣಮಾಧ್ಯಮ ಮಾಡಲು ಅನೇಕ ತೊಡಕುಗಳಿವೆ ಎಂಬುದಾಗಿ ತಜ್ಞರ ಅಭಿಪ್ರಾಯವಾಗಿತ್ತು. ಆದರೆ ಈ ದಿವಸ ಆ ಕಷ್ಟಗಳನ್ನೆಲ್ಲಾ ದಾಟಿ ಮುಂದೆ ಸಾಗಲು ನಮ್ಮ ವಿಶ್ವವಿದ್ಯಾನಿಲಯದವರು ಪ್ರಯತ್ನಗಳನ್ನು ಮಾಡಿದ್ದಾರೆ. ಈ ದಿವಸ ಇನ್‌ಸ್ಟಿಟ್ಯೂಟ್ ಆಫ್ ಕನ್ನಡ ಸ್ಟಡೀಸ್ ಎಂಬ ಸಂಸ್ಥೆಯವರು ಅನೇಕ ಪಠ್ಯ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ, ಮಾಡುತ್ತಿದ್ದಾರೆ. ಅವರು ಈ ಕಾರ್ಯವನ್ನು ಕೈಗೊಂಡಿರುವುದಕ್ಕಾಗಿ ಶ್ಲಾಘನಾರ್ಹರು. ಈ ಹಿಂದೆ ವಿಶ್ವವಿದ್ಯಾನಿಲಯದಲ್ಲಿದ್ದ ಡಾ॥ ಪುಟ್ಟಪ್ಪನವರು ಅನೇಕ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಈ ದಿವಸ ಆ ಕನ್ನಡ ಸ್ಟಡೀಸ್ ಇನ್‌ಸ್ಟಿಟ್ಯೂಷನ್ನಿನವರು ಎಲ್ಲಾ ಪಠ್ಯಪುಸ್ತಕಗಳನ್ನೂ ಅಂದರೆ ಕಾಲೇಜ್ ಮಟ್ಟದ ವಿದ್ಯಾಭ್ಯಾಸಕ್ಕೆ ಬೇಕಾಗುವ ಪಠ್ಯಪುಸ್ತಕಗಳನ್ನೆಲ್ಲಾ ತಯಾರಿಸಲು ಕಾರ್ಯಕ್ರಮ ಕೈಗೊಂಡಿದ್ದಾರೆ. ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಸರ್ಕಾರದವರು ಅವರಿಗೆ ಉದಾರವಾಗಿ ದ್ರವ್ಯ ಸಹಾಯಮಾಡಬೇಕಾದ್ದು ಅತ್ಯಗತ್ಯ. ಆ ಸಂಸ್ಥೆಯಲ್ಲಿ ಬಹಳ ಉನ್ನತ ಮಟ್ಟದ ಪಂಡಿತರಿದ್ದಾರೆ. ಇದಕ್ಕೆ ಬೇಕಾಗತಕ್ಕ ದ್ರವ್ಯ ಸಹಾಯವನ್ನು ನೀಡಿ ಆದಷ್ಟು ತೀವ್ರವಾಗಿ ಇದನ್ನು ಮುಂದುವರಿಸಬೇಕು ಎಂದು ಹೇಳುತ್ತೇನೆ. ನಾವು ನಿರೀಕ್ಷಿದ ಮಟ್ಟದಲ್ಲಿ ದೇಶದ ಆಡಳಿತ ಭಾಷೆ ಮತ್ತು ಶಿಕ್ಷಣ ಮಾಧ್ಯಮ ಮಾತೃಭಾಷೆಯಲ್ಲಿ ನಡೆಯದಿದ್ದರೆ, ಇದು ಆದಷ್ಟು ಬೇಗ ಜನಸಾಮಾನ್ಯರಿಗೆ ಮುಟ್ಟದಿದ್ದರೆ ಮುಂದೆ ಅನೇಕ ಅನರ್ಥಗಳಾಗುತ್ತವೆ. ಅದಕ್ಕೆ ಆಸ್ಪದ ಕೊಡಬಾರದು. ಆದುದರಿಂದ ಅದಷ್ಟು ಜಾಗ್ರತೆಯಾಗಿ ಎಲ್ಲಾ ಪಠ್ಯ ಪುಸ್ತಕಗಳನ್ನು ಅಂದರೆ ಕಾಲೇಜ್ ಮಟ್ಟದಲ್ಲಿ ನಡೆಯತಕ್ಕ ವಿದ್ಯಾಭ್ಯಾಸದ ಶಿಕ್ಷಣಕ್ಕೆ ಅಗತ್ಯವಾದ ಸೈನ್ಸ್ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಬಾಬುಗಳ ಸಬ್‌ಜೆಕ್ಟ್‌ಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಲು ಧೈರ್ಯದಿಂದ

(ಶ್ರೀ ಎಸ್. ಶಿವಪ್ಪ)

ಉನ್ನತಮಟ್ಟದಲ್ಲಿ ಕಾರ್ಯವನ್ನು ಕೈಗೊಳ್ಳಬೇಕೆಂದು ಮೈಸೂರು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಅದನ್ನು ಕಾರ್ಯಗತಮಾಡುವುದಕ್ಕೆ ಬೇರೆ ದೇಶಗಳಲ್ಲಿ ಅದರಲ್ಲಿಯೂ ಮದ್ರಾಸ್ ಮತ್ತು ಪಕ್ಕದ ಪ್ರಾಂತಗಳಲ್ಲಿ ಎಷ್ಟು ತೀವ್ರತೆಯಿಂದ ಆ ವಿಚಾರದಲ್ಲಿ ಮುಂದೆ ಹೋಗುತ್ತಿದ್ದಾರೋ ಅದೇ ತೀವ್ರತೆಯಲ್ಲಿ ಮೈಸೂರು ಸರ್ಕಾರದವರೂ ಸಹ ಹೋಗಬೇಕು ಎಂಬುದಾಗಿ ನಾನು ಅವರಿಗೆ ಸಲಹೆ ಮಾಡುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಒಂದು ದೊಡ್ಡ ಲೋಪ ಇದೆ. ಸಾಮಾನ್ಯ ಜೀವನ ಪರಿಸ್ಥಿತಿಗೆ ಹೊಂದಿಕೊಳ್ಳುವ ವಿದ್ಯಾಭ್ಯಾಸ ಕ್ರಮ ನಮ್ಮ ದೇಶದಲ್ಲಿ ಆಚರಣೆಯಲ್ಲಿಲ್ಲ. ಈ ವಿದ್ಯಾಭ್ಯಾಸ ಕಲಿಯತಕ್ಕ ಒಂದು ಕ್ರಮದಲ್ಲಿ ಏನೇನು ಬದಲಾವಣೆಗಳು ಆಗಬೇಕು ಎನ್ನುವ ವಿಚಾರವನ್ನು ಅನೇಕ ತಜ್ಞರು ತಮ್ಮ ವರದಿಗಳಲ್ಲಿ ಹೇಳಿರುವುದು ನಿಜ. ನಮ್ಮ ದೇಶದಲ್ಲಿ ನಾವು ನೋಡಿದ ಹಾಗೆ ಹಣವನ್ನು ವಿದ್ಯಾಭ್ಯಾಸಕ್ಕಾಗಿ ಬೇಕಾದಷ್ಟು ಖರ್ಚುಮಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳನ್ನು ಮತ್ತು ಖಾಸಗಿ ಏಜೆನ್ಸಿಯಿಂದ ನಡೆಯುತಕ್ಕ ಶಾಲೆಗಳನ್ನು ಈಗ ಹೋಲಿಸಿ ನೋಡಿದರೆ, ಅದರಲ್ಲಿಯೂ ಇವೆರಡರ ವ್ಯತ್ಯಾಸ ಹೇಗಿದೆಯೆಂಬುದನ್ನು ವಿಚಾರ ಮಾಡಿದರೆ, ಇವತ್ತು ಸರ್ಕಾರಿ ಶಾಲೆಗಳು ಅದೇನು ಕಾರಣವೋ ಒಂದು ದೊಡ್ಡ ಛತ್ರ ಅಥವಾ ದೊಡ್ಡಿಯೋಪಾದಿಯಲ್ಲಿರುತ್ತವೆ. ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಸುಮಾರು 17 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗಿನಂತಹ ಸರ್ಕಾರಿ ಪ್ರೈಮರಿ ಶಾಲೆಗಳನ್ನು ನೋಡಿದರೆ ಯಾರಿಗೆ ತಾನೇ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಸಂತೋಷವಾಗುತ್ತದೆಂಬುದನ್ನು ವಿಚಾರಮಾಡಬೇಕು. ಮಕ್ಕಳು ಮನೆಯಲ್ಲಿ ಇದ್ದರೆ ಸುಮ್ಮನೆ ಗಲಾಟೆ ಮಾಡುತ್ತಾರೆಂದು ಶಾಲೆಗಳಿಗಾದರೂ ಹೋಗಿ ಸ್ವಲ್ಪಮಟ್ಟಿಗಾದರೂ ವಿದ್ಯೆ ಕಲಿಯಲಿ ಎಂದು ತಂದೆತಾಯಿಗಳು ಶಾಲೆಗೆ ಕಳುಹಿಸುತ್ತಾರೆ. ಆದರೆ ಅಲ್ಲಿ ಈಗ ಸಿಗತಕ್ಕ ವಿದ್ಯೆ, ಕಲಿಸತಕ್ಕ ವಿದ್ಯೆ ಉಪಾಧ್ಯಾಯರ ತರಪೇತಿ—ಇವುಗಳನ್ನು ನೋಡಿದರೆ ಅಲ್ಲಿ ಮಕ್ಕಳಿಗೆ ನಿಜವಾಗಿ ಸಿಗಬೇಕಾದ ವಿದ್ಯೆ ಸಿಗುತ್ತಾ ಇಲ್ಲ. ಆದ್ದರಿಂದ ಅನೇಕ ಪ್ರೈವೇಟ್ ಏಜೆನ್ಸಿಯವರು ಪ್ರೈಮರಿ ಮತ್ತು ನರ್ಸರಿ ಶಾಲೆಗಳನ್ನು ವಿಶೇಷವಾಗಿ ತೆರೆಯುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಫೀಸ್ ಬಹಳ ಜಾಸ್ತಿ ಎಂದು ಅಲ್ಲಿ ಹೇಳಿದರೂ ಮಕ್ಕಳನ್ನು ಕಳುಹಿಸುತ್ತಾರೆ. ಫೀಸ್ ಅಲ್ಲಿ ಇಷ್ಟ ಬಂದ ಹಾಗೆ ಹಾಕುತ್ತಾರೆ. ಆದರೂ ಕೊಡುತ್ತಾರೆ. ಕಾನ್‌ವೆಂಟ್ ಸ್ಕೂಲ್ ಮತ್ತು ನರ್ಸರಿ ಸ್ಕೂಲುಗಳನ್ನು ಏರ್ಪಾಡು ಮಾಡುವುದು ಒಂದು ಸಂಪಾದನೆ ಮಾರ್ಗವಾಗಿದೆ. ಆದ್ದರಿಂದಲೇ ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿದರೆ ಒಳ್ಳೆಯ ವಾತಾವರಣ ಸಿಗುವುದಿಲ್ಲ. ಶಿಸ್ತು ಸಿಗುವುದಿಲ್ಲವೆಂದು ಎಷ್ಟೇ ಹಣ ಖರ್ಚಾದರೂ ಸರಿಯೇ ಎಂದು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಇಂತಹ ಒಂದೊಂದು ಶಾಲೆಯಲ್ಲಿಯೂ ಒಂದೊಂದು ಮಗುವಿಗೂ ತಿಂಗಳಿಗೆ 20-25-40 ರೂಪಾಯಿಗಳನ್ನು ತೆಗೆದುಕೊಂಡು ಪಾಠ ಹೇಳುತ್ತಿದ್ದಾರೆ. ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ದೊರಕಲಿ ಎಂಬ ಒಂದು ಮುಖ್ಯೋದ್ದೇಶದಿಂದಲೇ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಸರಕಾರಿ ಶಾಲೆಗಳಲ್ಲಿ ಸರಿಯಾದ ಶಿಸ್ತು ಇಲ್ಲ. ಏನು ವಿದ್ಯೆ ಕೊಡಬೇಕೋ ಅಂತಹ ವಿದ್ಯೆ ಇಲ್ಲ. ಇದರಿಂದ ಬಡವರಿಗೆ ಒಳ್ಳೆಯ ವಿದ್ಯೆ ಕಲಿಸುವ ವ್ಯವಸ್ಥೆ ಇವತ್ತು ಅನೇಕರಿಗೆ ಸಿಗುತ್ತಾ ಇಲ್ಲ. ಸುಮಾರು 17-20 ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಸರ್ಕಾರದವರು ಖರ್ಚುಮಾಡಿದರೂ ಏನೂ ಪ್ರಯೋಜನವಿಲ್ಲ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ತರಬೇತಾದ ಉಪಾಧ್ಯಾಯರುಗಳು ಈಗ ಬೇಕು. ಆ ಕೆಲಸವನ್ನು ಮೊದಲು ಸರ್ಕಾರದವರು ಮಾಡದೇ ಹೋದರೆ ಇವರು ಒಂದು ಲಕ್ಷ ಪ್ರಾಥಮಿಕ ಶಾಲೆಗಳನ್ನು ತೆರೆದರೂ ಏನೂ ಪ್ರಯೋಜನವಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಖಾಸಗಿ ಮತ್ತು ಸರ್ಕಾರಿ ಹೈಸ್ಕೂಲುಗಳಲ್ಲಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಅದರಲ್ಲಿಯೂ ಇಡೀ ತಾಲ್ಲೂಕ್ ಲೆವೆಲ್ಲಿನಲ್ಲಿ ಎಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆಂದು ಹೋಲಿಸಿ ನೋಡಿದರೆ ಎಸ್.ಎಸ್.ಎಲ್.ಸಿ. ಯಲ್ಲಿ ಸರಾಸರಿ ಒಂದು ಖಾಸಗಿ ಹೈಸ್ಕೂಲಿನಿಂದ ಸುಮಾರು 200 ಹುಡುಗರು ಪರೀಕ್ಷೆಗೆ ಕಟ್ಟಿದ್ದರೆ ಅವರ ಪೈಕಿ 95 ಜನರು ಉತ್ತೀರ್ಣರಾಗಿರುತ್ತಾರೆ. ಆದರೆ ಸರ್ಕಾರಿ ಹೈಸ್ಕೂಲುಗಳಲ್ಲಿ ಕೇಳುವವರೇ ಇರುವುದಿಲ್ಲ. ಅದರಿಂದಲೇ ಶೇ. 5 ಅಥವಾ 10 ರಷ್ಟು ಮಾತ್ರ ಅಲ್ಲಿ ಪಾಸಾಗುತ್ತಾರೆ. ಖಾಸಗಿ ಶಾಲೆಗಳಲ್ಲಿ ಶೇಕಡ 70, 90, ಒಂದೊಂದು ಸಾರಿ ನೂರಕ್ಕೆ ನೂರರಂತೆಯೂ ಉತ್ತೀರ್ಣರಾಗಿರತಕ್ಕ ಸನ್ನಿವೇಶವನ್ನು ನಾನು ನೋಡಿದ್ದೇನೆ. ಈ ವಿಷಯದಲ್ಲಿ ಸರ್ಕಾರ ತೀವ್ರವಾಗಿ ಯೋಚನೆ ಮಾಡದೇ ಹೋದರೆ ಇವತ್ತು ನಿಜವಾಗಿ ನಮ್ಮ ಹಳ್ಳಿಗಾಡಿನ ಮಕ್ಕಳ ವಿದ್ಯಾಭ್ಯಾಸದಲ್ಲಿ ಬಹಳ ದೊಡ್ಡ ಕೊರತೆ ಉಂಟಾಗುತ್ತದೆ. ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಚೆನ್ನಾಗಿ ನಡೆದು ವಿದ್ಯಾರ್ಥಿಯಾದವನು ಒಳ್ಳೆಯ ಅಂಕವನ್ನು ತೆಗೆದುಕೊಂಡು ಬಂದರೆ ಮುಂದಿನ ವಿದ್ಯಾಭ್ಯಾಸದ ಪ್ರಗತಿಯು ಭವಿಷ್ಯ ಚೆನ್ನಾಗಿ ಸಿಗುತ್ತದೆ. ಅಂತಹ ಕಾಲದಲ್ಲಿ ಇವತ್ತಿನ ದಿವಸ ಬಹುತೇಕವಾಗಿ ಸಾಮಾನ್ಯ

ಜನತೆ ಇರತಕ್ಕ ಹಳ್ಳಿಗಾಡು ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ದೊಡ್ಡ ವಿಪತ್ತು ಆಗಿರುತ್ತದೆ. ಇದನ್ನು ಸರಿಪಡಿಸದೇ ಹೋದರೆ ಮುಂದಿನ ಅವರ ವಿದ್ಯಾ ಪ್ರಗತಿಯು ಹಾಗೂ ಅವರ ಭವಿಷ್ಯಕ್ಕೇ ದೊಡ್ಡ ಹಾನಿ ಉಂಟಾಗುತ್ತದೆ. ಈ ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮಕ್ಕಳನ್ನು ಕಾಲೇಜುಗಳಿಗೆ ಮತ್ತು ತಾಂತ್ರಿಕ ಶಾಲೆಗಳಿಗೆ ಸೇರಿಸುವಾಗ ಅಡ್ಮಿಷನ್ ಬಗ್ಗೆ ಇರತಕ್ಕ ನ್ಯೂನತೆಗಳನ್ನು ಸರಿಪಡಿಸಬೇಕು. ಏಕೆಂದರೆ, ಇವತ್ತು ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜು, ಅದರ ಪಕ್ಕದಲ್ಲಿ ಇರತಕ್ಕ ಸೈನ್ಸ್ ಕಾಲೇಜುಗಳಿಗೆ ಈಗ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದವರಿಗೆ ಪ್ರವೇಶವೇ ಕಷ್ಟವಾಗಿದೆ. ಈಗ ಎರಡು ತರಹ ಕಷ್ಟಗಳಿವೆ. ಒಂದು, 11ನೇ ಸ್ಟಾಂಡರ್ಡಿಗೆ ಹೋಗಬೇಕಾದರೆ ಎಸ್.ಎಸ್.ಎಲ್.ಸಿ. ಯಲ್ಲಿ ಸೇಕಡ 35ರಷ್ಟು ಅಂಕಗಳು ಬರಬೇಕೆಂದು ಹೇಳುತ್ತಾರೆ. ಕಾಲೇಜಿಗೆ ಹೋಗಬೇಕಾದರೆ ಸೇಕಡ 40 ರಷ್ಟಾದರೂ ಅಂಕಗಳು ಬರಬೇಕೆಂದು ಹೇಳುತ್ತಾರೆ. ಇದರಲ್ಲಿ ಯೂನಿವರ್ಸಿಟಿಯವರದೇ ಒಂದು ಕಾನೂನು ಸರ್ಕಾರದವರದೇ ಒಂದು ಕಾನೂನು. ಇದರಲ್ಲಿ ಈಗ ಈ ಎರಡು ದೃಷ್ಟಿ ಏಕೆ? ಪಿ.ಯು.ಸಿ. ಪಾಸ್‌ಮಾಡಿದರೆ ಅಕಾಡಮಿಕ್ ಒಂದು ಸ್ಟಾಂಡರ್ಡ್ ಎಂಬುದಾಗಿ ಹೇಳುತ್ತಾರೆ. ಅಂದಮೇಲೆ 11ನೇ ಸ್ಟಾಂಡರ್ಡ್‌ನಲ್ಲಿಯೂ ಅಷ್ಟೇಮಟ್ಟ ಇರುತ್ತದೆ. ಆದ್ದರಿಂದ 11ನೇ ಸ್ಟಾಂಡರ್ಡಿಗೆ ಒಂದು ಮಟ್ಟ ಕಾಲೇಜಿಗೇ ಒಂದು ಮಟ್ಟವೆಂಬುದಾಗಿ ವಿಶ್ವವಿದ್ಯಾನಿಲಯದವರು ಮಾಡಿರುವುದು ತಪ್ಪು. ಸರ್ಕಾರದವರು ಈ ವಿಷಯದಲ್ಲಿ ಒಂದು ನಿರ್ದಿಷ್ಟ ತೀರ್ಮಾನವನ್ನು ಕೊಡಬೇಕು. ಸರ್ಕಾರದವರು ಮತ್ತು ವಿಶ್ವವಿದ್ಯಾನಿಲಯದವರು ಇಬ್ಬರೂ ಒಂದೇ ಮಟ್ಟ ಎಂಬುದಾಗಿ ಹೇಳಬೇಕು. 11ನೇ ಸ್ಟಾಂಡರ್ಡ್ ಒಂದು ಮಟ್ಟವೆಂದು ಹೇಳುತ್ತಾರೆ. ಪಿ.ಯು.ಸಿ.ಯಲ್ಲಿ ಒಂದು ಮಟ್ಟವೆಂದು ಹೇಳುತ್ತಾರೆ. ಇಂತಹ ದ್ವಿಮುಖ ನೀತಿಯಿಂದ ನಮ್ಮ ಮಕ್ಕಳಿಗೆ ತಾರತಮ್ಯ ಉಂಟಾಗಿದೆ. ಇದನ್ನು ತಪ್ಪಿಸಬೇಕು. ಇದಕ್ಕಿಂತ ಗಂಭೀರವಾದ ಪ್ರಶ್ನೆ ಇನ್ನೊಂದಿದೆ. ಅದು ತಾಂತ್ರಿಕ ಶಾಲೆಗಳಿಗೆ ಒಂದು ಮೆರಿಟ್ ಮೇಲೆ ಅಡ್ಮಿಷನ್ ಮಾಡುವುದು. ಮೆರಿಟ್ ಎಂಬುದು ವಿವಾದಗ್ರಸ್ಥವಾದ ಪ್ರಶ್ನೆ. ಕೊಠಾರಿ ಕಮಿಷನ್ನಿನವರು ಈ ವಿಚಾರವನ್ನು ಅಗಾಧವಾಗಿ ಪರಿಶೀಲನೆ ಮಾಡಿದ್ದಾರೆ. ಇವತ್ತು ಪಾಠಗಳನ್ನು ಬಾಯಿಪಾಠಮಾಡಿಸಿ ಅವನ್ನು ಪುಸ್ತಕದಲ್ಲಿ ಬರೆದರೆ ಅದು ಒಂದು ಮೆರಿಟ್ ಆಗುತ್ತದೆ. ಅದೇ ವ್ಯಕ್ತಿ ತನ್ನ ತಪ್ಪುಗಳನ್ನು ತಿದ್ದಿಕೊಂಡು ಪುಸ್ತಕದಲ್ಲಿ ಬೈಹಾರ್ಟ್‌ಮಾಡಿ ಪಟ್ಟಣದಲ್ಲಿ ಜೀವನಕ್ಕೆ ಯಾವುದಾದರೂ ಒಂದು ಕೆಲಸ ಮಾಡಿಕೊಂಡು ಹೆಚ್ಚು ಅಂಕಗಳನ್ನು ಪರೀಕ್ಷೆಯಲ್ಲಿ ತೆಗೆದುಕೊಂಡರೆ ಅದು ಇನ್ನೊಂದು ರೀತಿಯಲ್ಲಿ ಮೆರಿಟ್ ಆಗುತ್ತದೆ ಎಂದು ಈ ವಿಚಾರಗಳನ್ನು ಬಹಳ ಅಗಾಧವಾಗಿ ಪರಿಶೀಲನೆಮಾಡಿ ವರದಿಯನ್ನೇ ಕೊಟ್ಟಿದ್ದಾರೆ. ಇವತ್ತು ವಿದ್ಯಾಭ್ಯಾಸದಲ್ಲಿರತಕ್ಕ ಒಂದು ದೊಡ್ಡ ಲೋಪವಿದೆ. ಅವೇನೆಂದರೆ, ವಿದ್ಯಾರ್ಥಿಯಾದವನು ತನ್ನ ವಿದ್ಯಾಭ್ಯಾಸ ಮಾಡಿದ ಮೇಲೆ ತನ್ನ ಮುಂದಿನ ಗತಿಯೇನು ಎಂಬ ಬಗ್ಗೆ ಯಾವದಾರಿ ಕಾಣದೆ ದಿಕ್ಕೆಟ್ಟು ಬೀದಿಬೀದಿ ಅಲೆಯುತ್ತಿದ್ದಾನೆ ಎಂಬುದು. ಆತ ತನ್ನ ವಿದ್ಯಾಭ್ಯಾಸದ ಜೊತೆಗೆ ಏನಾದರೂ ಒಂದು ಕೆಲಸವನ್ನು ಮಾಡಿಕೊಳ್ಳುವ ಪ್ರವೃತ್ತಿ, ಕೈ ಕೆಸರು ಮಾಡತಕ್ಕ ಪ್ರವೃತ್ತಿ Earn while you learn ಎಂಬಂತೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಬರುವ ವ್ಯವಸ್ಥೆ ಮಾಡಬೇಕು ಏಕೆಂದರೆ, ಹೊರದೇಶಗಳಲ್ಲಿ ಇಂತಹ ಪದ್ಧತಿ ಇದೆ. ಅವನಿಗೆ ಒಂದು ಫರ್ಮ್‌ನಲ್ಲಾಗಲೀ ಅಥವಾ ಒಂದು ಕೈಗಾರಿಕಾ ಕ್ಷೇತ್ರದಲ್ಲಿ ಆಗಲೀ ಅಥವಾ ಮತ್ತೊಂದು ಕಡೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಕೆಲಸಕೊಟ್ಟು ಕೊನೆಗೆ ಕೇವಲ 5-10 ರೂಪಾಯಿಗಳ ಸಂಬಳವನ್ನಾದರೂ ಕೊಟ್ಟು ಪ್ರಾರಂಭಮಾಡುತ್ತಾರೆ. ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿಯೂ ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಾನು ಕೆಲಸ ಮಾಡುವಂತಹ ಉದ್ಯೋಗವನ್ನು ಕೊಟ್ಟರೆ ಮತ್ತು ಕೇವಲ 1 ಘಂಟೆಗೆ ಒಂದು ರೂಪಾಯಿಯಂತೆ ಕೊಟ್ಟು 2 ಘಂಟೆ ಹೊತ್ತು ಕೆಲಸ ಮಾಡಿದರೂ ಸಾಕು. ತಿಂಗಳಿಗೆ ಸುಮಾರು 50 ರೂಪಾಯಿಗಳವರೆಗಾದರೂ ತಾನೇ ಸಂಪಾದನೆ ಮಾಡಿ ತನ್ನ ವಿದ್ಯೆ ಕಲಿಯುತ್ತಾನೆ. ನಾಳೆ ಅವನಿಗೆ ತಾನು ವಿದ್ಯಾಭ್ಯಾಸದ ಜೊತೆಗೆ ಕೆಲಸಮಾಡಿ ಸಂಪಾದನೆ ಮಾಡತಕ್ಕ ಧೈರ್ಯ ಬರುತ್ತದೆ. ಈ ಪದ್ಧತಿ ನಮ್ಮ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಅತ್ಯಗತ್ಯವಾಗಿದೆ. ಈಗಿನ ವಿದ್ಯಾಭ್ಯಾಸದ ಕ್ರಮದಲ್ಲಿ ರೈತನ ಮಗನಾದವನು ಜಮೀನಿಗೆ ಹೋಗಿ ಕೆಲಸಮಾಡಬೇಕೆಂಬ ಮಮತೆಯನ್ನು ಮರೆತು ಪಟ್ಟಣದಲ್ಲಿ ಗುಮಾಸ್ತಗಿರಿ ಸಿಕ್ಕಿದರೆ ಸಾಕು ಎಂದು ಹೇಳುವ ಸನ್ನಿವೇಶ ಈಗ ಬಂದಿದೆ ಆಫೀಸಿನಲ್ಲಿ ಕೂತು ಕೆಲಸ ಮಾಡುವವರಿಗೆ ಹೊಲ, ಗದ್ದೆಗಳಲ್ಲಿ ಕೆಲಸ ಮಾಡಬೇಕೆಂಬ ಭಾವನೆ ಬರುವುದು ಕಷ್ಟ. ಅದಕ್ಕಾಗಿ ಈಗಿನಿಂದಲೇ ವಿದ್ಯಾಭ್ಯಾಸ ನಡೆಯುವ ಕಾಲದಲ್ಲಿ ಯಾವುದಾದರೂ ಒಂದು ಕೆಲಸವನ್ನು ಕಲಿಸಿ ತನ್ನ ಒಂದು ಉದ್ಯೋಗದ ಮೇಲೆ ತನಗೇ ಪ್ರೀತಿ ಬರುವ ಹಾಗೆ ತಕ್ಕ ಕೆಲಸಗಳನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. Earn while you learn ಎಂದು ಹೇಳುವ ಹಾಗೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದರ ಜೊತೆಗೆ ಸಂಪಾದನೆ ಮಾರ್ಗವನ್ನು ತೋರಿಸುವುದಕ್ಕಾಗಿ ಸರ್ಕಾರದವರು ಹೆಚ್ಚಿನ ಹಣವನ್ನು ಕೈಗಾರಿಕೆಯ ಕ್ಷೇತ್ರಗಳಿಗೆ ಒದಗಿಸಿಕೊಟ್ಟರೆ ವಿದ್ಯಾಭ್ಯಾಸದ

(ಶ್ರೀ ಎಸ್. ಶಿವಪ್ಪ)

ಪ್ರಗತಿಯಲ್ಲಿ ಒಂದು ಒಳ್ಳೆಯ ಕ್ರಮವಾಡಿದ ಹಾಗಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

10-00 A.M.

ನಮಲ್ಲಿ ಮೂರು ವಿಶ್ವವಿದ್ಯಾನಿಲಯಗಳಿವೆ. ಕರ್ನಾಟಕ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ. ನಾಲ್ಕನೆಯದು ವ್ಯವಸಾಯದ ವಿಶ್ವ ವಿದ್ಯಾನಿಲಯ. ಈ ಮೂರು ವಿಶ್ವವಿದ್ಯಾನಿಲಯಗಳಲ್ಲಿಯೂ ಏಕರೂಪತೆ ಇರಬೇಕು ಎನ್ನುವ ವಿಚಾರ ಇದೆ. ಅದು ಆಯಾಯ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ವಿಚಾರ. ಅದ್ದರಿಂದ ಅದನ್ನು ಹೆಚ್ಚಿಗೆ ಪ್ರಸ್ತಾಪ ಮಾಡದಿದ್ದರೂ ಕೂಡ ಒಂದು ವಿಚಾರವನ್ನು ನಾನು ಹೇಳಬೇಕಾಗಿದೆ. ಕಾಲೇಜುಗಳಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಸಂಬಳವನ್ನ ಕೊಡತಕ್ಕ ವಿಚಾರದಲ್ಲಿ ಯು. ಜಿ. ಸಿ. ಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಆ ಉಪಾಧ್ಯಾಯರುಗಳಿಗೆ ಕೊಡತಕ್ಕ ವೇತನದ ಮಟ್ಟ ಹೆಚ್ಚಬೇಕು, ಅದು ಎಲ್ಲಾ ಕಡೆಗೂ ಒಂದೇ ಸಮವಾಗಿರಬೇಕು ಎಂದು ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲ ಈ ವಿಚಾರವನ್ನ ಕಾರ್ಯಗತ ಮಾಡಬೇಕು, ಎಂದು ಹೇಳಿ ಮೈಸೂರು ಯೂನಿವರ್ಸಿಟಿಯಲ್ಲಿರತಕ್ಕ ಎಲ್ಲಾ ಕಾಲೇಜುಗಳಲ್ಲಿಯೂ ಒಂದೇ ಮಟ್ಟದ ವೇತನವನ್ನು ಕೊಡಬೇಕು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮಾನಸ ಗಂಗೋತ್ರಿಯಲ್ಲಿ ವೇತನದ ಮಟ್ಟ ಏನಿದೆ ಅದನ್ನೇ ಯುವರಾಜ ಕಾಲೇಜಿನ ಉಪಾಧ್ಯಾಯರಿಗೂ ಮತ್ತು ಮಹಾರಾಜ ಕಾಲೇಜಿಗೂ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇದರ ಪ್ರಕಾರ ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್ನಿನವರು 80 ಪರ್ಸೆಂಟ್ ಸಹಾಯ ಧನ ಕೊಡು ತ್ತೇವೆಂದು ವಿಶ್ವವಿದ್ಯಾನಿಲಯಗಳಿಗೆ ಕಾಗದವನ್ನು ಕೂಡ ಬರೆದಿದ್ದಾರೆ. ಸರ್ಕಾರದವರು ಈ ಯೋಜನೆಯನ್ನು ಜಾರಿಗೆ ತರಬೇಡಿ ಎಂದು ಒಂದು ಕಾಗದವನ್ನ ಬರೆದಿದ್ದಾರೆಂದು ವರ್ತಮಾನ ಬಂದಿದೆ. ಸರ್ಕಾರದವರು ಏತಕ್ಕೋಸ್ಕರ ಆ ರೀತಿ ಕಾಗದವನ್ನ ಬರೆದಿದ್ದಾರೆ ಎಂಬುದು ಗೊತ್ತಾಗಲಿಲ್ಲ. ಮೈಸೂರಿನ ಮಹಾರಾಜಾ ಮತ್ತು ಯುವರಾಜಾ ಕಾಲೇಜಿನ ಉಪಾಧ್ಯಾಯ ರನ್ನ ಮಾನಸಗಂಗೋತ್ರಿಗೆ ಇಂಟರ್ ಚೇಂಜ್ ಮಾಡಬೇಕೆಂಬ ಉದ್ದೇಶದಿಂದ ಮಾನಸಗಂಗೋತ್ರಿಯ ಉಪಾಧ್ಯಾಯರ ವೇತನದ ಮಟ್ಟವನ್ನೇ ಯುವರಾಜಾ ಕಾಲೇಜು ಮತ್ತು ಮಹಾರಾಜಾ ಕಾಲೇಜಿನ ಉಪಾಧ್ಯಾಯರುಗಳಿಗೂ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಸರ್ಕಾರದವರು ಮುಂದೆ ಬಂದು ತಡೆಕೊಟ್ಟಿದ್ದಾರೆ. ಈ ತಡೆಯನ್ನು ಸರ್ಕಾರದವರು ವಾಪಸ್ಸು ತೆಗೆದುಕೊಂಡು ಸುಗಮವಾಗಿ ಕೆಲಸ ಜರಗುವಂತೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಾರಾಂಗ ಎಂದು ಒಂದು ಮಹಾ ಕಾರ್ಯ ವನ್ನು ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಜ್ಞಾನವನ್ನು ಎಲ್ಲಾ ದೇಶಕ್ಕೂ ಹರಡತಕ್ಕಂಥ ಕೆಲಸ ವನ್ನು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮಾಡುತ್ತದೆ. ಇದನ್ನು ಪಾಶ್ಚಿಮಾತ್ಯ ದೇಶದವರು ಮೆಚ್ಚಿ ಹೊಗಳಿಹೋಗಿದ್ದಾರೆ. ಈ ಪ್ರಸಾರದಲ್ಲ ಚೆನ್ನಾಗಿ ಕೆಲಸ ಮಾಡುವ ದೃಷ್ಟಿಯಿಂದ ಇದನ್ನ ಉತ್ತಮ ಪಡಿಸಬೇಕಾದರೆ ಕನ್ನಡ ಭಾಷೆಗೆ ತರ್ಜುಮೆ ಮಾಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿ ಒಳ್ಳೆಯ ಕೆಲಸ ನಡೆಯುವುದಕ್ಕೆ ಹೆಚ್ಚಿನ ಸಹಾಯವನ್ನ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕೊನೆಯದಾಗಿ ಅಡ್ಮಿಷನ್ ವಿಷಯದಲ್ಲಿ ಒಂದು ಮಾತುಹೇಳಿದರೆ ಇವೊತ್ತು ನಾನು ಮೊದಲೇ ಹೇಳಿದ ಹಾಗೆ ನಮ್ಮ ದೇಶದಲ್ಲಿ ಪ್ರೈಮರಿ ಸ್ಕೂಲುಗಳು, ಹೈಸ್ಕೂಲುಗಳು, ಕಾಲೇಜು ಗಳು, ತಾಂತ್ರಿಕ ಶಿಕ್ಷಣ ಶಾಲೆಗಳು. ತಾಂತ್ರಿಕ ಕಾಲೇಜುಗಳು ಶಿಕ್ಷಣದ ಯಾವ ಮಟ್ಟದಲ್ಲ ನೋಡಿದರೂ ಖಾಸಗಿಯವರು ಪ್ರವೇಶ ಮಾಡಿದ್ದಾರೆ. ಅವರು ಏತಕ್ಕೋಸ್ಕರ ಬರುತ್ತಾರೆ ಎಂದರೆ ಸರ್ಕಾರದ ವತಿಯಿಂದ ನಡೆಯುತ್ತಾ ಇರತಕ್ಕ ಕಾಲೇಜು ವಿದ್ಯಾಭ್ಯಾಸವಾಗಲೀ, ಹೈಸ್ಕೂಲು ವಿದ್ಯಾಭ್ಯಾಸವಾಗಲೀ ಪ್ರಾಥಮಿಕ ವಿದ್ಯಾಭ್ಯಾಸವಾಗಲೀ ಯಾವುದೇ ವಿದ್ಯಾಭ್ಯಾಸವಾಗಲೀ ಅದರ ಮಟ್ಟ ಕಡಿಮೆಯಾಗುತ್ತಿದೆ. ಖಾಸಗೀಯವರು ನಡೆಸತಕ್ಕ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಹೆಚ್ಚುತ್ತಿದೆ. ಇದು ಸ್ವಾಭಾವಿಕ. ಖಾಸಗೀಯವರ ವಿದ್ಯಾ ಸಂಸ್ಥೆಗಳಲ್ಲಿ ಹೇರಳವಾಗಿ ಫೀಜನ್ನು ತೆಗೆದುಕೊಳ್ಳುತ್ತಿದ್ದಾರೆ. ಈಗ ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಗುಲ್ಬರ್ಗ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟು ಬೇಕು ಎಂದರೆ 5 ಸಾವಿರ, 10 ಸಾವಿರ, 15 ಸಾವಿರ

ರೂಪಾಯಿಗಳವರೆಗೂ ತೆಗೆದುಕೊಳ್ಳುತ್ತಿದ್ದಾರೆ. ಇದು ನಾಚಿಕೆಗೇಡಿನ ಪ್ರಸಂಗ: ಸರ್ಕಾರದವರು ಈ ವಿದ್ಯಾ ಸಂಸ್ಥೆಗಳನ್ನ ಪ್ರಾರಂಭ ಮಾಡದೇ ಇರತಕ್ಕ ಸಂದರ್ಭದಲ್ಲಿ ಖಾಸಗೀಯವರು ನಾವು ಮಾಡುತ್ತೇವೆಂದು ಮುಂದೆ ಬರುತ್ತಾರೆ, ನಿಜ. ಇಂಜಿನಿಯರಿಂಗ್ ಕಾಲೇಜಾಗಲೀ, ಮೆಡಿಕಲ್ ಕಾಲೇಜಾಗಲೀ ಸರ್ಕಾರದವರು ಅವರಿಗೆ ಎಕ್ವಿಪ್‌ಮೆಂಟ್ ಮತ್ತು ಬಿಲ್ಡಿಂಗ್ ಇತ್ಯಾದಿಗಳಿಗೆ ಹಣವನ್ನ ಕೊಟ್ಟಮೇಲೆ ಅವರ ಮೇಲೆ ಸರ್ಕಾರದ ಬಿಗಿ ಇರಬೇಕು. ಇವೊತ್ತು ಆ ವಿದ್ಯಾ ಸಂಸ್ಥೆಗಳಲ್ಲಿ ಸರ್ಕಾರದ ಯಾವುದೇ ಹೂಣಿ ಇಲ್ಲ ಯಾವದೇ ಬಿಗಿ ಇಲ್ಲ. ಅವರು ಮಾಡತಕ್ಕ ಕಾರ್ಯಕ್ರಮಕ್ಕೆ ಅವರೇ ಜವಾಬ್ದಾರರು ಅವರು ಯಾವುದೇ ಹಣಕಾಸಿನ ಲೆಕ್ಕ ಪತ್ರ ಸಹಾಯವನ್ನು ಸರ್ಕಾರ ಕೊಟ್ಟಿಲ್ಲ. ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟಿಗೆ 5 ಸಾವಿರ 10 ಸಾವಿರ ರೂಪಾಯಿಗಳನ್ನ ವಸೂಲು ಮಾಡತಕ್ಕ ವಿಚಾರದಲ್ಲಿ ಈ ನಮ್ಮ ಶಾಸನಸಭೆಯಲ್ಲಿ ಅನೇಕ ಪ್ರಶ್ನೆಗಳನ್ನ ಕೇಳಿದ್ದಾರೆ. ಅವರು ತೆಗೆದುಕೊಂಡಂತಹ ಹಣ ಎಲ್ಲಿಗೆ ಹೋಯಿತು? ವಿದ್ಯಾ ಮಂತ್ರಿಗಳು ಹೇಳಲಿ ? ಅವರು ಅದನ್ನ ವಿಚಾರಣೆ ಮಾಡಲಿ ? ಆ ಖಾಸಗೀ ಕಾಲೇಜಿನಲ್ಲಿ ನಡೆಯತಕ್ಕ ವ್ಯವಹಾರವನ್ನು ನೋಡಿದರೆ ಸರ್ಕಾರದವರು ಅದನ್ನು ಏಕೆ ವಶಪಡಿಸಿಕೊಳ್ಳಬಾರದು? ಇವೊತ್ತು ಖಾಸಗೀ ವಿದ್ಯಾ ಸಂಸ್ಥೆಗಳು ವ್ಯಾಪಾರ ಸಂಸ್ಥೆಗಳಾಗಿವೆ. ಅವು ಆರೀತಿ ಆಗಬಾರದು, ವಿದ್ಯಾ ಸಂಸ್ಥೆಗಳು ಮಾರ್ವಾಡಿ ಅಂಗಡಿಗಳಾಗಬಾರದು. ವಿದ್ಯಾ ಸಂಸ್ಥೆಗಳು ದೇಶದಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕು. ಮುಂದೆ ಈ ವಿದ್ಯಾ ಸಂಸ್ಥೆಗಳ ಮೇಲೆ ಒಂದು ಕೆಟ್ಟ ಅಪವಾದ ಬಂದರೆ ಅದು ತುಂಬಾ ನಾಚಿಕೆಗೇಡು. ಆದ್ದರಿಂದ ಸರ್ಕಾರದವರು ಇದನ್ನು ವಿಚಾರಣೆ ಮಾಡಿ ಆ ಸಂಸ್ಥೆಗಳು ಸರಿಯಾದ ಲೆಕ್ಕಪತ್ರಗಳನ್ನು ಇಡುವಂತೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿರತಕ್ಕ ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲಿ ದುಡ್ಡು ಅಪವ್ಯಯವಾಗುತ್ತಿದೆ. ಅನ್ಯಾಯವಾಗುತ್ತಿದೆ ಎನ್ನು ನಮ್ಮ ಗಮನಕ್ಕೆ ಬಂದಿವೆ. ಮೈಸೂರು ವಿಶ್ವವಿದ್ಯಾನಿಲಯದವರು ಒಂದು ಎನ್‌ಕ್ವೈರಿ ಕಮಿಟಿ ಮಾಡಿ ಈಗ 2 ವರ್ಷಗಳ ಹಿಂದೆ ಮಣಿಪಾಲಿಗೆ ಕಳುಹಿಸಿಕೊಟ್ಟಾಗ ನಾನು ಆ ಕಮಿಟಿಯ ಸದಸ್ಯನಾಗಿ ಅಲ್ಲಿಗೆ ಹೋಗಿದ್ದೆ. ಅಲ್ಲ ಯಾವ ಯಾವ ತರಹ ಲೆಕ್ಕವನ್ನಿಟ್ಟಿದ್ದಾರೆಂದು ನೋಡಿ ನನಗೆ ಆಶ್ಚರ್ಯವಾಯಿತು. ಅವರು ಯಾವರೀತಿ ಲೆಕ್ಕವನ್ನ ಇಟ್ಟಿದ್ದಾರೆ ಎಂದರೆ ಅವರ ಲೆಕ್ಕದ ಪ್ರಕಾರ ಒಬ್ಬ ಹುಡುಗನಿಗೆ ಆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಬೇಕು ಎಂದರೆ 12 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕು. ಒಂದು ಸೀಟಿಗೋಸ್ಕರ ಮೊದಲೇ 4½–5 ಸಾವಿರ ರೂಪಾಯಿಗಳನ್ನು ಕೊಟ್ಟು ರಿಜಿಸ್ಟರ್ ಮಾಡಿಸುತ್ತಾರೆ. ಆಮೇಲೆ 5-6 ವರ್ಷಗಳಾದ ಮೇಲೆ ಆ ಹುಡುಗನನ್ನು ಬಾ ಎಂದು ಹೇಳುತ್ತಾರೆ. ಆನಂತರ ಆ ಹುಡುಗ ಕಾಲೇಜಿಗೆ ಕೂಡಲೇ ಸೇರಬೇಕಾದರೆ 7 ಸಾವಿರ ರೂಪಾಯಿಗಳನ್ನು ಜಾಸ್ತಿ ಕೊಡಬೇಕು. ಇದು ಯಾವ ಲೆಕ್ಕಕ್ಕೆ ಹೋಗುತ್ತದೆ? ಈ ಹಣ ನಿಜವಾಗಿಯೂ ದ್ರೋಹದಿಂದ ಬಂದಿರತಕ್ಕ ಹಣ. ಇದು ನಾಚಿಕೆಗೇಡಿನ ಪ್ರಸಂಗ. ಅವಮಾನದ ಪ್ರಸಂಗ. ವಿದ್ಯಾಭ್ಯಾಸಕ್ಕೆ ಅವಮಾನ ಮಾಡಿದಂತಾಗುತ್ತದೆ. ಇದನ್ನು ಸರ್ಕಾರದವರು ವಿಚಾರಣೆ ಮಾಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಅಡ್ಮಿಷನ್ ವಿಚಾರದಲ್ಲಿ ಹೇಳುವುದಾದರೆ ಇಂಜಿನಿಯರಿಂಗ್ ಕಾಲೇಜ್, ಮೆಡಿಕಲ್ ಕಾಲೇಜುಗಳಲ್ಲಿ ಅಡ್ಮಿಷನ್ ಮಾಡುವುದಕ್ಕಾಗಿ ಒಂದು ಅಡ್ಮಿಷನ್ ಕಮಿಟಿ ಮಾಡಿದ್ದಾರೆ ಅವರಿಗೆ ಏನು ಆದೇಶವನ್ನು ಕೊಟ್ಟಿದ್ದಾರೆ, ಅವರು ಯಾವ ಮಾರ್ಗವನ್ನು ಅನುಸರಿಸುತ್ತಿದ್ದಾರೆ, ಅದರಿಂದ ಯಾರಿಗೆ ಒಳ್ಳೆಯದಾಗುತ್ತಿದೆ ಎಂದರೆ ಅದರಲ್ಲಿ ಎರಡು ತರಹ ಇದೆ. ಒಂದು ದೊಡ್ಡ ಬಂಡವಾಳಗಾರರಿಗೆ ಅನುಕೂಲವಾಗುತ್ತದೆ. ಇನ್ನೊಂದು ಜ್ಞಾನ ಭಂಡಾರವೇ ನಮ್ಮದು ಎಂದು ಹೇಳತಕ್ಕ ಪ್ರಿವಿಲೇಜ್ಡ್ ಕ್ಲಾಸಿನವರಿಗೆ ಅನುಕೂಲವಾಗುತ್ತದೆ. ಒಬ್ಬ ಬಡ ರೈತ 10 ಸಾವಿರ ರೂಪಾಯಿಗಳನ್ನು ಕೊಟ್ಟು ತನ್ನ ಮಗನನ್ನ ದಾವಣಗೆರೆ ಮೆಡಿಕಲ್ ಕಾಲೇಜಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸಬೇಕೆಂದರೆ ಅವನಿಗೆ ಅದು ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಜ್ಞಾನ ಭಂಡಾರವನ್ನು ಹೊಂದಿರತಕ್ಕವರ ಮಕ್ಕಳಿಗೆ 100ಕ್ಕೆ 80–90 ನಂಬರುಗಳು ಬಂದರೆ ಅವರು ಡಾಕ್ಟರೋ ಅಥವಾ ಇಂಜಿನಿಯರೋ ಆಗಬಹುದು. ಆದರೆ ಬಡ ರೈತರ ಮಕ್ಕಳಿಗೆ ಅದು ಹೇಗೆ ಸಾಧ್ಯವಾಗುತ್ತದೆ? ಜ್ಞಾನ ಭಂಡಾರ ಕೇಂದ್ರೀಕೃತವಾಗಿರತಕ್ಕ ವರ್ಗ ಏನಿದೆ ಅವರಿಗೆ ಸಮಾಜದಲ್ಲಿ ಏನು ಮಾಡಬೇಕು ಎನ್ನುವ ಪ್ರಾಮುಖ್ಯವಾದ ಪ್ರಶ್ನೆಯನ್ನು ಇಟ್ಟುಕೊಂಡಿರತಕ್ಕ ಸಮಯದಲ್ಲಿ ಈ ಅಡ್ಮಿಷನ್ನಿಗೆ ಒಂದು ಕಮಿಟಿಯನ್ನು ಮಾಡಿದ್ದಾರೆ, ಆರ್ಥಿಕವಾಗಿಯೂ, ಮತ್ತು ಸಾಮಾಜಿಕವಾಗಿಯೂ ಹಿಂದುಳಿದವರಿಗೆ ನಿಗಾ ಕೊಡಬೇಕೆಂದು ಆ ಕಮಿಟಿಯಲ್ಲಿ ಇಂಟರ್‌ವ್ಯೂ ಅಂಕಪದ್ಧತಿಯನ್ನು ಇಟ್ಟಿದ್ದರು. ಈಗ ಅದನ್ನು ತೆಗೆದುಹಾಕಿದ್ದಾರೆ. ಈ ಇಂಟರ್‌ವ್ಯೂ ಅಂಕ ಪದ್ಧತಿಯನ್ನು ರದ್ದು ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಎಲ್ಲದರಲ್ಲಿಯೂ ಸಮಾನತೆ ಬರಬೇಕೆಂದು ಸಮಾಜದ ವ್ಯವಸ್ಥೆಯ ಮುಖ್ಯ ಗುರಿ ಇದೆ. ಆದರೂ ಸಹ ಕೆಲವರಿಗೆ

(ಶ್ರೀ ಎಸ್. ಶಿವಪ್ಪ)

ಅನೇಕ ರೀತಿಯಲ್ಲಿ ಪ್ರಿವಿಲೇಜ್ ಇದೆ. ಇದನ್ನು ತಪ್ಪಿಸಬೇಕಾದರೆ ಇಂಟರ್‌ವ್ಯೂ ಮಾರ್ಕ್ಸ್ ಕೊಡತಕ್ಕ ಕ್ರಮದಲ್ಲಿ ನೂರಕ್ಕೆ ಇಪ್ಪತ್ತೈದು ಅಷ್ಟು ಸಮಾಜದಲ್ಲಿ ಹೀನಸ್ಥಿತಿಯಲ್ಲಿ ಇರತಕ್ಕಂಥ ವರ್ಗದವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ಕ್ರಮವನ್ನು ಅನುಸರಿಸಬೇಕು. ಇಲ್ಲದಿದ್ದರೆ ಹಿಂದುಳಿದ ವರ್ಗದವರಿಗೆ ಅನುಕೂಲವಾಗುವುದಿಲ್ಲ. ವಿದ್ಯಾಭ್ಯಾಸದ ಕ್ರಮ ತೆಗೆದುಕೊಂಡರೆ ಕೋಟಾರಿ ವರದಿಯಲ್ಲಿ ಈ ವಿಚಾರವಾಗಿ ನಾಲ್ಕು ಮಾತು ಹೇಳಿದ್ದಾರೆ. ಅದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಓದಿ ತೋರಿಸುತ್ತೇನೆ.

> "To re-evaluate the role of education in the development programme of national development, to identify the changes needed in the existing system of education if it is to play its proper role, and to prepare a programme of educational development based on them and to implement this programme with determination and vigour."

ಧೈರ್ಯದಿಂದ ಇಂಥ ಕ್ರಾಂತಿಕಾರಕ ಬದಲಾವಣೆ ಮಾಡದೇ ಹೋದರೆ ಈ 33 ಕೋಟಿ ಇಷ್ಟೇ ಅಲ್ಲ, ಇನ್ನೂ ಹತ್ತು ಕೋಟಿ ಹೆಚ್ಚು ಖರ್ಚು ಮಾಡಿದರೂ ಕೂಡ ಇಂಥ ವಿದ್ಯಾಭ್ಯಾಸದ ಕ್ರಮದಿಂದ ಏನೂ ಪ್ರಯೋಜನವಾಗುವುದಿಲ್ಲ. ಇಂಥ ಕ್ರಾಂತಿಕಾರಕ ಬದಲಾವಣೆ ಮಾಡತಕ್ಕಂಥ ಯಾವ ಸಲಹೆಗಳೂ ಇದರಲ್ಲಿ ಇಲ್ಲದೇ ಇರುವುದರಿಂದ ಈ ವಿದ್ಯಾಭ್ಯಾಸದ ಇಲಾಖೆಯ ಬೇಡಿಕೆಗೆ ವಿರೋಧ ಮಾಡಬೇಕಾಗುತ್ತದೆ.

Sri K. PUTTASWAMY (Minister for Health and Housing) : The Hon'ble the Leader of the Opposition made a remark that doing away with interview marks has affected certain class of students. Sir, I got the question examined. Three years marks of students, who have been able to get admission to Medical Colleges both at the examination and at the interview were put into the hands of the Statisticians. They have worked out that the marks obtained by students at the interview bear the same ratio as the marks obtained at the examination and their inference was that the interview conferred neither advantages or disadvantages to the students. Therefore, it was decided to do away with the interview marks.

ಶ್ರೀ ಸಿದ್ದಯ್ಯ ಕಾಶೀಮಠ.—ಸೆಲೆಕ್ಷನ್ ಮಾಡುವಾಗ ಲೇಡಿ ಕ್ಯಾಂಡಿಡೇಟ್‌ಗಳಿಗೆ ಪ್ರಿಫರನ್ಸ್ ಕೊಡಬೇಕು ಎಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಲೇಡಿ ಡಾಕ್ಟರುಗಳಿಗೆ ಅವಕಾಶವಿರುವುದಿಲ್ಲ.

Sri H. SIDDAVEERAPPA.—The ladies will take care of themselves because they stand on a better competition than any other class. The point is, the Hon'ble Minister said by way of comparison it was found that it was of no advantage. I do not know what the basis is. If I remember correct, it was meant to give a sort of weightage to those who are economically or socially backward.

Sri K. PUTTASWAMY.—That presumption is not correct.

Sri S. SIVAPPA.—The cases of economically and socially backward classes should be considered.

Sri K. PUTTASWAMY.—If by chance, the Leader of the Opposition is made a Judge, I am sure, he will be able to help the backward classes.

Sri S. SIVAPPA.—Let us sit together and find out a formula.

ಶ್ರೀ ಎಸ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕಂಥ 17ನೇ ಬೇಡಿಕೆ ಪ್ರಕಾರ 1967-68ನೇ ಸಾಲಿನಲ್ಲಿ ವಿದ್ಯಾಭ್ಯಾಸಕ್ಕೆ 33 ಕೋಟಿ ರೂಪಾಯಿ ಖರ್ಚು ಮಾಡತಕ್ಕಂಥದ್ದನ್ನು ನಾನು ಸ್ವಾಗತಿಸುತ್ತಾ ಕೆಲವು ಅಂಕಿ ಅಂಶ ಗಳನ್ನು ನೋಡಿದರೆ ವಿರೋಧ ಪಕ್ಷದವರು ಹೇಳಿದ ರೀತಿಯಲ್ಲಿ ನಾವು ಹಿಂದುಳಿದಿಲ್ಲ ಎಂದು ಹೇಳುತ್ತೇನೆ. ಇತರ ಸಂಸ್ಥಾನಗಳೊಂದಿಗೆ ನಮ್ಮ ಸಂಸ್ಥಾನವನ್ನು ಹೋಲಿಸಿ ನೋಡಿದರೆ ನಮ್ಮಲ್ಲಿ ಇರತಕ್ಕಂಥ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ತಾಂತ್ರಿಕ ಕಾಲೇಜುಗಳು ಬಹಳ ಹೆಚ್ಚಾಗಿ ಇವೆ. ಅನೇಕ ರಾಜ್ಯಗಳ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಈ ಅನುಕೂಲ ಪಡೆಯುತ್ತಿದ್ದಾರೆ. ಬೇರೆ ರಾಜ್ಯದಲ್ಲಿ 50 ಲಕ್ಷ ಪ್ರಜಾ ಸಂಖ್ಯೆಗೆ ಒಂದು ಮೆಡಿಕಲ್ ಕಾಲೇಜು ಇದ್ದರೆ ನಮ್ಮ ರಾಜ್ಯದಲ್ಲಿ 28 ಲಕ್ಷ ಪ್ರಜಾ ಸಂಖ್ಯೆಗೆ ಒಂದು ಮೆಡಿಕಲ್ ಕಾಲೇಜು ಇವೆ ಎಂದು ತಿಳಿದುಬಂದಿದೆ. ಇದನ್ನು ವಿಚಾರದಲ್ಲಿ ತೆಗೆದುಕೊಂಡು ವಿದ್ಯಾಭ್ಯಾಸಕ್ಕೆ ನಮ್ಮ ಸಂಸ್ಥಾನದಲ್ಲಿ ಸರಕಾರವು ಖರ್ಚು ಮಾಡತಕ್ಕಂಥದ್ದನ್ನು ಹೋಲಿಸಿದರೆ ಒಟ್ಟು ಬಜೆಟ್ಟಿನ ಐದನೇ ಒಂದು ಭಾಗ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತೇವೆ. ಖರ್ಚು ಮಾಡತಕ್ಕಂಥ ಹಣ ಎಷ್ಟು ಇದ್ದರೂ ದೇಶದಲ್ಲಿ ಕೆಲವು ಸುಧಾರಣೆಗಳು ಆಗಬೇಕು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬಂದಮೇಲೆ ಹಳ್ಳಿಗಾಡಿನಲ್ಲಿ ಬಹಳ ಅನುಕೂಲವಾಗಿದೆ. ಇದು ಪ್ರಾರಂಭವಾದ ಮೇಲೆ ಅಲ್ಲಲ್ಲಿ ಶಾಲಾ ಕಟ್ಟಡಗಳು ಆಗುತ್ತಿವೆ. ಅನೇಕ ಕಡೆ ರೈತರು ಸಹಕಾರ ಕೊಟ್ಟು ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲ. ಕಡ್ಡಾಯ ಶಿಕ್ಷಣ ಜಾರಿಗೆ ಬಂದಮೇಲೆ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಹಳ್ಳಿಗಾಡಿನಲ್ಲಿ ಪ್ರಾಥಮಿಕ ಶಿಕ್ಷಣ ಶಾಲೆಗೆ ಬೇಕಾದ ಕಟ್ಟಡ ಕಟ್ಟಿಸಿಕೊಡಬೇಕೆಂದು ಈ ಮಾನ್ಯ ಸಭೆಯ ಮೂಲಕ ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತುರ್ತು ಪರಿಸ್ಥಿತಿ ಇರುವುದರಿಂದ ಕಟ್ಟಡ ನಿರ್ಮಾಣದ ಕೆಲಸ ನಿಧಾನವಾಗಿದೆ. ಪಾಕಿಸ್ಥಾನ ಮತ್ತು ಚೈನಾದೊಂದಿಗೆ ಎರಡು ಯುದ್ಧಗಳನ್ನು ಎದುರಿಸಬೇಕಾದ ನಂತರ ಕಟ್ಟಡ ಕೆಲಸ ಅತಿ ವೇಗದಿಂದ ಆಗುತ್ತಿಲ್ಲ. ಕೆಲವು ಕಾಲ ಕಾಯಬೇಕಾಗಿದೆ. ವಾಸ್ತವಾಂಶ ಈ ರೀತಿ ಇದ್ದರೂ ಅನೇಕ ಕಡೆ ಜೋಪಡಿ ಹಾಕಿಕೊಂಡು ವಿದ್ಯಾಭ್ಯಾಸ ಕೊಡುತ್ತಾರೆ. ಅದನ್ನು ಮಾಡಬೇಕು. ಲೋಕೋಪಯೋಗಿ ಇಲಾಖೆಯವರು ಸ್ಥಳದಲ್ಲಿ ದೊರೆಯುವ ಮಾಲು, ಕಲ್ಲುಚಪ್ಪಡಿ ಉಪಯೋಗಿಸಿಕೊಂಡು ಕಟ್ಟಡ ಮಾಡುವುದಕ್ಕೆ ಅವಕಾಶವಿದೆ. ನಾಲ್ಕೂವರೆ ಸಾವಿರ ರೂಪಾಯಿ ಟೈಪ ಡಿಸೈನ ಸ್ಕೂಲು ಕಟ್ಟಡ ಇರುವುದನ್ನು ಕಟ್ಟಡ ಕಟ್ಟಲು ಎರಡು ಎರಡೂವರೆ ಸಾವಿರ ರೂಪಾಯಿ ಖರ್ಚಿನಲ್ಲಿ ಕಟ್ಟಡ ನಿರ್ಮಿಸಬಹುದು. ಸರಕಾರ ಕೊಡತಕ್ಕಂಥ ಒಂದು ಸಾವಿರ, ಸ್ಥಳದವರು ಒಂದೂವರೆ ಸಾವಿರ ರೂಪಾಯಿ ಕೊಟ್ಟು ಮಾಡಿದರೆ ಪ್ರೈಮರಿ ಸ್ಕೂಲು ಕಟ್ಟಡ ನಿರ್ಮಾಣವಾಗುತ್ತದೆ. ತಾಲ್ಲೂಕ ಬೋರ್ಡು ಈ ಹಣ ಕೊಡುತ್ತದೆ. ಆದುದರಿಂದ ಈ ವಿಷಯದಲ್ಲಿ ಸರಕಾರ ತೀವ್ರ ಗಮನ ಕೊಟ್ಟು ಆದಷ್ಟು ಜಾಗ್ರತೆ ಕಟ್ಟಡ ಕೆಲಸ ಮಾಡಿಸಬೇಕು. ದೇವಸ್ಥಾನದಲ್ಲಿ ಪವಿತ್ರ ವಾತಾವರಣ ಉಂಟುಮಾಡಲು ಅಚ್ಚುಕಟ್ಟಾಗಿ ಇಡುವ ಹಾಗೆ ಸರಿಯಾದ ಸ್ಕೂಲು ಕಟ್ಟಡ ಅದೇ ರೀತಿಯಲ್ಲಿ ಕಟ್ಟಬೇಕು. ಶಾಲಾ ಕಟ್ಟಡ ಕೂಡ ದೇವಸ್ಥಾನ ಇದ್ದಂತೆ ಇರುತ್ತದೆ. ಆದುದರಿಂದ ಅನುಕೂಲ ಕಲ್ಪಿಸಿಕೊಡುವುದಕ್ಕೆ ಸರಕಾರ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಮುಖ್ಯವಾಗಿ ಈ ದಿವಸ ಪ್ರೈಮರಿ ಶಾಲೆಗಳನ್ನು ತಾಲ್ಲೂಕು ಬೋರ್ಡಿಗೆ ವಹಿಸಿದ ನಂತರ ಸರ್ಕಾರಿ ಸ್ಕೂಲು ರಿಪೇರಿ ಮಾಡಬೇಕು ಎಂದಮೇಲೆ ಅದಕ್ಕೆ ಸರ್ಕಾರದಿಂದ ಬರತಕ್ಕ ವಾರ್ಷಿಕ ಗ್ರಾಂಟ್ ಏನಿದೆ ಅದನ್ನು ಡಿಸೆಂಬರ್ ತಿಂಗಳಲ್ಲಿ, ಜನವರಿ ತಿಂಗಳಲ್ಲಿ ಕೊಡುತ್ತಾರೆ. ಸಾಮಾನ್ಯ ವಾಗಿ ಯಾವುದೇ ಗ್ರಾಂಟ್ ಆಗಲೀ ಖರ್ಚಾಗದೆ ಲ್ಯಾಪ್ಸ್ ಆಗುತ್ತಿದೆ ಎನ್ನುವ ಟೀಕೆಗಳು ಹೆಚ್ಚಿವೆ. ವರ್ಷದ ಕೊನೆಯೊಳಗೆ ಈ ಗ್ರಾಂಟುಗಳನ್ನು ಕೊಡುವುದರಿಂದ ಅವು ಲ್ಯಾಪ್ಸ್ ಆಗತಕ್ಕ ಪ್ರಶ್ನೆ ಬರುತ್ತದೆ. ಜನವರಿ, ಫೆಬ್ರವರಿ ತಿಂಗಳಲ್ಲಿ ಗ್ರಾಂಟ್ ಕೊಟ್ಟು ಎಷ್ಟು ರಿಪೇರಿ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಿ, ಎಷ್ಟು ಕಟ್ಟಡಗಳನ್ನಾದರೂ ಮಾಡಿ ಎಂದು ವರ್ಷೇ ವರ್ಷೇ ಹೇಳುತ್ತಿದ್ದಾರೆ. ಕೊನೇ ಘಳಿಗೆಯಲ್ಲಿ ಗ್ರಾಂಟ್ ಕೊಡುವುದು ತಪ್ಪಿ, ಅವನ್ನು ಪ್ರಾರಂಭದಲ್ಲಿಯೇ ಕೊಟ್ಟರೆ ಅನೇಕ ತರಹ ಕೆಲಸಗಳು ನ್ಯಾಯವಾಗಿ ನಡೆಯುತ್ತದೆ. ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ನೋಡಿದ್ದೇನೆ, ಫೆಬ್ರವರಿ, ಮಾರ್ಚಿ ತಿಂಗಳನಲ್ಲಿ 10 ಸಾವಿರ, 20 ಸಾವಿರ ರೂಪಾಯಿ ಗಳನ್ನು ಕೊಟ್ಟು ಖರ್ಚು ಮಾಡಿ ಎಂದು ಹೇಳತಕ್ಕ ಪ್ರಸಂಗ ಬರುತ್ತದೆ. ಆ ಕಾಲದಲ್ಲಿ ಹಣ ಖರ್ಚು ಮಾಡೋಣ ಎಂದು ಏನಾದರೂ ರಿಪೇರಿ ಮಾಡೋಣ, ಶಾಲಾ ಕಟ್ಟಡಗಳ ನಿರ್ಮಾಣ ಮಾಡೋಣ ಎಂದರೆ ಅದು ಸರಿಯಾಗಿ ವಿನಿಯೋಗವಾಗದೆ ಹಣ ಪೋಲಾಗುವ ಪ್ರಸಂಗ ಬಂದಿದೆ. ತಾಲ್ಲೂಕು ಬೋರ್ಡುಗಳಲ್ಲಿ ಎಲ್ಲ ಕಡೆಯೂ ಹಣದ ಅಭಾವವಿದೆ ಎಂದು ಕಾಣುತ್ತದೆ. ಪ್ರತಿಯೊಂದು ಪ್ಲಾನ್,

(ಶ್ರೀ ಎನ್. ಚಿಕ್ಕೇಗೌಡ)

ಸ್ಕೀಂ, ನಾನ್ ಪ್ಲ್ಯಾನ್ಡ್ ಸ್ಕೀಂ ಮೇಲೆ ವರ್ಷದ ಪ್ರಥಮದಲ್ಲಿ ಆಯವ್ಯಯವನ್ನು ಮಂಜೂರು ಮಾಡಿ, ಸಂಬಂಧಪಟ್ಟ ಖಾತೆಗಳಿಗೆ ಮತ್ತು ಮಂಡಲಗಳಿಗೆ ಕೂಡಲೇ ಕೊಟ್ಟರೆ ಎಷ್ಟೋ ಕೆಲಸ ಮಾಡಿಸುವುದಕ್ಕೆ ಅವಕಾಶವಿದೆ. ಇದರ ಕಡೆ ಸರ್ಕಾರ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಶಾಲಾ ಉಪಾಧ್ಯಾಯರುಗಳ ಮಟ್ಟ ಹೆಚ್ಚಲು ಅವರಿಗೆ ಉತ್ತಮ ಮಟ್ಟದಲ್ಲಿ ತರಪೇತಿ ಕೊಡಬೇಕಾಗಿದೆ. ಅನೇಕ ಶಾಲೆಗಳಲ್ಲಿರುವ ಉಪಾಧ್ಯಾಯರುಗಳಲ್ಲಿ ಕೆಲವರು ಅದರಲ್ಲಿಯೂ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರುಗಳ ವಿಷಯದಲ್ಲಿ ಹೇಳಬೇಕಾಗಿದೆ. ಸ್ಥಳದವರು ಉಪಾಧ್ಯಾಯರಾಗಿ ಸೇರಿಕೊಂಡು ಅನೇಕರು ರಾಜಕೀಯ ಮಾಡುತ್ತ, ಶಾಲೆಯನ್ನು ಮಾಡದೆ ವ್ಯವಸಾಯ ಮಾಡಿಕೊಂಡು ತಮ್ಮ ಮನೆ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಬೆಂಗಳೂರು ಜಿಲ್ಲೆಯ ವಿಚಾರ ಹೇಳುವುದಾದರೆ 15-20 ವರ್ಷವಾದರೂ ಒಂದೇ ತಾಲ್ಲೂಕಿನಲ್ಲಿರುವ ಎಷ್ಟೋ ಜನ ಉಪಾಧ್ಯಾಯರಿದ್ದಾರೆ. ಕೆಲವರಂತೂ 20-25 ವರ್ಷ ಅಥವಾ ತಮ್ಮ ಪೂರ್ತಿ ಸರ್ವೀಸನ್ನೆಲ್ಲಾ ಒಂದೇ ಕಡೆ ಕಳೆದಿರುವ ಪ್ರಸಂಗಗಳೂ ಇವೆ. ಅವರು ರಾಜಕೀಯದಲ್ಲಿ, ಯಾವುದೇ ಪಕ್ಷದಲ್ಲಿ ಸೇರಿರುತ್ತಾರೆ. ರಾಜಕೀಯದಲ್ಲಿ ಪ್ರವೇಶಿಸಿರುವುದಲ್ಲದೆ ವ್ಯವಸಾಯ ಮಾಡುವುದು, ಅಂಗಡಿ ಇಟ್ಟುಕೊಂಡಿರುವುದು ಇದನ್ನೆಲ್ಲಾ ಮಾಡಿ ಶಾಲೆಗಳನ್ನು ಸರಿಯಾಗಿ ನಡೆಸದೆ, ಅಲ್ಲಿ ಕೆಲಸಕಾರ್ಯ ಗಳನ್ನು ಮಾಡದೆ, ಶಾಲೆಯನ್ನು ತೆಗೆಯದೆ ಇರತಕ್ಕ ಪ್ರಸಂಗಗಳೂ ಇವೆ. ಹಿಂದೆ ಒಬ್ಬ ಸ್ಕೂಲ್ ಇನ್‌ಸ್ಪೆಕ್ಟರ್ ಬರುತ್ತಾರೆ ಎಂದರೆ ಅವತ್ತಿನ ದಿವಸ ಸ್ಕೂಲು ತೆಗೆಯುತ್ತಿದ್ದರು. ಇವತ್ತಿನ ದಿವಸ ಸ್ಕೂಲ್ ಇನ್‌ಸ್ಪೆಕ್ಟರ್ ಹೋದರೂ ಅದಕ್ಕೆ ಹೆಚ್ಚು ಗಮನ ಕೊಡದೆ ಇರುವ ಪ್ರಸಂಗಗಳಿವೆ. ಇವೆಲ್ಲಾ ಮಾನ್ಯ ಮಂತ್ರಿಗಳ ಗಮನಕ್ಕೆ ಬಾರದೆ ಇರಬಹುದು. ಅವರೂ ಸಹ ಹಲವಾರು ವಿದ್ಯಾ ಸಂಸ್ಥೆಗಳನ್ನು ನಡೆಸಿದವರು. ಆಯಾ ತಾಲ್ಲೂಕಿನ ಉಪಾಧ್ಯಾಯರನ್ನು ಅಲ್ಲಿಯೇ ಇಟ್ಟುಕೊಂಡಿರು ವುದರಿಂದ ಪ್ರಯೋಜನವಿಲ್ಲ. ಏನೇ ಆಗಲಿ ಉಪಾಧ್ಯಾಯರನ್ನು ಬೇರೆ ತಾಲ್ಲೂಕುಗಳಿಗೆ ಹಾಕಿದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇನೆ.

ಪ್ರಾಥಮಿಕ ಶಾಲೆಗಳಿಗೆ ಬೇಕಾದ ಭೂಪಟ, ಅಲ್ಲಿಗೆ ಬೇಕಾದ ಕುರ್ಚಿ, ಬೆಂಚು ಇವುಗಳನ್ನು ನೀಡುವುದರಲ್ಲಿ ಬಹಳ ತೊಂದರೆಯಾಗಿದೆ. ಅವುಗಳನ್ನು ಸರ್ಕಾರದವರು ಅತಿ ಶೀಘ್ರವಾಗಿ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಸೆಕೆಂಡರಿ ವಿದ್ಯಾಭ್ಯಾಸದ ವಿಷಯ ಹೇಳುವುದಾದರೆ ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಲ್ ಹೈಸ್ಕೂಲುಗಳನ್ನು ಅನೇಕ ತಾಲ್ಲೂಕು ಬೋರ್ಡಿನವರು ನಡೆಸತಕ್ಕುದು ಸರ್ಕಾರ ದವರ ಗಮನಕ್ಕೆ ಬಂದಿದೆ. ಅದಕ್ಕೆ ಅನುಮತಿಯೂ ಇದೆ. ಅವುಗಳಲ್ಲಿ ಇವತ್ತಿನ ದಿವಸ ಚೆಕ್ ಸಿಸ್ಟಂ ತಂದು ಉಪಾಧ್ಯಾಯರುಗಳಿಗೆ ಡಿ. ಇ. ಓ. ಆಫೀಸು ಮೂಲಕ ಕೌಂಟರ್‌ಸೈನ್ ಮಾಡಿಸಿ ಸಂಬಳವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರಿಂದ ಉಪಾಧ್ಯಾಯರಿಗೆ ಅನುಕೂಲ ವಾಗಿದೆ. ಕೆಲವು ಖಾಸಗಿಯವರು ಮತ್ತು ಇತರರು 150 ರೂಪಾಯಿ, 200 ರೂಪಾಯಿ ಸಂಬಳ ವಿದ್ದರೆ ಅಷ್ಟಕ್ಕೆ ರುಜು ಹಾಕಿಸಿಕೊಂಡು 100 ರೂಪಾಯಿಗಳನ್ನು ಉಪಾಧ್ಯಾಯರಿಗೆ ಕೊಟ್ಟು ಮಿಕ್ಕ ಹಣವನ್ನು ಮ್ಯಾನೇಜ್‌ಮೆಂಟ್‌ನವರು ಉಳಿಸಿಕೊಳ್ಳತಕ್ಕ ಪದ್ಧತಿ ಇತ್ತು. ಈಗ ಚೆಕ್ ಸಿಸ್ಟಂ ತಂದಿರುವುದು ಬಹಳ ಅನುಕೂಲವಾಗಿದೆ. ಯಾರಿಗೂ ಇದರಿಂದ ಅನ್ಯಾಯವಾಗುವುದಿಲ್ಲ. ಸರ್ಕಾರದಿಂದ ಕೊಡುವ ಸೇಕಡ 85 ರಷ್ಟು ಗ್ರ್ಯಾಂಟ್ ಹಣದಲ್ಲಿ ಇದನ್ನು ಉತ್ತಾರ ಹಾಕಿ ಕೊಳ್ಳುತ್ತಾರೆ. ಈ ಪದ್ಧತಿ ಸರಿಯಾಗಿದೆ.

ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಲ್ ಹೈಸ್ಕೂಲುಗಳಿಗೆ ಸಕಾಲದಲ್ಲಿ ಮೇಂಟೆನೆನ್ಸ್ ಗ್ರ್ಯಾಂಟ್ ಸಿಕ್ಕುತ್ತಿಲ್ಲ. ನಾನು ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆ ರೂಪದಲ್ಲಿ ಕೇಳಿದೆ. ಶಾಲೆಗಳ ಆಡಿಟ್ ಮಾಡುವುದರಲ್ಲಿ ಬಹಳ ತೊಂದರೆಯಾಗುತ್ತಿದೆ. ಎರಡು ಮೂರು ವರ್ಷವಾದರೂ ಕೂಡ ಶಾಲಾ ಆಡಿಟ್ ಮಾಡಿ ಎಂದು ಕೇಳಿದರೂ ಕೂಡ ನಮ್ಮಲ್ಲಿ ಸಿಬ್ಬಂದಿ ಕಡಮೆ ಇದೆ, ನಾವು ಬರುವುದ ಕ್ಕಾಗುವುದಿಲ್ಲ, ಬೇರೆ ಸ್ಕೂಲುಗಳಿಗೆ ಹೋಗುವ ಪ್ರೋಗ್ರಾಂ ಇದೆ ಎಂದು ಹೇಳಿದರು. ನಮಗೆ ಬರಬೇಕಾದ ವಾರ್ಷಿಕ ಗ್ರ್ಯಾಂಟಿಗೆ ಇದರಿಂದ ಬಹಳ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನವಿಟ್ಟು ಈ ಆಡಿಟ್ ಸರ್ಕಲ್‌ನಲ್ಲಿ ಇಲಾಖೆಯ ವತಿಯಿಂದಲೇ ಹೆಚ್ಚು ಸಿಬ್ಬಂದಿಯನ್ನಿಟ್ಟು ವರ್ಷೇ ವರ್ಷೇ ಕಡ್ಡಾಯವಾಗಿ ಆಡಿಟ್ ಮಾಡಿದರೆ, ಅಲ್ಲಿರಬಹುದಾದ ಲೋಪ ದೋಷಗಳೂ ಹೊರಪಡುತ್ತವೆ ಮತ್ತು ಶಾಲೆಗಳಿಗೆ ಬರಬೇಕಾದ ಮೇಂಟೆನೆನ್ಸ್ ಗ್ರ್ಯಾಂಟ್ ಮತ್ತು ಇತರೆ ಸೌಲಭ್ಯ ದೊರೆಯುವುದಕ್ಕೆ ಅವಕಾಶವಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿರುವ ಹೈಸ್ಕೂಲುಗಳಲ್ಲಿ ಎಲ್ಲ ಕಡೆಯೂ ಇವತ್ತಿನ ದಿವಸ ಹನ್ನೊಂದನೆಯ ಸ್ಟ್ಯಾಂಡರ್ಡ್ ಇಲ್ಲ. ಬೆಂಗಳೂರು ಮತ್ತು ಜಿಲ್ಲೆಯ ಮುಖ್ಯ ಕೇಂದ್ರಗಳಲ್ಲಿ ಸೀಟುಗಳಿಗಾಗಿ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಅವರಿಗೆ ಸೇಕಡ 40ಕ್ಕಿಂತ ಕಡಮೆ ಅಂಕಗಳು ಬಂದರೆ ಸೀಟು ದೊರೆಯಲಾರದು. ಇದನ್ನು ತಪ್ಪಿಸಬೇಕಾದರೆ ಎಲ್ಲ ಹೈಸ್ಕೂಲುಗಳಲ್ಲಿಯೂ ಹನ್ನೊಂದನೆ ತರಗತಿಯನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬೆಂಗಳೂರು ಮತ್ತು ಜಿಲ್ಲಾ ಮುಖ್ಯ ಕೇಂದ್ರಗಳಿಗೆ ಹೋಗಿ ವಿದ್ಯಾರ್ಥಿಗಳು ಪರದಾಡುವುದು ತಪ್ಪುತ್ತದೆ ಎಂದು ಈ ಸಭೆಯ ಮೂಲಕ ಸರ್ಕಾರಕ್ಕೆ ಸೂಚಿಸಲು ಇಚ್ಛಿಸುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ತರಪೇತಾದ ಉಪಾಧ್ಯಾಯರಿಲ್ಲ. ಅಲ್ಲಿ ಕಡ್ಡಾಯವಾಗಿ ಮುಖ್ಯೋಪಾಧ್ಯಾಯರು ಮತ್ತು ಒಬ್ಬಿಬ್ಬರು ಉಪಾಧ್ಯಾಯರನ್ನಾದರೂ ತರಪೇತಾದವರನ್ನು ಹಾಕದೆ ಹೋದರೆ ಅಲ್ಲಿ ವಿದ್ಯಾಭ್ಯಾಸದ ಮಟ್ಟ ಏನಾಗುತ್ತದೆ ಎನ್ನುವುದನ್ನು ಹೇಳಬೇಕಾಗಿಲ್ಲ. ಇವತ್ತಿನ ದಿವಸ ಹೋರಾಟ ಹೇಗಿದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಬರುವ ಮಕ್ಕಳಿಗೆ ಸರಿಯಾದ ಸೌಕರ್ಯಗಳಿಲ್ಲ ; ಪಟ್ಟಣಗಳಲ್ಲಿ ಎಲ್ಲ ಸೌಲಭ್ಯಗಳೂ ಇದ್ದು ಪ್ರಿ ಪ್ರೈಮರಿಯಿಂದ ಸರಿಯಾದ ಶಿಕ್ಷಣ ಪಡೆದಿರುತ್ತಾರೆ. ಈ ಎರಡು ತರಹ ವಿದ್ಯಾರ್ಥಿಗಳಿಗೂ ದೊಡ್ಡ ಹೋರಾಟ ನಡೆದಿದೆ ಎಂದರೆ ತಪ್ಪಾಗಲಾರದು. ಈ ತರಹ ವ್ಯವಸ್ಥೆಯಿಂದ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳಿಗೆ ತಾಂತ್ರಿಕ ಕಾಲೇಜುಗಳಲ್ಲಿ ಅವಕಾಶ ಸಿಕ್ಕುತ್ತಿಲ್ಲ ಎಂದು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ರಚ್ಚೆಗಳಮೇಲೆ ಅಥವಾ ಸರಿಯಾಗಿ ಗೋಡೆಗಳಿಲ್ಲದ ಚಾವಡಿಗಳಲ್ಲಿ ವಿದ್ಯಾಭ್ಯಾಸ ಮಾಡಬೇಕಾಗಿದೆ. ಮಳೆಗಾಲದಲ್ಲಿ ಎರಚಲು ಬಿದ್ದು ಎಷ್ಟೋ ಕಾಲ ಶಾಲೆಯನ್ನು ನಡೆಸುವುದಕ್ಕೇ ಆಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಓದಿಕೊಂಡು ಬರುತ್ತಾರೆ. ಅವರು ಹಾಗೆಯೇ ಮಿಡಲ್ ಸ್ಕೂಲು, ಹೈಸ್ಕೂಲುಗಳಿಗೆ ಬರುತ್ತಾರೆ. ಆ ಶಾಲೆಗಳಲ್ಲಿ ಸರಿಯಾದ ಉಪಾಧ್ಯಾಯರಿಲ್ಲದೆ, ಪಾಠ ಪ್ರವಚನಗಳು ನಡೆಯುವುದಕ್ಕೆ ಅನುಕೂಲವಾಗದೆ ಅನೇಕ ಶಾಲೆಗಳಲ್ಲಿ ಲೆಟ್ ಆಫ್ ಮಾಡತಕ್ಕ ಪ್ರಸಂಗಗಳಿವೆ. ತಾಲ್ಲೂಕು ಕೇಂದ್ರಗಳಲ್ಲಿ ಕೂಡ ಹೀಗೆ ನಡೆಯತಕ್ಕ ಪ್ರಸಂಗಗಳಿವೆ. ಇಂಥವರಿಗೆ ತಾಂತ್ರಿಕ ಕಾಲೇಜುಗಳಲ್ಲಿ ಸೀಟು ಸಿಕ್ಕುವುದು ಕಷ್ಟ. ಇದರಿಂದ ಅನ್ಯಾಯವಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ದಯವಿಟ್ಟು ಮದ್ರಾಸ್ ಪ್ರಾಂತದಲ್ಲಿ ಯಾವ ರೀತಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕವರಿಗೆ ಇಷ್ಟು ಪರ್ಸೆಂಟೇಜ್, ಸೇಕಡ 30–35 ಅಂಕಗಳನ್ನು ಪಡೆದು ಬರುವವರಿಗೆ ಅನುಕೂಲವಾಗುವಂತೆ ಇಷ್ಟು ಸೀಟುಗಳು ಎಂದು ರಿಸರ್ವ್ ಮಾಡುವುದು ಒಳ್ಳೆಯದು. ಇಲ್ಲದೆ ಇದ್ದರೆ ನಮ್ಮ ರೈತ ಮಕ್ಕಳಿಗೆ ಮತ್ತು ಇತರರಿಗೆ ಏನೂ ಅನುಕೂಲವಾಗುವುದಿಲ್ಲ. ಈ ವಿಷಯವನ್ನು ಮಾನ್ಯ ಆರೋಗ್ಯ ಮಂತ್ರಿಗಳೂ ಮತ್ತು ವಿದ್ಯಾ ಮಂತ್ರಿಗಳೂ ತೀವ್ರವಾಗಿ ಆಲೋಚನೆ ಮಾಡಿ ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜು ಇವುಗಳಲ್ಲಿ ಗ್ರಾಮಾಂತರದಿಂದ ಬರುವ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಇವೆಲ್ಲಕ್ಕಿಂತ ಮುಖ್ಯವಾಗಿ ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರು ತಿಳಿಸಿದಂತೆ ಪರೀಕ್ಷಾ ವಿಧಾನದಲ್ಲಿ ಮಾರ್ಪಾಡು ಆಗದೆ ಹೋದರೆ ಖಂಡಿತವಾಗಿ ಏನೂ ಪ್ರಯೋಜನ ಆಗುವುದಿಲ್ಲ. ಈಗಿನ ಪರೀಕ್ಷಾ ವಿಧಾನದಲ್ಲಿ ವರ್ಷಕ್ಕೆ ಒಂದು ಸಾರಿ ಕೇವಲ ಒಂದೆರಡು ಗಂಟೆಗಳಲ್ಲಿ ವಿದ್ಯಾರ್ಥಿಯ ಅರ್ಹತೆಯನ್ನು ನಿಷ್ಕರ್ಷೆ ಮಾಡಬೇಕಾಗಿದೆ. ಇದು ಬಹಳ ಹಳೇ ಕಂದಾಚಾರದ ಪದ್ಧತಿ. ಪಾಶ್ಚಿಮಾತ್ಯ ದೇಶಗಳಲ್ಲಿ, ಅಮೆರಿಕಾ ಮತ್ತು ಇತರ ದೇಶಗಳಲ್ಲಿರುವಂತೆ ತಿಂಗಳಿಗೆ, ಮೂರು ತಿಂಗಳಿಗೆ ಒಂದು ಸಾರಿ ಟೆಸ್ಟ್ ಮಾಡಿ, ಅದರಲ್ಲಿ ವಿದ್ಯಾರ್ಥಿಗಳು ಪಡೆಯುವ ಅಂಕಗಳನ್ನು ವಾರ್ಷಿಕ ಪರೀಕ್ಷೆಗಳಲ್ಲಿ ಗಣನೆಗೆ ತೆಗೆದುಕೊಂಡು ವಿದ್ಯಾರ್ಥಿಯ ಅರ್ಹತೆಯನ್ನು ನಿರ್ಧರ ಮಾಡುವ ವಿಧಾನದಲ್ಲಿ ಪರೀಕ್ಷೆಗಳ ಮಾರ್ಪಾಡು ಆಗಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಸೂಚಿಸಲು ಇಚ್ಛಿಸುತ್ತೇನೆ.

ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳಿಗೆ ಅದರಲ್ಲಿಯೂ ಕಡ್ಡಾಯ ಶಿಕ್ಷಣ ಜಾರಿಗೆ ಬಂದ ನಂತರ ಎಲ್ಲ ಮಕ್ಕಳನ್ನೂ ಶಾಲೆಗೆ ಕಳಿಸಬೇಕೆಂದು ಇರುವುದರಲ್ಲಿರುವ ಕೆಲವು ನ್ಯೂನತೆಗಳನ್ನು ಹೇಳುವುದಕ್ಕೆ ಅವಕಾಶವಿಲ್ಲದ್ದರಿಂದ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಿಂದ ಕಾಲೇಜಿಗೆ ಬರತಕ್ಕ ಮಕ್ಕಳಿಗೆ ಕಡ್ಡಾಯವಾಗಿ ಸ್ಕಾಲರ್‌ಷಿಪ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರಿಗೆ ಈ ಮೂಲಕ ಸೂಚಿಸುತ್ತೇನೆ.

ಗ್ರಾಮಾಂತರದಿಂದ ಬರತಕ್ಕ ಮಕ್ಕಳನ್ನು ನಮ್ಮ ವ್ಯವಸಾಯಕ್ಕೆ ಹೋಲಿಸಬಹುದು. ಇವತ್ತಿನ ದಿವಸ ಲೋಕಲ್ ವೆರೈಟಿ ಸೀಡ್ ಇರುತ್ತದೆ. ಅದಕ್ಕೆ ಸರಿಯಾದ ಗೊಬ್ಬರ ಹಾಕದೆ, ಉಳುಮೆ ಮಾಡದೆ ಸುಧಾರಿತ ರೀತಿಯಲ್ಲಿ ವ್ಯವಸಾಯ ಮಾಡಿದರೆ ಅದರಿಂದ ಬರತಕ್ಕ ಇಳವರಿ

(ಶ್ರೀ ಎನ್. ಚಿಕ್ಕೇಗೌಡ)

ಬಹಳ ಕಡಮೆ. ಅದೇ ಇಂಪ್ರೂವ್ಡ್ ವೆರೈಟಿ ಸೀಡ್ ಹಾಕಿ, 'ಒಳ್ಳೆಯಗೊಬ್ಬರ ಹಾಕಿ ವ್ಯವಸಾಯ ಮಾಡಿ ಅದಕ್ಕೆ ಪೆಸ್ಟ್ ಮತ್ತು ಡಿಸೀಸ್ ಕಂಟ್ರೋಲ್ ಮಾಡಿದರೆ ಹೆಚ್ಚು ಇಳವರಿ ಬರುತ್ತದೆ. ಅದೇ ರೀತಿ ಇವತ್ತಿನ ದಿವಸ ನಮ್ಮ ಗ್ರಾಮಾಂತರ ಪ್ರದೇಶದಿಂದ ಅಲ್ಲಿರುವ ಶಾಲೆಗಳಲ್ಲಿ ಓದಿ ಬರತಕ್ಕ ಮಕ್ಕಳಿಗೂ, ನಗರ ಮತ್ತು ಪಟ್ಟಣಗಳಿಂದ ಬರತಕ್ಕ ಮಕ್ಕಳಿಗೂ ಹೋಲಿಸಿದರೆ, ಲೋಕಲ್ ವೆರೈಟಿ ಸೀಡ್ ಉಪಯೋಗಿಸಿ ಬೆಳೆದಂಥ ಬೆಳೆಯ ಹಾಗೆ ಗ್ರಾಮಾಂತರ ಪ್ರದೇಶದವನು ಇರುತ್ತಾನೆ. ಅದೇ ಕಾಲಕ್ಕೆ ಉತ್ತಮ ಬೀಜವನ್ನು ಉಪಯೋಗಿಸಿ ವ್ಯವಸಾಯ ಮಾಡಿದಂತೆ ಪಟ್ಟಣದಲ್ಲಿ ಓದಿದವನು ಇರುತ್ತಾನೆ. ಮಾರ್ಕ್ಸ್ ತೆಗೆದುಕೊಳ್ಳುವುದರಲ್ಲಿ ಅಂತರಬಂದಿದೆ. ಅದನ್ನು

10-30 P.M.

ಹೋಗಲಾಡಿಸಬೇಕಾದರೆ ರಿಸರ್ವೇಷನ್ ಆಫ್ ಸೀಟ್ಸ್ ಫಾರ್ ರೂರಲ್ ಫೋಕ್ಸ್ ಮಾಡಬೇಕು. ಇಲ್ಲದಿದ್ದರೆ ಖಂಡಿತ ಅನ್ಯಾಯ ಮಾಡಿದ ಹಾಗಾಗುತ್ತದೆ. 100 ರಲ್ಲಿ 80 ಜನ ರೈತರ ಮಕ್ಕಳು ಮತ್ತು ಗ್ರಾಮಾಂತರ ಪ್ರದೇಶದಿಂದ ಬರುವವರು. ಸರ್ಕಾರದವರು ಇದನ್ನು ಚೆನ್ನಾಗಿ ಪರಿಶೀಲಿಸಿ ಮುಂದಿನ ವರ್ಷಕ್ಕೆ ಅನುಕೂಲವಾಗುವಂತೆ ಮಾಡಬೇಕು. ಕ್ಯಾಪಿಟೇಷನ್ ಫೀಸ್‌ನಿಂದ ಖಂಡಿತ ಅನ್ಯಾಯವಾಗುತ್ತಿದೆ. ಈ ಪ್ರೈವೇಟ್ ಕಾಲೇಜುಗಳ ಮೇಲೆ ಕಂಟ್ರೋಲ್ ಇಲ್ಲ ಎಂದು ಹೇಳುವುದು ಸರಿಯಲ್ಲ. ಅಲ್ಲಿ ಮೆಡಿಕಲ್ ಕಾಲೇಜು ಸ್ಟೂಡೆಂಟ್‌ಗೆ 20-30 ಸಾವಿರ ರೂಪಾಯಿ ಖರ್ಚಾಗುತ್ತದೆ. ಇಲ್ಲಿ ಅನ್ಯಾಯವಾಗುವುದನ್ನು ತಪ್ಪಿಸಬೇಕು. 15-20 ಸಾವಿರ ರೂಪಾಯಿ ಕೊಟ್ಟು ಆಂಧ್ರ ದೇಶದ ಮಕ್ಕಳು ಇಲ್ಲಿಗೆ ಬಂದು ಸೇರಿಕೊಳ್ಳುತ್ತಾರೆ. ಕೇರಳದವರೂ ಇಲ್ಲಿಗೆ ಬಂದು ಸೇರಿಕೊಳ್ಳುತ್ತಾರೆ. ನಮ್ಮ ಮಕ್ಕಳು ಎಲ್ಲಿಗೆ ಹೋಗಬೇಕು ? ಇದನ್ನು ಸರಿಪಡಿಸಬೇಕು. ಮೊನ್ನೆ ಆಂಧ್ರದಿಂದ ಬಂದ ಒಬ್ಬ ಹುಡುಗ ಆಂಧ್ರ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದರೆಡ್ಡಿಯವರಿಂದ ಶಿಫಾರಸ್ಸು ತಂದಿದ್ದೇನೆ, ಒಂದು ಸೀಟಿಗೆ 15 ಸಾವಿರ ರೂಪಾಯಿ ಕೊಟ್ಟಿದ್ದೇನೆ ಎಂದು ಹೇಳಿದ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಯಾವ ಊರಿನಲ್ಲಿ ?

ಶ್ರೀ ಎನ್. ಚಿಕ್ಕೇಗೌಡ.—ದಾವಣಗೆರೆಯಲ್ಲಿ ಆಗಲಿ, ಮಣಿಪಾಲ್‌ನಲ್ಲಿ ಆಗಲಿ ಎಲ್ಲಿ ಎಂದು ಹೇಳುವುದಿಲ್ಲ. ಎಲ್ಲಾ ಕಾಲೇಜುಗಳಲ್ಲಿಯೂ ತೆಗೆದುಕೊಳ್ಳುತ್ತಾರೆ. ನಿಜವಾಗಿ ಕಣ್ಣುಮುಚ್ಚಿಕೊಂಡು ಕೂತುಕೊಳ್ಳುವುದಕ್ಕೆ ಆಗುವುದಿಲ್ಲ. ಸರ್ಕಾರದವರು ಆಲೋಚನೆ ಮಾಡಬೇಕು. ಕ್ಯಾಪಿಟೇಷನ್ ಫೀಸು ತೆಗೆದುಕೊಳ್ಳುವುದನ್ನು ತಪ್ಪಿಸಿ ನಮ್ಮ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು. ಸ್ವಾಮಿ, ಮೊನ್ನೆ ದಿವಸ ಬೆಂಗಳೂರಿನಲ್ಲಿ ಮತ್ತು ಇತರೇ ಕಡೆಗಳಲ್ಲಿ ನಾನ್ ಟೆಕ್ನಿಕಲ್ ಕಾಲೇಜುಗಳಲ್ಲಿ ನಮ್ಮ ಮಕ್ಕಳಿಗೆ ಎಷ್ಟೋ ತೊಂದರೆಯಾಗಿದೆ. ಇದು ಸರ್ಕಾರಕ್ಕೆ ಗೊತ್ತಿದೆ. ಮಾನ್ಯ ಮಂತ್ರಿಗಳು ನಾನು ನೋಡಿದ ಹಾಗೆ ಬೆಂಗಳೂರು ಯೂನಿವರ್ಸಿಟಿಯಲ್ಲಿ 10 ಪರ್ಸೆಂಟು ಸೀಟುಗಳು ಹೆಚ್ಚು ಮಾಡಿದ್ದರಿಂದ ಅನೇಕರಿಗೆ ಅನುಕೂಲವಾಯಿತು. ಹಾಸನಕ್ಕೂ ಟೆಲಿಫೋನ್ ಮಾಡಿದರು ಸಪರೇಟ್ ಸೆಕ್ಷನ್ ತೆಗೆಯಲಿ ಎಂದು. ಅದರಿಂದಲೂ ಅನುಕೂಲವಾಗಿದೆ. ಗ್ರಾಮಾಂತರದಿಂದ ಬರತಕ್ಕ ಮಕ್ಕಳಿಗೆ ತೊಂದರೆಯಾಗುವುದನ್ನು ತಪ್ಪಿಸಿ, ಅವರು ಸಮಾಜದಲ್ಲಿ ಮುಂದುವರಿಯುವಂತೆ ಮಾಡಬೇಕು. ಇಲ್ಲದಿದ್ದರೆ ಓದಿದವರೇ ಓದಿಕೊಂಡು ಐ.ಎ.ಎಸ್., ಐ.ಪಿ.ಎಸ್. ಆಫೀಸರ್ಸ್ ಆಗುತ್ತಾರೆ. ಅದನ್ನು ನಾವು ನೋಡುತ್ತಾ ಇದ್ದೇವೆ. 85 ಪರ್ಸೆಂಟು ಜನ ಯಾರು ಇದ್ದಾರೆ ಅವರಿಗೆ ಅನುಕೂಲ ಕಲ್ಪಿಸುವಂತೆ ಸರ್ಕಾರದವರು ಮಾಡಬೇಕು ಎಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, I rise to support the demands before the House and in so doing desire to offer a few observations which I trust will merit the attention of Government.

May I commence by paying a well deserved tribute to our Education Minister, Shri Shankara Gowda, His observations when replying to questions in this House a few days ago on the subject of the Education Commission's Report provide a welcome relief by injecting a breath of fresh air, into an atmosphere rendered stifling and nauseating by reason

of the kind of discussions that took place at both the centre and in some States on this subject–I believe that we are fortunate in having as Education Minister who has shown himself as possessed of courage, commonsense and above all vision.

Sir, no Government really interested in ensuring sound educational programmes will allow itself to be pressurised or bludgeoned into taking decisions on the report without a great deal more of study and consultation, not only with politcians, but with sections of society which have a vital interest in the educational set up that must finally emerge.

For Sir, what is at stake is not the reasonable risk that commerce and industry are required to take, nor the fortunes of this or that leader or political party, but the very future of generations that are to follow and take their place in the highly competitive world of tomorrow.

Sir, when I think of the outcome of the deliberations of the parliamentary committee on education, and the many educationally unsound recommendations that have been made, I am glad that our Minister did not fail for the suggestion of a similar committee in our own State. The recommendation which seeks to erase any serious study of languages in our Universities, must result in snapping all intelectual contact between lovers of good literature in this country with those in other parts of the world. (And all because of the hostility of the central Minister for Education to English).

Sir, A few weeks ago when concluding their discussions at Chandigarh educational exports assemble at the summer school for training college teachers expressed the view that "there exists no language problem in India as such, and if there is one it exists only for the politician, and the truth of that assertion stares at everyone immediately he opens his morning newspaper today.

Sir, the opinion of these educationists may be seen borne out when we try and understand the reasons that prompted the central Education Minister, in complete disregard of the fears expressed by several responsible educationists, to bring forward the proposal to fix a five year deadline for switching over to the regional languages in university education.

A similar thought occurs when one reads of the proceedings of the Congress Parliamentary party meeting when discussing the amendments proposed to the Official Languages Bill so as to incorporate the solemn assurances given by the Late Jawaharlal Nehru—Here a member from a Hindi State made no buttons about demanding that if an early switch to Hindi was not made, as required by Hindi Zealots, then it wood become necessary for quotas for States to be fixed on a population basis in the matter of Central services. The member openly admitted that Hindi speaking people will be at a disadvantage, unless Hindi was imposed on the whole country and without delay.

Sir, Hindi States are so sure of their ground in succeeding in over riding the legitimate fears of the non Hindi speaking people, that the

(SRI P. F. D'MELLOW)

Governments of Uttar Pradesh, Madhya Pradesh, Bihar and of course Shri Morarji Bhai's own state of Gujarat have already permitted students in their secondary schools who have failed in English to proceed to the Universities.

Against this sordid background filled with hate and unreasoned fanaticism, that I find it a relief to know from our Education Minister, that so far as Government of Mysore is concerned, it intends to use its head and not allow itself to be led by the nose. A similar sense of relief is experienced when we turn to Madras and find caution, tolerance and an insistence on preserving standards, held up as the guide lines when evolving that State's policy on future educational set up. We learn that while second to none in his anxiety to see Tamil replace English as the medium of instruction at all levels, the Madras Education Minister has gone on record as insisting on a gradual switch over so as to avoid any lowering of educational standars in the State.

Sir, We notice an equally rational approach in the matter of languages that may be offered to students in secondary schools. Here while Tamil and English continue compulsory, it will be left to the student to choose his third language obviously on the basis of what he finds advantegeous to his future career—Advanced Tamil or Hindi or any other language. Further recognising the need to provide for the regional language to develop on the lines required to serve as a suitable medium for teaching of Science subjects, the Madras Education Minister proposes to entrust the task to a committee of science teachers. Sir, whether it be Madras, Mysore or any other State, the only reliable yard stick which requires to be applied is the educational and career interests of our students.

When making a statement in this House a few days ago, the Hon'ble Education Minister cautioned that it may not be possible to provide facilities for science education to the many who so desire—I hope that the Minister will now tell us what steps Government propose to take to tone up the standard of teaching of mathematies and science, subject in which the greater number of students came down in their SSLC examination—May we not find that several of those who did not qualify, were handicapped by reason of the language medium by which they obtained tuition in these subjects—A medium which may, like Tamil require some further development before serving as intended.

Sir, for my part, I believe that not until we can assure this country with a sufficiency of young scientists, will we be able to lower our out stretched hands, because of continued shortfall in targets on our food front.

I now turn to Government policy towards our English medium schools and plead for similar tolerance, vision and commonsense.

Let me not be misunderstood for I share the view that the regional languages must be allowed to develop to be able to take their rightful

place as the medium of instruction at all levels in due course. But at the same time I believe that it will be unwise to cling ourselves to the many advantages that regional languages must derive by association with a language as developed as English.

Sir, when speaking on the same demands in this House in March 1966, I had endeavoured to explain the presence of what are termed Anglo-Indian Schools in the State, and pleaded that when the time comes, as it now has to plan the future educational set up in the State, we should ensure that prejudice and misunderstanding should not be allowed to cloud our vision and prevent these Schools from continuing to play the same honourable role as they have during the past century and more. I was therefore most heartened last Saturday when the Hon'ble the Chief Minister in laying the foundation stone of an extention to the building housing one such established school wished it yet another century of solid and useful service to the State.

In my speech last year, I asked Government to view the presence of the Anglo-Indian School with the same sympathy and encouragement as it evinces in respect of the Sainik, Army, Air Force and Central Schools, which until a year or so ago, were also affiliated to the same Indian School Certificate Examination as the Anglo-Indian School. Sir I proceeded then to explain that so far as the Anglo-Indian schools are concerned the Supreme Court has given its opinion that recognition by Government is a corollary to the fundamental right of the Anglo-Indian Community to establish and administer English medium schools and enjoy the right to affiliate to an examination of their choice. And I said that so long as Government rightly places no let or hindrance on the development of the Sainik and Central Schools system, it would be unfair to discriminate between the different types of schools, all of which provided almost the same system of education. For then it would amount to discriminating against an old and well-established system in favour of the other schools merely because they are set up by the Central Government.

I also explained at the time that the Central Schools and those maintained by the Defence Department the Anglo Indian Schools offer an Indian-oriented education chiefly to children of members of the Central services, the defence forces, and others engaged in the essential services of the country, and I pointed to the excellence of the standards achieved by these schools, as witnessed by the results obtained by them in the science talent contests conducted by the centre, the examinations for admission to the Indian Institutes of Technology, and other public examinations, and I also pointed to the proud record of these schools in the matter of gallantry awards during the operations following the Chinese aggression as well as during the war with Pakistan.

Sir, on the 16th March 1966, the then Education Minister Ho'nble Sri S. R. Kanthi by way of reply to the fears I had expressed in my speech, declared on the floor of this honourable House that Government had no intention to interfere in any way with the rights possessed by

(SRI P. F. D'MELLOW)

the Anglo-Indian Schools in electing the examination of their choice. All that Government required was an end to the system which had existed over the years by which these schools were provided a separate examination offered by the department, at the end of Standard X, known in recent years as the Anglo-Indian Secondary school examination—an examination equivalent to the SSLC and insisted that if these schools did desire an examination at the end of Standard X to be provided by the department then they must accept the SSLC examination and follow its curriculum.

This is what the Hon'ble Minister said, and I quote from the official report of the proceedings on the 16th March 1966 : " Sri S. R. Kanthi. After all, we have not interefered with Anglo-Indian or European Schools to send their children for examination by the Indian Certificate Examination. What we have said is that, if they want to appear, they must appear for the Mysore SSLC. The choice is there. They must take this choice. They can as well appear for the Indian School Certificate Examination. We have not interfered with that right."

Sir, Could there have been any clearer declaration of Government policy and on behalf of these schools I gave an equally categorical assurance that, after some little time to allow for necessary adjustment in regard to students then in the process of studying for the Anglo Indian Secondary school certificate examination, the Anglo Indian Schools in this State, preferred to exercise their choice and remain affiliated to the Indian School Certificate examination.

The effect of this agreement was, that there ended what till then remained of the Code which had governed these schools, previously known as European School, and the syllabus which Government had prescribed as the European schools syllabus, only for the purpose of allowing them to take the examinations offered by the State. When these schools decided to opt for only the Indian Schools Certificate examination it naturally followed that they continued with the syllabus prescribed by the Council for the Indian School Certificate examination alone. There could be no question of the old code for European schools in Mysore remaining. All that did remain, and this as a matter of convenience and courtesy was the undertaking given by the Department to the Council for the Indian School Certificate, that it would assist, until the Council had Inspectors of its own, to advise on the suitability of schools desiring affiliation to the Council and continuance of the system of inspection by the department, as in previous years. As I say, not by right but purely on the basis of a gentlemen's agreement as an act of courtesy on the part of the department. Mr. Speaker, not very long ago after the Hon'ble Education Minister had declared what Government's policy towards these schools was, it came as a surprise to one of our older established Anglo-Indian middle schools to be informed

by the DDPI Bangalore District, in reply to an application for permission to raise itself to the status of a high school so as to permit it to present students for the Indian School certificate examination, that this permission could not be accorded as it was against the policy of Government and that if the school so desired it should expaned in a manner which would permit it to offer pupils for the Mysore SSLC examination instead.

The DDPI was obviously in error in the manner he chose to interpret Government policy and one might have expected that the Directorate of Public Instruction would have taken the trouble to inform itself correctly before undertaking to issue a fiat of that nature, one that ran counter to what Government had solemenly assured on the floor of this Hon'ble House only a little earlier. This is a classic example of the confusion of thought and the approach of the Directorate of Public Instruction towards these Anglo-Indian Schools. There was for several years previous this form of approach, one which spelt bias and hostility in an agency of Government from which one would have normally expected quite the contrary. An approach unworthy of a department of education to say the least.

Sir, I recall mentioning this communication from the DDPI Bangalore District to the Hon'ble Education Minister of the time Sri S. R. Kanthi when I had the privilege of calling on him in June 1966, along-with two Members of Parliament, Messrs. Frank Anthony and A. E. T. Barrow, who were both naturally non-plussed after hearing from me what the Hon'ble Minister had categorically stated in this House only a few weeks earlier and who asked from him an assurance that there was some mistake on the part of the DDPI when he expressed the view that it was against Government policy to encourage Anglo-Indian Schools. I recall too the manner in which the then Minister for Education provided us the assurance we requested. Without so mush as glancing at the copy of the communication from the DDPI he gave us the assurance we desired.

Sir, I might have forgotten the incident but for the fact that I happen, at this very moment to have received another similar communication from the same office that of the DDPI, Bangalore District, and to the very same effect. It continues the fiction that there is still such a code as the European Schools syllabus and that institutions which teach to this syllabus must switch over to the Mysore SSLC.

The application in this instance is from a small school which was established to serve not as a high school, nor has it any intention to serve not as a high school, nor has it any intention to ever developing into one, but as a feeder one or other of the older established schools which serve the cantonment area and which are affiliated to the Indian Schools Certificate examination. I have other instances too, in mind, where an application was made the DPI on the basis of the gentlemen's agreement which I mentioned earlier, by which the department affords the Council for the Indian School Certificate

(SRI P. F. D'MELLOW)

Examination the courtesy of inspecting school which seeks affiliation to that body to advise on it suitability for affiliation. I am aware that the department undertakes to provide this assistance equally as a matter of strict courtesy to institutions wishing to affiliate to the Central Examination Board and I am aware that it also helped out in equal measure with applications for affiliation to the ISC Examination. As I said I know that it is only a matter of courtesy, but one that I hope the Department, highly organised as it is to help out in this manner, will be pleased to continue to provide with equal facility to both the Council for the Indian school certificate as well as the Central examination Board of New Delhi.

Sir, I have just a final word concerning the payment by Government of their share of contribution to the Teachers Provident Fund of Anglo-Indian schools. The records of the proceedings of this House are replete with assurance by Government from time to time during the past few years that it would not discriminate against an individual merely because he happens to serve the State by teaching in schools other than Government and which receive no grant-in-aid. There was until the introduction of the Triple Benefit scheme, a form of provident fund available to all teachers in the State, and for many years Government made a regular contribution to this fund. Then almost overnight the fund ceased to exist and was replaced by the Triple Benefit scheme. As will be found in the official record of proceedings of this House on the 21st March 1966, I raised the question of the applicability of the triple benefit scheme to teachers in schools conducted by private agencies, and elicited the reply from Government that all recognised schools come under the purview of the triple benefit scheme. Yet not many weeks ago one of these schools, which had grown weary from countless requests to Government to implement the assurance of Government had decided to offer its staff a provident fund of its own, was told by the DPI's office that Anglo-Indian schools were not eligible for the benefit of the triple benefit scheme. I do not desire to pursue the matter further at this stage but I ask Government to at least honour its previous commitment by paying its share of the contribution to the old time provident fund and not deny teachers who are by no means over-blessed with the goods of the world, their legitimate due. I ask Government to pay their contribution to the old provident funds of these schools until the date the staff of these schools were declared to be not eligible to join the triple benefit scheme. This by no means an unreasonable request.

I once again invite our new Minister for Education Hon'ble Sri Shankara Gowda to be pleased to visit these Anglo-Indian Schools and I am confident that he will then appreciate their value to the State and he will extend them the same understanding and encouragement as did his distinguished predecessor Hon'ble Sri Kanthi.

Sir, I thank you and support the demand.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಬೇಡಿಕೆಯ ಮೇಲೆ ಚರ್ಚೆಯಾಗುತ್ತಿರುವಾಗ ನಾನು ಕೆಲವು ವಿಚಾರಗಳನ್ನು ಹೇಳಲಿಷ್ಟ ಪಡುತ್ತೇನೆ. ಈ ಇಲಾಖೆಗೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ನಾನು ಮೊದಲು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಮಾವಿನ ಗಿಡ ನೆಟ್ಟವರು ಯಾರೇ ಆಗಲಿ ಮಾವಿನ ಹಣ್ಣನ್ನು ಕೊಟ್ಟಿರುವವರು ಈಗಿನ ಮಂತ್ರಿಗಳು. ಮಾವಿನ ಗಿಡವನ್ನು ನೆಟ್ಟವರು ಶ್ರೀಮಾನ್ ಕಂಠಿಯವರು, ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹೋದ ತಿಂಗಳಿನಿಂದ ಹೈಸ್ಕೂಲು ಉಪಾಧ್ಯಾಯರಿಗೆ ಸಂಬಳ ಸಾರಿಗೆಯನ್ನು ಪಾವತಿಮಾಡಲು ಚೆಕ್ ಸಿಸ್ಟಂ ಜಾರಿಗೆ ಬಂದಿದೆ.

[MR. SPEAKER in the Chair]

ನಿಜವಾಗಿಯೂ ಇದು ಒಳ್ಳೆಯ ಯೋಜನೆ. ಏಕೆಂಬುದು ಖಾಸಗಿ ಶಾಲೆಗಳವರಿಗೆ ಗೊತ್ತಿದೆ. ಸಂಬಳ ಪಡೆಯಲು ಹಿಂದೆ ತೊಂದರೆಯಿದ್ದುದು ಈಗ ನಿವಾರಣೆಯಾಗಿದೆ. ಈಗ ಈ ಉಪಾಧ್ಯಾಯರ ಸಂಬಳ ಹಂಚುವ ಜವಾಬ್ದಾರಿಯನ್ನು ಸರಕಾರ ವಹಿಸಿಕೊಂಡು ಸಕಾಲದಲ್ಲಿ ಪಾವತಿ ಮಾಡುತ್ತಿರುವುದು ನಿಜವಾಗಿಯೂ ಒಳ್ಳೆಯ ಯೋಜನೆ, ಇದರ ಉದ್ದೇಶ ಕೂಡ ಘನವಾದುದು. ಇದೇ ಯೋಜನೆಯನ್ನು ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳ ಉಪಾಧ್ಯಾಯರಿಗೂ ಮುಂದುವರಿಸಬೇಕು. ಸಂಬಳ ತಾವು ಕೊಟ್ಟ ಮಾತ್ರಕ್ಕೆ ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿರುವ ಶಾಲೆಗಳ ಎಲ್ಲಾ ಕಂಟ್ರೋಲನ್ನೂ ಸರಕಾರದವರು ತಾವೇ ತೆಗೆದುಕೊಳ್ಳಲು ಯತ್ನಿಸಬಾರದು. ಈಗ ಖಾಸಗಿಯವರ ಮೇಲೇ ಜವಾಬ್ದಾರಿಯಿದೆ, ಡಿಸಿಪ್ಲಿನ್ ಮೈನ್‌ಟೈನ್ ಮಾಡುವುದು, ಉಪಾಧ್ಯಾಯರಿಂದ ಕೆಲಸ ತೆಗೆದುಕೊಳ್ಳುವುದು ಮುಂತಾದ ಜವಾಬ್ದಾರಿಯೆಲ್ಲಾ ಶಾಲೆ ನಡೆಸುವವರ ಮೇಲೇ ಇದೆ. ಡಿ.ಇ.ಓ. ಎಲ್ಲ ಶಾಲೆಗಳ ಹೆಡ್‌ಮಾಸ್ಟರುಗಳನ್ನು ಕರೆಸಿ ಅವರೊಡನೆ ವ್ಯವಹರಿಸಿ ಆ ಮೂಲಕ ಸರಿಯಾಗಿ ಕೆಲಸ ನಡೆಯುವಂತೆ ಏರ್ಪಾಡು ಮಾಡುತ್ತಿದ್ದಾರೆ. ಇದರ ಜೊತೆಗೆ ಸಂಬಂಧಪಟ್ಟ ಮ್ಯಾನೇಜ್‌ಮೆಂಟಿನ ಸೆಕ್ರೆಟರಿಯವರನ್ನು ಸೇರಿಸಿಕೊಂಡರೆ ಇಲಾಖೆ ಮತ್ತು ಶಾಲೆಗಳಲ್ಲಿ ಮಧುರ ಬಾಂಧವ್ಯವಿರುತ್ತದೆ, ಈ ಉಪಾಧ್ಯಾಯರ ಮೇಲೆ ಕಂಟ್ರೋಲ್ ಇರುತ್ತದೆ, ಡಿಸಿಪ್ಲಿನ್ ಇರುತ್ತದೆ. ಅದನ್ನು ಬಿಟ್ಟು ನಾವೇ ಸಂಬಳ ಕೊಡುವುದು, ಬ್ಯಾಂಕುಗಳಿಗೆ ಹಣ ಕಟ್ಟಿಸಿ ಆ ಮೂಲಕ ನಾವೇ ಕೊಡುವುದು, ಆದುದರಿಂದ ನಮ್ಮ ಮ್ಯಾನೇಜ್‌ಮೆಂಟಿನಲ್ಲೇ ಶಾಲೆಗಳಿರಬೇಕು ಎಂದು ಹೇಳುವುದು ಸರಿಯಲ್ಲ. ಈಗ ಸರಕಾರದವರೇ ಸಂಬಳ ಪಾವತಿ ಮಾಡುವುದರಿಂದ ಅವರೇ ಶಾಲೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಇಷ್ಟ ಬಂದಹಾಗೆ ನಡೆಸಬಾರದು. ಇದುವರೆಗೆ ಶಾಲೆಗಳು ಯಾವ ರೀತಿಯಲ್ಲಿ ನಡೆಯುತ್ತಿವೆಯೋ ಅದೇ ರೀತಿ ಮುಂದೆಯೂ ನಡೆಯಲು ಅವಕಾಶ ಇರಬೇಕು. ಹೀಗೆ ಮಾಡಿ ಈಗಿನಿಂದಲೇ ಎಚ್ಚರಿಕೆಯಿಂದ ಮ್ಯಾನೇಜ್‌ಮೆಂಟ್, ಇಲಾಖೆ ಇವೆರಡಕ್ಕೂ ಮಧುರ ಭಾಂಧವ್ಯವಿರುವ ಹಾಗೆ ನೋಡಿಕೊಳ್ಳಬೇಕು, ಇದು ಬಹಳ ಅಗತ್ಯ ಎಂದು ಹೇಳುತ್ತೇನೆ.

ಈಗ ಸ್ಥಳೀಯ ಸಂಸ್ಥೆಗಳು ಮತ್ತು ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿಗಳು ನಡೆಸತಕ್ಕ ಸ್ಕೂಲು ಟೀಚರ್ಸಿಗೆ ಮತ್ತು ಗೌರ್ನಮೆಂಟ್ ನಡೆಸತಕ್ಕಂತಹ ಸ್ಕೂಲ್ ಟೀಚರ್‌ಗಳಿಗೆ ಡಿಸ್ಕ್ರಿಮಿನೇಶನ್‌ನಲ್ಲಿ ನೋಡುತ್ತಿದ್ದಾರೆ. ಏನೆಂದರೆ ಸರ್ಕಾರದವರು ಜಿ.ಎ.ಡಿ. 102–, 17 ಆಗಸ್ಟ್, 66ರಲ್ಲಿ ಒಂದು ಆರ್ಡರ್ ಹೊರಡಿಸಿದರು. ಅದರಲ್ಲಿ 1-1-1965ರಲ್ಲಿದ್ದಂತಹ ಟೀಚರ್ಸಿಗೆ ರೆಗ್ಯುಲರ್ ಆಗಿ ಕನ್‌ಫರ್ಮ್ ಮಾಡಬೇಕೆಂದು ಹೇಳಿದ್ದಾರೆ. ಇಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿರುವ ಟೀಚರ್ಸ್‌ಗೆ ಮಾತ್ರ ಎಂದು ಹೇಳುತ್ತಾರೆ. ಅನೇಕ ಸಾವಿರಾರು ಮಂದಿ, ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ ಮಟ್ಟದಲ್ಲಿ ಕೆಲಸ ಮಾಡತಕ್ಕವರಿಗೆ ಇದರಿಂದ ಧಕ್ಕೆ ಬಂದಿದೆ. ಆದ್ದರಿಂದ ಆ ರೀತಿ ಮಾಡದೆ ಇವರಿಗೆ ಕೊಡತಕ್ಕ ಅದರ ಅನುಕೂಲವನ್ನು ಉಳಿದವರಿಗೂ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೆಲವರನ್ನು ತಾಲ್ಲೂಕು ಬೋರ್ಡ್ ಸ್ಕೂಲಿಂದ ಬಿ.ಇಡಿ. ಗೆ ಡೆಪ್ಯೂಟ್ ಮಾಡುತ್ತಾರೆ. ಆಗ ತಾಲ್ಲೂಕು ಬೋರ್ಡಿನವರು 3-4 ಸಲ ಪೇಪರಿನಲ್ಲಿ ಮತ್ತು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಬೇರೆ ಕೆಂಡಿಡೇಟಿಗೋಸ್ಕರ ಬರೆಯುತ್ತಾರೆ. ಮೇಲಾಧಿಕಾರಿಗಳಿಗೆ ಏನು ಮಾಡೋಣ ಎಂದು ಬರೆದರೆ, ನೀವು ನೇಮಕಮಾಡಿಕೊಳ್ಳಿ ಎಂದು ಹೇಳುತ್ತಾರೆ. ಅದೇ ಪ್ರಕಾರ ಯಾರಾದರೂ ಬಂದರೆ, ಅವರಿಗೆ 5-6 ವರ್ಷ ಸರ್ವಿಸ್ ಆದರೂ ನಿಮ್ಮನ್ನು ಬಿ.ಇಡಿ.ಗೆ ಕಳುಹಿಸುವುದಿಲ್ಲ, ನೀವು ಪಿ.ಎಸ್.ಸಿ.ಯಿಂದ ಬಂದಿಲ್ಲ ಎಂದೆಲ್ಲಾ ಹೇಳುತ್ತಿದ್ದಾರೆ. ಇವರು ಮಾಡಿದ ಯಾವ ತಪ್ಪಿಗೆ ಈ ರೀತಿ ಹಾಳು ಮಾಡುವುದು ? ಇದು ಸರಿಯಲ್ಲ, ಆದ್ದರಿಂದ ಅವರಿಗೂ ಅಂಥ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು ಗ್ರ್ಯಾಂಟ್-ಇನ್-ಏಡ್ ಸೆಕ್ಷನ್ 45ರಲ್ಲಿ 9 ತಿಂಗಳು ಟೆಂಪರರಿಯಾಗಿ ಟೀಚರನ್ನು ನೇಮಕಮಾಡಿಕೊಳ್ಳಬಹುದು ಎಂದು ರೂಲಿನಲ್ಲಿ ಅವಕಾಶ ಇದೆ. ಆದರೆ ಜಿಲ್ಲಾಧಿಕಾರಿಗಳು ಏನು ಮಾಡಿದ್ದಾರೆ ? ಎರಡೆರಡು ತಿಂಗಳಿಗೂ ಬಿಡಿಸಿ, ಬಿಡಿಸಿ, ರಿಎಂಪ್ಲಾಯ್‌ಮೆಂಟ್ ಮಾಡಬೇಕೆಂದು ಆರ್ಡರ್ ಹೊರಡಿಸಿದ್ದಾರೆ. ಈ ರೀತಿ ಮಾಡಿದರೆ ಹೇಗೆ ? ತಿರುಗಿ ಅವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟ್ರೇಶನ್ ಮಾಡಿಸಿದರೆ, ಅವರ ಹೆಸರು ಪುನಃ ಕೆಳಗಡೆ ಬರುತ್ತದೆ ; ಆದ್ದರಿಂದ ಅವರು ಪಾಠ ಹೇಳುವುದು ಹೇಗೆ ? ಆದ್ದರಿಂದ ಡಿ.ಸಿ. ಮಾಡಿದ ಆರ್ಡರ್ ತಪ್ಪೆಂದು ನಾನು ಹೇಳುತ್ತೇನೆ ಮತ್ತು ಅದನ್ನು ರೀಕನ್‌ಸಿಡರ್ ಮಾಡಬೇಕೆಂದು ಸರ್ಕಾರದವರ ಕೇಳಿಕೊಳ್ಳುತ್ತೇನೆ.

ಇನ್ನು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಬಹಳ ಜನರು ಮಾತನಾಡಿದರು. ಮಾನ್ಯ ಶಿವಪ್ಪನವರೂ ಬಹಳವಾಗಿ ಹೇಳಿದರು. ಇವತ್ತು ಪಟ್ಟಣದಲ್ಲಿರತಕ್ಕಂತಹ ಹೆಣ್ಣು ಮಕ್ಕಳಿಗೆ ಯಾರೂ ಹೇಳಬೇಕಾದ್ದಿಲ್ಲ. ಆದರೆ, ಹಳ್ಳಿಯಲ್ಲಿರುವ ಹೆಣ್ಣುಮಕ್ಕಳ ಸ್ಥಿತಿ ಬಹಳ ಕಠಿಣ. ಅವರಿಗೆ ಸರಿಯಾದ ಹಾಸ್ಟೆಲು ವ್ಯವಸ್ಥೆ ಇಲ್ಲ. ಈ ರೀತಿ ಇದ್ದರೆ ಹೆಣ್ಣು ಮಕ್ಕಳು ಮುಂದಕ್ಕೆ ಬರುವುದಾದರೂ ಹೇಗೆ ? ಜನ ದುಡ್ಡು ಕೊಟ್ಟು ಹಾಸ್ಟೆಲ್ ಕಟ್ಟುತ್ತೇವೆಂದು ಮುಂದೆ ಬರುತ್ತಾರೆ. ಆಗ ಅವರಿಗೆ ಪ್ರೋತ್ಸಾಹ ಕೊಟ್ಟು ಅನುಕೂಲ ಮಾಡಿ ಕಟ್ಟಡಗಳನ್ನು ಕಟ್ಟುವುದಕ್ಕೆ ಅನುಕೂಲಮಾಡಿಕೊಡಬೇಕು; ಮತ್ತು ಸಾಕಾದಷ್ಟು ಗ್ರ್ಯಾಂಟು ಕೊಡಬೇಕು ; ಅಥವಾ ನಮ್ಮ ಹತ್ತಿರ ದುಡ್ಡು ಇಲ್ಲ, ಗ್ರ್ಯಾಂಟ್ ನಿಲ್ಲಿಸಿ ಬಿಡುತ್ತೇವೆಂದು ಹೇಳುವುದು ತಪ್ಪಿಸಬೇಕು. ಆದ್ದರಿಂದ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ವಿಚಾರ ದಲ್ಲಿ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳು ತ್ತೇನೆ.

ಇನ್ನು ಲೇಡಿ ಟೀಚರ್ಸ್ ವಿಚಾರ. ಈಗ 2-3 ವರ್ಷದಲ್ಲಿ ರಿಟೈರ್ ಆಗಲಿಕ್ಕಿರುವ ಲೇಡಿ ಟೀಚರುಗಳನ್ನು ಬೇರೆ ಎಲ್ಲಿಯೋ ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಇದು ತಪ್ಪು. ಆ ರೀತಿ ಮಾಡದೆ, ಅವರ ಜಾಗದಲ್ಲೇ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಗಂಡಸರು, ಎಲ್ಲಿಯಾದರೂ, ಹೆಂಡತಿ ಹೆರಲಿಕ್ಕೆ ಇದ್ದಾಳೆ, ತಾಯಿಗೆ ಅಸೌಖ್ಯವೆಂದು ಹೇಳಿದರೆ ಅವರಿಗೆ ಕೊಡುತ್ತೀರಿ. ಅದೇ ರೀತಿ ಹೆಂಗಸರಿಗೂ ಕೊಡಬೇಕೆಂದು ನನ್ನ ಸಲಹೆ. ಇದಕ್ಕೆ ಇಲಾಖೆಯವರು ಸ್ವಲ್ಪ ಕರುಣೆ ತೋರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಂತ್ರಿ ಮಂಡಲದಲ್ಲಿ ಹೆಣ್ಣು ಮಕ್ಕಳಿಗೆ ಜಾಗ ಕೊಟ್ಟಿಲ್ಲ ವಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೂ ಇದಕ್ಕೂ ಏನು ಸಂಬಂಧ ?

ಒಬ್ಬ ಮಾನ್ಯ ಸದಸ್ಯರು.—ಯಾರಾದರೂ ಹೆಂಗಸರೇ ವಿದ್ಯಾಮಂತ್ರಿಗಳಾಗಿದ್ದರೆ ಬಹಳ ಉಪಯೋಗವಾಗುತ್ತಿತ್ತು.

ಶ್ರೀ ಕೆ. ಎಸ್. ನಾಗರತ್ನಮ್ಮ.—ಇನ್ನು ಟೀಚರ್ಸ್‌ಗೆ 34 ಪೀರಿಯಡ್ ಮಾಡಬೇಕೆಂದು ಹೇಳಿದ್ದಾರೆ. ಇದರಿಂದ ಅವರಿಗೆ ಏನೂ ರೆಸ್ಟ್ ಸಿಗುವುದಿಲ್ಲ. ಅದಕ್ಕೆ ಇನ್ನೂ ಜಾಸ್ತಿ ಟೀಚರ್ಸ್‌ನ್ನು ನೇಮಕ ಮಾಡಿ, ಈ ಕಷ್ಟವನ್ನು ತಪ್ಪಿಸಬೇಕು.

ಇನ್ನು ಹೈಸ್ಕೂಲ್ ವಿದ್ಯಾಭ್ಯಾಸದಲ್ಲಿ ಇಂಗ್ಲಿಷ್ 4ನೆಯ ಫಾರ್ಮಿನಲ್ಲಿ ಶುರು ಮಾಡುತ್ತಾರೆ. ನಮ್ಮ ಊರಿನ ಹೆಡ್‌ಮಾಸ್ಟರು ಒಮ್ಮೆ ನನ್ನನ್ನು ಸ್ಕೂಲಿಗೆ ಬನ್ನಿ ಅಮ್ಮ ಎಂದು ಕರೆದಾಗ ನಾನು ಹೋದೆ. ಅಲ್ಲಿ ಹುಡುಗರ ಹತ್ತಿರ ಎ,ಬಿ,ಸಿ,ಡಿ, ಹೇಳಪ್ಪ ಎಂದು ಹೇಳಿದರೆ ಅವನು "A,B,C, D,R,W,Z" ಎಂದು ಹೇಳುತ್ತಾನೆ. ಇಂಥವರು ಇನ್ನು ಮೂರು ವರ್ಷದೊಳಗೆ ಎಸ್.ಎಸ್.ಎಲ್.ಸಿ. ಪಾಸು ಮಾಡಬೇಕು, 60 ಪರ್‌ಸೆಂಟು ತೆಗೆಯಬೇಕು, ಇಲ್ಲದಿದ್ದರೆ ಕಾಲೇಜಿನಲ್ಲಿ ಸೀಟು ಇಲ್ಲ. ಹೀಗೆ ಆದರೆ ಹೇಗೆ ? ಇಲ್ಲದಿದ್ದರೆ ಇಂಗ್ಲಿಷನ್ನೇ ತೆಗೆದು ಹಾಕಿ ಬಿಡಿ. ಆದರೆ ನಿಜವಾಗಿಯೂ ನಮಗೆ ಬೇಕಾದರೆ ನೀವು ಮೊದಲು ಇದ್ದ ಹಾಗೆ ಲೋಯರ್ ಸೆಕೆಂಡರಿಯಿಂದಲೇ ಪರೀಕ್ಷೆ ಮಾಡಬೇಕು. ಇಂಗ್ಲಿಷನ್ನು ಪ್ರೈಮರಿ ಸ್ಕೂಲಿಂದ ಪ್ರಾರಂಭ ಮಾಡಬೇಕು. ಅಲ್ಲಿಂದಲೇ, ಫಿಲ್ಟರ್ ಮಾಡುತ್ತಾ ಬರಬೇಕು. ಇದು ಬಹಳ ಅವಮಾನ. ಆ ಮೇಲೆ ಫೇಲು ಆದರೆ ಗ್ರೇಸ್ ಮಾರ್ಕ್ಸ್ ಕೊಟ್ಟು ಪಾಸ್ ಮಾಡಿಸುವುದು, ಏಕೆ ?

ಇನ್ನು ಈ ಹಿಂದಿ. 5 ಫಾರ್ಮಿನಲ್ಲಿ ಕಂಪಲ್ಸರಿ. 6 ಫಾರ್ಮಿನಲ್ಲಿ ಇಲ್ಲ. ಟೀಚರ್ ಹೇಳುತ್ತಾರೆ, ಸರ್ಕಾರ ವಿನಾಯಿತಿ ತೋರಿಸುತ್ತಾರೆ, ಬಾಕಿ ಓದಿಕೊಳ್ಳಿ ಎಂದು ಹೇಳುತ್ತಾರೆ; ಮತ್ತು ಮಕ್ಕಳೆಲ್ಲಾ

ಬಾಕಿ ಸಬ್ಜೆಕ್ಟಿನಲ್ಲಿ ಪಾಸಾಗಿದ್ದಾರೆ, ಅದರಲ್ಲಿ ಮಾತ್ರ ಫೇಲ್ ಆಗಿದ್ದಾರೆಂದು ದೂರು ಬರುತ್ತದೆ. ಈ ಅಪಪ್ರಚಾರ ಏಕೆ? ನಿಮಗೆ ಹಿಂದಿ ಬೇಕಾದರೆ ಒಂದು ಕಟ್ಟುನಿಟ್ಟಾದ ಕ್ರಮ ಇಟ್ಟುಕೊಳ್ಳಿ. ಇಲ್ಲದಿದ್ದರೆ, ಹಿಂದಿ ಬೇಡಿ ಎಂದು ಹೇಳಿಬಿಡಿ. ಇಲ್ಲದಿದ್ದರೆ ಈ ಹಿಂದಿ ಒಂದು ಅವಲಕ್ಷಣವಾಗುತ್ತಿದೆ.

ಆ ಮೇಲೆ ಒಂದು ಊರಿನ ಟೀಚರನ್ನು ಅದೇ ಊರಿನಲ್ಲಿ ಹಾಕಬಾರದು. ಇದರಿಂದ ಅವನು ಬೇಗ ಹಾಕಿಕೊಂಡು, ಶೌದೆ ಅಂಗಡಿ ಇಟ್ಟುಕೊಂಡು ಅಥವಾ ಎಲ್ಲೋ ಹೋಗಿ ಶಾಲೆಯನ್ನೇ ಮರೆತು ಬಿಡುತ್ತಾನೆ. ಬೇರೆ ದೂರ ಗುಲ್ಬರ್ಗ, ರಾಯಚೂರಿಗೆ ಕಳಿಸಿ ಎಂದು ಹೇಳುತ್ತಿಲ್ಲ. ಆದರೆ ಅದೇ ಊರಿನಲ್ಲಿ ಇಟ್ಟುಕೊಂಡರೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ಧಕ್ಕೆ ಬರುತ್ತದೆ; ಮತ್ತು ಹಳ್ಳಿಗಾಡಿನಿಂದ ಬಂದ ಮಕ್ಕಳಿಗೆ ಮೇಲ್ತರಗತಿಯಲ್ಲಿ ಹೆಚ್ಚು ಹೆಚ್ಚಾಗಿ ಸೀಟುಗಳನ್ನು ಕೊಡುವ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್ ವಿಚಾರದಲ್ಲಿ ಹೇಳುವುದಾದರೆ, ನಾನು ಸಹ ಮೈಸೂರಿನ ಮಹಾರಾಣಿ ಕಾಲೇಜಿನ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಕೆಲಸ ಮಾಡಿದ್ದೇನೆ. ವಿದ್ಯಾಭ್ಯಾಸ ಮುಗಿದು 3-4 ವರ್ಷಗಳಾದರೂ ಸಹ ಅವರ ಸ್ಕಾಲರ್‌ಷಿಪ್‌ನ್ನು ಸರ್ಕಾರದವರು ಕೊಡುತ್ತಿಲ್ಲ. ಅವರು ಕಟ್ಟಿರುವ ದುಡ್ಡನ್ನು ಸಹ ವಾಪಸ್ ಕೊಡುತ್ತಿಲ್ಲ. ಕೆಲವು ಹೆಣ್ಣು ಮಕ್ಕಳು ಈಗಾಗಲೇ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದಾರೆ. ನಿಜವಾಗಿ ಇವರಿಗೆ ಬಂದಿರುವ ಕಷ್ಟ ವೇನು? ಆದಷ್ಟು ಜಾಗ್ರತೆ ಅವರಿಗೆ ಸ್ಕಾಲರ್‌ಷಿಪ್ ತಲುಪುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

11-00 A.M.

ಇನ್ನು ಕಿವುಡರು ಮತ್ತು ಮೂಗರ ಬಗ್ಗೆ ವಿದ್ಯಾಮಂತ್ರಿಗಳಾದ ಶಂಕರೇಗೌಡರಿಗೆ ಬಹಳ ಮಮತೆ ಇದೆ. ನಾನು ಮತ್ತು ಅವರೂ ಸಹ ಎಷ್ಟೋ ಸಾರಿ ಆ ಸ್ಕೂಲಿಗೆ ಹೋಗಿ ನೋಡಿದ್ದೇವೆ. ಈ ಮಕ್ಕಳನ್ನು ನೋಡಿಕೊಳ್ಳಲು ಸರಿಯಾಗಿ ಉಪಾಧ್ಯಾಯರುಗಳು ಇರುವುದಿಲ್ಲ. ಕಿವುಡರು ಕಿವಿಗೆ ಹಾಕಿಕೊಳ್ಳುವ (Hearing aid) ಮೈಕ್‌ಗಳನ್ನು ಸರಿಯಾಗಿ ಒದಗಿಸಿರುವುದಿಲ್ಲ. ಮತ್ತು ಇವರಿಗೆ ಅನುಕೂಲವಾಗುವಂಥ ಯಾವ ತರಹವಾದ ಸಾಮಾನುಗಳನ್ನಾಗಲೀ, ಪುಸ್ತಕಗಳನ್ನಾಗಲೀ ಸರಿಯಾಗಿ ಒದಗಿಸಿರುವುದಿಲ್ಲ. ಈ ಶಾಲೆಯನ್ನು ವಿದ್ಯಾ ಇಲಾಖೆಯವರು ಇಟ್ಟುಕೊಳ್ಳುವುದಕ್ಕೆ ಬದಲಾಗಿ ಸಮಾಜ ಕಲ್ಯಾಣ ಇಲಾಖೆಗೆ ವಹಿಸಿದರೆ ಅವರು ಚೆನ್ನಾಗಿ ನೋಡಿಕೊಳ್ಳುತ್ತಾರೆಂದು ಹೇಳುತ್ತೇನೆ.

ಇನ್ನು ಒಕೇಷನಲ್ ಇನ್‌ಸ್ಟಿಟ್ಯೂಟ್ ಎಂದು ಮೈಸೂರಿನಲ್ಲಿದೆ. ಅಲ್ಲಿ ಕಿವುಡರಾಗಿರುವ, ಮೂಗರಾಗಿರುವ ಹೆಣ್ಣುಮಕ್ಕಳಿಗೆ ಒಂದು ಬೇರೆ ಸೆಕ್ಷನ್ ಇದೆ. ಅಲ್ಲಿ 8-10 ಹುಡುಗರು ಇದ್ದಾರೆ. ಅವರಿಗೆ ತಿಂಗಳಿಗೆ 10 ರೂಪಾಯಿಗಳನ್ನು ಮೊದಲು ಕೊಡುತ್ತಿದ್ದರು. ಈಗಲೂ ಅಷ್ಟೇ ಕೊಡುತ್ತಿರುವುದು ಯಾವ ನ್ಯಾಯ? ಕೇವಲ 10 ರೂಪಾಯಿಗಳಲ್ಲಿ ಇವರಿಗೆ ಅನ್ನ ಹಾಕುವುದಕ್ಕಾಗುತ್ತದೆಯೇ? ಅಲ್ಲಿ ದೊಡ್ಡ ದೊಡ್ಡ ಹೆಣ್ಣು ಮಕ್ಕಳಿದ್ದಾರೆ, ಅವರನ್ನು ನೋಡಿಕೊಳ್ಳಲು ಯಾರನ್ನೂ ನೇಮಿಸಿಲ್ಲ. ಇವರನ್ನು ಸರಿಯಾಗಿ ನೋಡಿಕೊಳ್ಳಬೇಕು, ಇಲ್ಲದಿದ್ದರೆ ಈ ಸೆಕ್ಷನನ್ನು ಮುಚ್ಚಬೇಕು. ಬೇರೆ ಒಂದು ಕಟ್ಟಡವನ್ನು ಕಟ್ಟಿಸಿ ಇವರನ್ನು ನೋಡಿಕೊಳ್ಳಲು ಸರಿಯಾದ ಏರ್ಪಾಡು ಮಾಡಬೇಕು.

ಇನ್ನು ಕೊನೆಯದಾಗಿ ಎಲ್ಲ ಸದಸ್ಯರೂ ಸಹ ತಮ್ಮ ತಮ್ಮ ವ್ಯವಸಾಯದ ಊರಿಗೆ ಕಾಲೇಜನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ನಮ್ಮ ಗುಂಡ್ಲುಪೇಟೆಗೆ ಒಂದು ವ್ಯವಸಾಯದ ಸ್ಕೂಲನ್ನಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಬೇಕಾದ ಅನುಕೂಲಗಳನ್ನು ನಾನು ಮಾಡಿಕೊಡುತ್ತೇನೆ. ನಮ್ಮದು ಸ್ಕೇರ್‌ಸಿಟಿ ಏರಿಯ. ಬರಡು ಭೂಮಿ. ಅಲ್ಲಿರುವ ವಿದ್ಯಾರ್ಥಿಗಳು ಅಲ್ಲಿ ವ್ಯವಸಾಯದ ಕಾಲೇಜನ್ನು ತೆರೆದರೆ ವ್ಯವಸಾಯದ ಬಗ್ಗೆ ತಿಳಿದುಕೊಳ್ಳುತ್ತಾರೆ. ಆ ಮೂಲಕ ನಮ್ಮ ಏರಿಯಾ ಮುಂದುವರೆಯುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ನಮ್ಮ ಕಡೆಗೆ ಒಂದು ವ್ಯವಸಾಯದ ಕಾಲೇಜನ್ನು ಕೊಡಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಶರಣಗೌಡ ಇನಾಂದಾರ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಈ ವಿದ್ಯಾ ಖಾತೆಯ ಬಗ್ಗೆ ಮಂಡಿಸಿರುವ ಡಿಮ್ಯಾಂಡ್‌ಗಳ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಈಗಲೂ ನಾನು ಮಾನ್ಯ ವಿದ್ಯಾ ಮಂತ್ರಿಗಳಿಗೆ ಮುಖ್ಯವಾಗಿ ತಿಳಿಸುವುದೇನೆಂದರೆ, ವಿದ್ಯಾಖಾತೆಯ ಆಡಳಿತದಲ್ಲಿ ಬಹಳ ಬದಲಾವಣೆ ಮಾಡಬೇಕಾಗಿದೆಯೆಂದರು. ಏಕೆಂದರೆ ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾದ ಕಡೆಗೆ ಆಡಳಿತ ದೃಷ್ಟಿಯಿಂದ ವಿಚಾರ ಮಾಡಿದರೆ ಯಾವ ಅಧಿಕಾರಿಯೂ ಬರುತ್ತಿಲ್ಲ. ಇಲ್ಲಿಂದ ತಾವು

(ಶ್ರೀ ಶರಣಗೌಡ ಇನಾಂದಾರ್)

ಯಾರನ್ನಾದರೂ ಡಿ.ಡಿ.ಪಿ.ಐ. ಅಥವಾ ಡಿ.ಇ.ಒ.ಗಳನ್ನು ನಮ್ಮ ಕಡೆಗೆ ವರ್ಗ ಮಾಡಿದರೆ, ಅವರು ಜಾಗ್ರತೆ ನಮ್ಮಲ್ಲಿಗೆ ಬಂದು ಅಧಿಕಾರವನ್ನು ವಹಿಸಿಕೊಳ್ಳುತ್ತಿಲ್ಲ. ಬಂದರೂ ಒಂದು ವರ್ಷ ಎರಡು ವರ್ಷದ ಮೇಲೆ ಇರುವುದಿಲ್ಲ. ಇದುವರೆಗೆ ಅಲ್ಲಿ ಇನ್‌ಚಾರ್ಜು ಮೇಲೆ ಕೆಲಸ ನಡೆಯುತ್ತಿದೆ. ಮೊದಲು ನಮ್ಮಲ್ಲಿ ಶ್ರೀ ರಘುರಾಮಯ್ಯ ಎಂಬುವರು ಡಿ.ಡಿ.ಪಿ.ಐ. ಆಗಿದ್ದರು. ಅವರು ಹೋದ ಮೇಲೆ ಗುಲ್ಬರ್ಗ ಡಿವಿಜನ್‌ನಲ್ಲಿ ಇನ್‌ಚಾರ್ಜ್ ಮೇಲೆ ಕೆಲಸ ನಡೆಯುತ್ತಿದೆ. ಈ ಜಾಗಕ್ಕೆ ಬೇರೆ ಅಧಿಕಾರಿಗಳನ್ನು ನೇಮಿಸಿದರೆ ಅವರು ಬರುವುದಿಲ್ಲ. ಇನ್‌ಚಾರ್ಜ್ ಅಂದರೆ, ಎ.ಇ.ಒ. ಅವರು ಡಿ.ಇ.ಒ. ಕೆಲಸವನ್ನು ನೋಡಿಕೊಳ್ಳುತ್ತಾರೆ, ಡಿ.ಇ.ಒ. ಅವರು ಡಿ.ಡಿ.ಪಿ.ಐ. ಅವರ ಕೆಲಸದಲ್ಲಿ ಇನ್‌ಚಾರ್ಜ್ ಆಗಿ ನೋಡಿಕೊಳ್ಳುತ್ತಾರೆ. ಅಂದರೆ ಕ್ಲಾಸ್-1 ಆಫೀಸರ್ ಕೆಲಸವನ್ನು ಕ್ಲಾಸ್-2 ಆಫೀಸರ್ ಅವರು ನೋಡಿಕೊಳ್ಳುವುದು. ಈ ರೀತಿ ನಡೆಯುತ್ತಿದ್ದರೂ ಸಹ ಇದುವರೆಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ನಮ್ಮ ಹೈದರಾಬಾದ್ ಏರಿಯಾದಲ್ಲಿ ವಿದ್ಯಾಭ್ಯಾಸದ ಬಗ್ಗೆ ಸರ್ಕಾರದವರು ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆಯೇ ಇಲ್ಲವೇ ಎನ್ನುವುದು ಗೊತ್ತಾಗುವುದಿಲ್ಲ. ಸರ್ಕಾರದವರು ಯಾರನ್ನಾದರೂ ಪೋಸ್ಟ್ ಮಾಡಿದರೆ ಅವರು ಬರುತ್ತಿಲ್ಲ. ಈ ವಿಚಾರದಲ್ಲಿ ನಾವು ಸರ್ಕಾರದ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲು ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ನಾನು ಹೇಳುತ್ತಿರುವ ವಿಚಾರಗಳನ್ನು ಕೇಳಲು ಮೊದಲಿನ ವಿದ್ಯಾಸಚಿವರಾಗಲೀ, ಈಗಿನ ವಿದ್ಯಾಸಚಿವರಾಗಲೀ ಇಲ್ಲ. ಯಾರಿಗೆ ನಾವು ಹೇಳಿಕೊಳ್ಳುವುದು ? ಈಗ ಒಬ್ಬರು ಡಿ.ಡಿ.ಪಿ.ಐ. ನಮ್ಮ ಡಿವಿಜನ್‌ಗೆ ಬಂದಿದ್ದಾರೆ. ಒಂದು ತಿಂಗಳಿನಿಂದ ಆಫೀಸ್ ಕೆಲಸ ನೋಡಿಕೊಳ್ಳುತ್ತಿದ್ದಾರೆ. ನಮ್ಮ ಗುಲ್ಬರ್ಗದಲ್ಲಿ ಡಿ.ಇ.ಒ. ಬಹಳ ದಿವಸಗಳಿಂದಲೂ ಇಲ್ಲ. ಆ ಒಂದು ಪೋಸ್ಟ್ ಇನ್ನೂ ಖಾಲಿ ಇದೆ. ಮೊನ್ನೆ ಒಬ್ಬ ಆಫೀಸರ್ ಶನಿವಾರ ಬಂದು ಸೋಮವಾರ ಚಾರ್ಜು ತೆಗೆದುಕೊಂಡು ಮತ್ತೆ ಶನಿವಾರ ವಾಪಸ್ ಹೊರಟುಹೋದರು. ಈಗ ಮತ್ತೆ ಆ ಡಿ.ಇ.ಒ. ಪೋಸ್ಟ್ ಖಾಲಿ ಬಿದ್ದಿದೆ. ಈಗ ಅಲ್ಲಿರುವ ಎ.ಇ.ಒ. ಅವರು ಡಿ.ಇ.ಒ. ಆಗಿ ಇನ್‌ಚಾರ್ಜ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಸಹ ಮೊನ್ನೆ ಲೀವ್ ತೆಗೆದುಕೊಂಡರು. ಈಗ ಸಬ್ಜೆಕ್ಟ್ ಇನ್ಸ್‌ಪೆಕ್ಟರನ್ನು ಡಿ.ಇ.ಒ. ಆಗಿ ನೇಮಕ ಮಾಡಿದ್ದಾರೆ. ಇದೂ ಅಲ್ಲದೆ ನಮ್ಮ ಭಾಗದಲ್ಲಿ ಅನೇಕ ಜನರ ಸೀನಿಯಾರಿಟಿ ಅಫೆಕ್ಟ್ ಆಗಿರುವುದರಿಂದ, ಅಂತಹವರು ಕೋರ್ಟಿಗೆ ರಿಟ್ ಹೋಗಿ, ಯಾವಾಗಲೂ ಕೋರ್ಟಿಗೆ, ವಕೀಲರ ಮನೆಗೆ ತಿರುಗುತ್ತಿರುತ್ತಾರೆ. ಈ ಪ್ರಕಾರ ನಮ್ಮ ಗುಲ್ಬರ್ಗ ಡಿವಿಜನ್‌ನಲ್ಲಿ ಎಜ್ಯುಕೇಷನ್ ಅಡ್ಮಿನಿಸ್ಟ್ರೇಷನ್ ಹಾಳಾಗಿದೆ. ಇದನ್ನು ತೀವ್ರವಾಗಿ ಸರಿಪಡಿಸಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಕೆಲಸ ಮಾಡಿಕೊಂಡೇ ಪ್ರೈವೇಟಾಗಿ ಡಿಗ್ರಿ ತೆಗೆದುಕೊಂಡು ಬಂದವರನ್ನು ಪ್ರೈಮರಿ ಸ್ಕೂಲ್‌ಗಳಲ್ಲಿ, ಮಿಡಲ್ ಸ್ಕೂಲ್‌ಗಳಲ್ಲಿ ಪ್ರಮೋಷನ್ ಕೊಟ್ಟು ಬೇರೆ ದೊಡ್ಡ ಕೆಲಸಗಳಿಗೆ ನೇಮಿಸಿರುತ್ತಾರೆ. ಈಗ ಇನ್‌ಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಫೈನಲೈಸ್ ಆಗಿರುವುದರಿಂದ ನಮ್ಮಲ್ಲಿ 84 ಜನ ಆಫೀಸರ್‌ಗಳಿಗೆ ಅಫೆಕ್ಟ್ ಆಗಿದೆ. ಇವರನ್ನು ಮೊದಲಿನ ಪೋಸ್ಟ್‌ಗೆ ರಿವರ್ಟ್ ಮಾಡಿದ್ದಾರೆ. ಮತ್ತೆ ಕೆಲವರನ್ನು ಮನೆಗೆ ಕಳಿಸಿದ್ದಾರೆ. ಇವರುಗಳು ತಮಗೆ ಅನ್ಯಾಯವಾಗಿದೆ ಯೆಂದು ರೆಪ್ರಜೆಂಟೇಷನ್ ಕೊಟ್ಟಿದ್ದಾರೆ. ಸರ್ಕಾರ ಇನ್ನೂವರೆಗೆ ಈ ವಿಚಾರದಲ್ಲಿ ತೀರ್ಮಾನ ಮಾಡಿಲ್ಲ. ಈ ವಿಚಾರವನ್ನು ಜಾಗ್ರತೆ ಪರಿಶೀಲಿಸಬೇಕೆಂದು ಹೇಳುತ್ತೇನೆ. ನಾನು ಇವರ ಕಡೆಯಿಂದ ಶಿಫಾರ್ಸ್ ಮಾಡಬೇಕೆಂದು ಹೇಳುತ್ತಿಲ್ಲ. ಈಗ ಆಡಳಿತದಲ್ಲಿರತಕ್ಕಂಥ ನೌಕರ ವರ್ಗದವರಿಗೆ ಎರಡು ರೀತಿಯ ತೊಂದರೆಗಳಿವೆ. ಒಂದನೆಯದು ಸಂಬಳ, ಡಿ. ಎ. ಮತ್ತು ಏರುತ್ತಿರುವ ಬೆಲೆಗಳು. ಎರಡನೆಯದಾಗಿ ಪ್ರಮೋಷನ್ ವಿಚಾರ. ಪ್ರಮೋಷನ್ ಕೊಡುತ್ತೀರಿ, ಒಂದೆರಡು ವರ್ಷವಾದ ನಂತರ ರಿವರ್ಟ್ ಮಾಡಿ ಹಿಂದಿನ ಕೆಲಸಕ್ಕೆ ಕಳಿಸುತ್ತೀರಿ. ಅದೇ ಜಾಗವನ್ನು ತೆಗೆದುಕೊಳ್ಳಬೇಕೆಂದು ಅವರು ರಿಟ್ ಹಾಕುತ್ತಾರೆ. ನಂತರ ಕೋರ್ಟಿಗೂ ವಕೀಲರ ಮನೆಗೂ ತಿರುಗುತ್ತಿರುತ್ತಾರೆ. ಹುಡುಗರಿಗೆ ವಿದ್ಯಾಭ್ಯಾಸ ಮಾಡಿಸುವ ರುಚಿಯೇ ಇವರಲ್ಲಿ ಉಳಿದಿಲ್ಲ. ವಿದ್ಯಾಭ್ಯಾಸದ ಸ್ಟಾಂಡರ್ಡ್ ದಿನೇ ದಿನೇ ಕಡಿಮೆಯಾಗುತ್ತಿದೆ. ನಮ್ಮಲ್ಲಿ ಮಲ್ಟಿಪರ್‌ಪಸ್ ಹೈಸ್ಕೂಲ್ ಇದೆ. ಆ ಸ್ಕೂಲ್‌ನಲ್ಲಿ 65 ಜನ ಮಾಸ್ಟರ್ಸ್ ಇದ್ದಾರೆ. ಅವರಲ್ಲಿ 11 ಜನ ಎಂ.ಎ. ಪಾಸ್ ಆದವರು. ಎಂ.ಎ. ಪಾಸ್ ಮಾಡಲಿಕ್ಕೆ ನೀವು ಅವರಿಗಾಗಿ ಖರ್ಚು ಮಾಡಿದ್ದೀರಿ ಅಷ್ಟೆಲ್ಲಾ ಆಗಿ ಫಲಿತಾಂಶ ಏನೆಂದರೆ, ನೂರಕ್ಕೆ ಹತ್ತು ಜನರು ಪಾಸ್ ಆಗಿದ್ದಾರೆ ಎಂದರೆ ಈ ರೀತಿ ಸರ್ಕಾರಿ ಹೈಸ್ಕೂಲುಗಳಲ್ಲಿ ಸ್ಟಾಂಡರ್ಡ್ ಏಕೆ ಕಡಿಮೆಯಾಗುತ್ತಾ ಇದೆ ಎಂಬುದನ್ನು ತಾವು ವಿಚಾರ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಉತ್ತಮ ಟೀಚರ್ಸ್ ಇಲ್ಲ.

ಶ್ರೀ ಶರಣಗೌಡ ಇನಾಂದಾರ್.—ಉತ್ತಮವಾದ ಟೀಚರ್ಸ್ ಇಲ್ಲ ಎಂದು ಮಾನ್ಯಮಂತ್ರಿಗಳು ಹೇಳುತ್ತಾರೆ, ಏಡೆಡ್ ಸ್ಕೂಲುಗಳಿಗಿಂತಲೂ ಇಲ್ಲಿ ಸೌಲಭ್ಯಗಳು ಜಾಸ್ತಿ ಇವೆ, ಇದು ಪೆನ್ಷನಬಲ್ ಜಾಬ್, ಪ್ರಮೋಷನ್ ಇದೆ, ಪ್ರಾವಿಡೆಂಟ್ ಫಂಡ್ ಇದೆ, ಇಷ್ಟೆಲ್ಲಾ ಇದ್ದೂ ಕೂಡ ಇಲ್ಲಿ ಒಳ್ಳೆಯ ಟೀಚರ್ಸ್ ಬರುವುದಿಲ್ಲ ಎನ್ನುವಂತಹ ಮಾತು ಕೇಳಿ ನಾನು ಆಶ್ಚರ್ಯಪಡುತ್ತೇನೆ, ವಿದ್ಯಾಭ್ಯಾಸಕ್ಕೆ ಸಂಬಂಧಪಡದ ಮಿನಿಸ್ಟರು ಇನ್ನು ಹೇಳಿರುವುದರಿಂದ ಇದಕ್ಕೆ ನಾನು ಹೆಚ್ಚು ಹೇಳುವುದಿಲ್ಲ. ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಏಕೆ ಪರ್ಸೆಂಟೇಜ್ ಹೆಚ್ಚಾಗುತ್ತಾ ಇದೆ, ಮೆರಿಟ್‌ನಲ್ಲಿ ಬರುತ್ತಾ ಇದ್ದಾರೆ, ಸರ್ಕಾರದವರು 33 ಕೋಟಿ ರೂಪಾಯಿ ಖರ್ಚು ಮಾಡಿಯೂ ಕೂಡ ಹೈಸ್ಕೂಲುಗಳಲ್ಲಿ, ಕಾಲೇಜುಗಳಲ್ಲಿ ಕಡಿಮೆ ಪರ್ಸೆಂಟೇಜ್ ಬರುತ್ತಾ ಇದೆ ಎಂಬುದನ್ನು ವಿಚಾರ ಮಾಡಿ ನೋಡಿದ್ದರಲ್ಲಿ ನಾನು ತಿಳಿದುಕೊಂಡದ್ದು ಏನೆಂದರೆ, ಇದರಲ್ಲಿ ಎರಡು ಮಾತು ಇದೆ. ಒಂದು ಕ್ಲಾಸ್‌ನಲ್ಲಿ ಇಷ್ಟು ಹುಡುಗರು ಇರಬೇಕೆಂದು ನಿಗದಿ ಮಾಡಿದ್ದೀರಿ, ಅದನ್ನು ಯಾರೂ ಕೂಡ ಜಾರಿ ಮಾಡುವುದಿಲ್ಲ. ಸಾಧಾರಣವಾಗಿ 60ಕ್ಕಿಂತ ಮೇಲ್ಪಟ್ಟು ವಿದ್ಯಾರ್ಥಿಗಳು ಇರುತ್ತಾರೆ, ಅವರಿಗೆ ಒಬ್ಬ ಟೀಚರ್ ಯಾವ ರೀತಿಯಿಂದ ಸರಿಯಾದ ವಿದ್ಯಾಭ್ಯಾಸ ಕೊಡಬಲ್ಲ? ಯೋಗ್ಯ ರೀತಿಯಿಂದ ಕಲಿಸುವುದಕ್ಕೆ ಸಾಧ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಸ್ಟ್ರೆಂಗ್ತ್ ಕಡಿಮೆ ಮಾಡಬೇಕು 40ಕ್ಕಿಂತ ಹೆಚ್ಚು ಹುಡುಗರು ಇರಬಾರದು, ಹೆಚ್ಚು ಹುಡುಗರಿಗೆ ಅಡ್ಮಿಷನ್ ಕೊಡಬೇಕೆಂದರೆ ಇನ್ನೊಂದು ಸೆಕ್ಷನ್ ಮಾಡಬಹುದು. You can increase the sections but not increase the strength of students in a particular class. ಇದನ್ನು ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೂ ಸ್ಟ್ಯಾಂಡರ್ಡ್ ಹೆಚ್ಚಾಗುವುದಕ್ಕೆ ಸಾಧ್ಯವಿಲ್ಲ. ಎರಡನೆಯದು, ಈ ಟೀಚರ್ಸ್ ಡಾಕ್ಟರುಗಳ ಮೆಡಿಕಲ್ ಪ್ರಾಕ್ಟೀಸ್ ಯಾವ ರೀತಿ ನಡೆದಿದೆ ಆ ಪ್ರಕಾರ ನಡೆಸಿದ್ದಾರೆ. ಅದರಲ್ಲೂ ಪಿ.ಸಿ.ಎಂ.ನಲ್ಲಿ ಮನೆಗೆ ಬಂದರೆ ಟ್ಯೂಷನ್ ಕೊಡುತ್ತೇವೆ ಎಂದು ಹೇಳುತ್ತಾರೆ. ಉದಾಹರಣೆಗೆ ಪ್ರತಿಯೊಬ್ಬ ಹೈಸ್ಕೂಲು ಟೀಚರೂ ಒಂದು ಸಾವಿರಕ್ಕೂ ಮೇಲ್ಪಟ್ಟು ಪ್ರತಿ ತಿಂಗಳೂ ಗಳಿಸುತ್ತಾ ಇದ್ದಾರೆ. ಮಂತ್ರಿಗಳಿಗಿಂತಲೂ ಹೆಚ್ಚಿನ ಪಗಾರ ಬರುತ್ತಾ ಇದೆ. ಅದು ಹೇಗೆಂದರೆ, 10-15 ಬ್ಯಾಚ್ ಮಾಡುತ್ತಾರೆ. ಮುಂಜಾನೆ 6-30ಕ್ಕೆ ಒಂದು ಬ್ಯಾಚ್ 7-30ಕ್ಕೆ ಒಂದು ಬ್ಯಾಚ್, 8-30ಕ್ಕೆ ಒಂದು ಬ್ಯಾಚ್ ಹೀಗೆ ಮೂರು ಬ್ಯಾಚ್ ಬರುತ್ತದೆ. ಸಾಯಂಕಾಲ ಅದೇ ಪ್ರಕಾರ ಎರಡು ಬ್ಯಾಚ್ ಬರುತ್ತದೆ. ಈ ರೀತಿ ಕ್ಲಾಸ್‌ಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಸುಮಾರು 60-70 ಹುಡುಗರು. ಒಬ್ಬ ಹುಡುಗನಿಗೆ ಹತ್ತು ರೂಪಾಯಿಯಂತೆ 700 ರೂಪಾಯಿ ಆಯಿತು. ಈ ರೀತಿ ಖಾಸಗಿ ಟ್ಯೂಷನ್ ನಡೆಸಲು ಪರವಾನಗಿ ಕೊಟ್ಟಿರುವುದರಿಂದ ಬಹಳ ಅನಾಹುತ ನಡೆದಿದೆ. 8-9-10ನೇ ಕ್ಲಾಸ್‌ವರೆಗೂ ಈ ಮಾಸ್ಟರ್‌ಗಳವರ ಹತ್ತಿರ ಓದುತ್ತಾ ಇರತಕ್ಕ ಹುಡುಗರಿಗೆ ಅವರಿಗೆ ಪ್ರಮೋಷನ್ ಕೊಡಿಸುವ ಜವಾಬ್ದಾರಿ ಅವರ ಮೇಲೆ ಬೀಳುತ್ತಾ ಇದೆ. 10ನೇ ಕ್ಲಾಸ್‌ಗೆ ಬಂದಾಗ ಅಲ್ಲಿ ಅವರಿಂದ ಏನೂ ಮಾಡುವುದಕ್ಕಾಗದೇ ಎಸ್.ಎಸ್.ಎಲ್.ಸಿ. ಪರ್ಸೆಂಟೇಜ್ 30-35ಕ್ಕಿಂತ ಜಾಸ್ತಿ ಆಗುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಎಷ್ಟೋ ಜನರು ಫೇಲ್ ಆಗುತ್ತಾ ಇದ್ದಾರೆ. ಆದ್ದರಿಂದ ಈ ಸ್ಟ್ಯಾಂಡರ್ಡ್‌ನ್ನು ಉತ್ತಮಪಡಿಸುವುದಕ್ಕೆ ಸರ್ಕಾರದವರು ಗಮನ ಕೊಡಬೇಕೇ ಹೊರತು ಸುಮ್ಮನೆ ಹೈಸ್ಕೂಲುಗಳನ್ನು ತೆರೆಯುವುದು, ಕಾಲೇಜುಗಳನ್ನು ತೆರೆಯುವುದು, ಅವುಗಳನ್ನು ಹೆಚ್ಚು ಮಾಡುತ್ತಾ ಹೋಗುವುದರಿಂದ ಏನೇನೂ ಉಪಯೋಗವಾಗುವುದಿಲ್ಲ. ಹತ್ತು ಕೋಟಿ ಆಯಿತು, 30 ಕೋಟಿ ರೂಪಾಯಿ ಆಯಿತು ಅಂತ ಅಂದುಕೊಳ್ಳಬೇಕಾಗುತ್ತದೆ, ಆ ದೃಷ್ಟಿಯಿಂದ There is progress in expenditure but no progress in the standard of education. There is no meaning in spending huge money on education without giving due consideration to raise the standard of education particularly in high schools. ಅದು ಆಗಿಬಿಟ್ಟರೆ ಕಾಲೇಜಿನಲ್ಲೂ ಕೂಡ ಸರಿಯಾದ ಸ್ಟ್ಯಾಂಡರ್ಡ್ ಬರುತ್ತದೆ ಎಂಬ ವಿಚಾರವನ್ನು ತಮ್ಮ ಮುಂದೆ ಮಂಡಿಸುತ್ತಾ ಇದ್ದೇನೆ. ಇದರ ಕಡೆಗೆ ತೀವ್ರ ಗಮನ ಕೊಡಬೇಕು.

ಇನ್ನೊಂದು ವಿಷಯ, ಪ್ರೈಮರಿ ಸ್ಕೂಲ್ ಬಗ್ಗೆ ತಮಗೆ ಹೇಳಬೇಕಾದರೆ ಪ್ರತಿಯೊಂದು ಹಳ್ಳಿಯಲ್ಲೂ ಶಾಲೆಗಳನ್ನು ತೆರೆಯಬೇಕು ನಿಜ. ಅದರ ಜೊತೆಗೆ ಕಟ್ಟಡದ ಬಗ್ಗೆ ಕೂಡ ಹೆಚ್ಚು ಗಮನ ಕೊಡಬೇಕು ಅದಕ್ಕೆ ತಾಲ್ಲೂಕು ಬೋರ್ಡ್ ಫಂಡ್ ಕೂಡ ಇದೆ. ಕಟ್ಟಡ ಇಲ್ಲದೇ ಶಾಲೆ ಇರುವುದು ಎಂದರೆ ಸರಿಯಾದ ವಾತಾವರಣ ಬೆಳೆಯುವುದಿಲ್ಲ, ಆದ್ದರಿಂದ ಅದಕ್ಕೆ ವಿದ್ಯಾಭ್ಯಾಸದ ಇಲಾಖೆಯವರು ಲಕ್ಷ್ಯ ಕೊಡಬೇಕೆಂದು ಸೂಚಿಸುತ್ತಾ ಇದ್ದೇನೆ.

ಇನ್ನು ಟೆಕ್ನಿಕಲ್ ಎಜ್ಯುಕೇಷನ್ ಬಗ್ಗೆ ಅನೇಕ ಜನರು ಮಾತನಾಡಿದ್ದಾರೆ, ಆದರೆ ಒಂದು ಮಾತು ಹೇಳಬೇಕಾಗಿದೆ. ಟೆಕ್ನಿಕಲ್ ಇನ್‌ಸ್ಟಿಟ್ಯೂಷನ್‌ನಲ್ಲೂ ಸಾಮಾನ್ಯವಾಗಿ ಇಲ್ಲಿಯವರೆಗೂ ಡೊನೇಷನ್

(ಶ್ರೀ ಶರಣಗೌಡ ಇನಾಂದಾರ್)

ತೆಗೆದುಕೊಳ್ಳುವ ಪದ್ಧತಿ ಇತ್ತು. ಈಗ ಸೈನ್ಸ್ ಅಂಡ್ ಆರ್ಟ್ಸ್ ಕಾಲೇಜಿನಲ್ಲೂ ಕೂಡ ಡೊನೇಷನ್ ತೆಗೆದುಕೊಳ್ಳತಕ್ಕ ಪದ್ಧತಿ ಪ್ರಾರಂಭವಾಗಿದೆ. ಕಂಟ್ರೋಲ್ ಹೆಚ್ಚಾಗುತ್ತಾ ಹೆಚ್ಚಾಗುತ್ತಾ ಬ್ಲಾಕ್‌ಮಾರ್ಕೆಟ್ ಹೇಗೆ ಹೆಚ್ಚುತ್ತಿದೆಯೋ ಹಾಗೆ ಈ ವಯಸ್ಸಿನ ಬಗ್ಗೆ ನೀವು ಇಷ್ಟು ವಯಸ್ಸಿರಬೇಕು ಮತ್ತು 40 ಪರ್ಸೆಂಟ್ ಇರಬೇಕೆಂದು ರೆಸ್ಟ್ರಿಕ್ಷನ್ ಹಾಕಿದ ಮೇಲೆ ಕಾಲೇಜಿನಲ್ಲಿ ಈಗ ಏನಾಗುತ್ತಾ ಇದೆ ಎಂದರೆ, ಹತ್ತು ದಿವಸ, 20 ದಿವಸ ಅಥವಾ ಒಂದು ತಿಂಗಳು ಕಡಿಮೆ ಇದ್ದ ಪಕ್ಷದಲ್ಲಿ ಸರ್ಟಿಫಿಕೇಟ್ ಪ್ರಕಾರ ಅಡ್ಮಿಷನ್ ಕೊಡಲಿಕ್ಕೆ ಬರುವುದಿಲ್ಲ. ಆದರೆ ಡೊನೇಷನ್ ಕೊಟ್ಟರೆ ಒಂದು ಮಾತು ಹೇಳುತ್ತೇನೆ ಆ ರೀತಿ ಮಾಡಿದರೆ ಸೇರಿಸಿಕೊಳ್ಳಬಹುದು ಎಂದು ಹೇಳುತ್ತಾರೆ. ಕೋರ್ಟ್‌ನಲ್ಲಿ ಒಂದು ಅಫಿಡವಿಟ್ - ಡೇಟ್ ಸರಿಯಾಗಿಲ್ಲ ತಪ್ಪಾಗಿದೆ ಇದು ನಿಜವಾದ ಡೇಟು ಅಂತ ತೆಗೆದುಕೊಂಡು ಬಾದ ಪಕ್ಷದಲ್ಲಿ ಸೇರಿಸಿಕೊಳ್ಳುತ್ತೇವೆ ಎಂದು ಅನ್ನುತ್ತಾರೆ. ಅದರ ಜೊತೆಗೆ 200-300 ರೂಪಾಯಿ ಡೊನೇಷನ್ ಕೂಡ ತೆಗೆದುಕೊಳ್ಳುತ್ತಾ ಇದ್ದಾರೆ. ಕಾಲೇಜಿನಲ್ಲಿ ಇದು ನಡೆದಿದೆ, ಇದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಕೋರ್ಟಿನ ಅಫಿಡವಿಟ್ ಕೊಟ್ಟರೆ ಅಡ್ಮಿಷನ್‌ಗೆ ಪರವಾನಿಗಿ ಸಿಕ್ಕುತ್ತದೆ ಎಂಬ ಮಾತು ಇದು ಬ್ಲಾಕ್‌ಮಾರ್ಕೆಟ್‌ಗೆ ಅವಕಾಶವಾಗುತ್ತಾ ಇದೆ ಇದನ್ನು ಸರಿಯಾಗಿ ವಿಚಾರ ಮಾಡಬೇಕೆಂದು ಹೇಳುತ್ತಾ ಇದ್ದೇನೆ. ಸುಮ್ಮನೆ ಕೋರ್ಟಿನಲ್ಲಿ ಒಂದು ಅಫಿಡವಿಟ್ ಕೊಟ್ಟರೆ ಸಾಲದು. ಅದಕ್ಕೆ ಸರಿಯಾದ ವಿಟ್‌ನೆಸ್ ತೆಗೆದುಕೊಳ್ಳುವುದಿಲ್ಲ, ಕೋರ್ಟಿನ ಪ್ರೊಸೀಜರನ್ನು ಅನುಸರಿಸುವುದಿಲ್ಲ; ಬರಿಯ ಒಂದು ಹಾರಾಸ್‌ಕೋಪಿನ ಮೇಲೆ ಅವರು ಡಿಕ್ರಿ ಕೊಡುವುದಿಲ್ಲ. ಇಂಥ ಒಂದು ಕೆಲಸವನ್ನು ಹೀಗೆ ಮರೆಮಾಚಿ ಮಾಡುತ್ತಿದ್ದಾರೆ. ಆ ಒಂದು ಡೊನೇಷನ್ ಪದ್ಧತಿಯಿಂದ ಇಷ್ಟೆಲ್ಲಾ ಕೆಲಸಗಳು ನಡೆಯುತ್ತಿವೆ. ಸರ್ಕಾರದವರು ಇತ್ತಕಡೆಗೆ ಕೂಡಲೆ ತಮ್ಮ ಗಮನ ಕೊಡಬೇಕು. ಹೀಗೇ ನಮ್ಮ ಗುಲ್ಬರ್ಗದಲ್ಲಿರತಕ್ಕ ಕಾಲೇಜಿನಲ್ಲೂ ಪಗಡೀ ವಿಚಾರ ಬಹಳವಾಗಿ ನಡೆಯುತ್ತಿದೆ. ಈ ವಿಚಾರ ಮಾನ್ಯ ಜತ್ತಿಯವರಿಗೂ ಗೊತ್ತಿದೆ ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಿಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಒಟ್ಟು 5,020 ಮೆಡಿಕಲ್ ಸೀಟುಗಳೂ ಮತ್ತು 3,000 ಇಂಜಿನಿಯರಿಂಗ್ ಸೀಟುಗಳೂ ಇವೆ. ಆದರೆ ನಮ್ಮ ಹೈದ್ರಾಬಾದಿನಲ್ಲಿರತಕ್ಕ ಮೆಡಿಕಲ್ ಕಾಲೇಜಿನಲ್ಲಿ ಅಲ್ಲಿರತಕ್ಕ ಸೀಟುಗಳಲ್ಲಿ ಶೇಕಡ 24 ಸೀಟುಗಳಂತೆ ಹೈದ್ರಾಬಾದಿನ ಜನರಿಗೆ ಕೊಡಬೇಕೆಂಬ ನಿಯಮವಿದೆ. ಆದರೆ ಇಲ್ಲಿಯತನಕ ನಮ್ಮ ಹೈದ್ರಾಬಾದ್ ಕರ್ಣಾಟಕದಲ್ಲಿ ಇರತಕ್ಕ ಜನರಿಗೆ 7-8 ಸೀಟುಗಳೂ ಕೂಡ ಸಿಕ್ಕಿಲ್ಲ. ಅವೆಲ್ಲಾ ಅಕ್ಕಪಕ್ಕದಲ್ಲಿರತಕ್ಕ ಆಂಧ್ರ ಮತ್ತು ಮಹಾರಾಷ್ಟ್ರದವರಿಗೆ ಹಂಚಲಾಗಿದೆ. ಯಾರು ಜಾಸ್ತಿ ಪಗಡಿ ಕೊಡುತ್ತಾರೋ ಅಂಥವರಿಗೆ ಮಾತ್ರ ಅಲ್ಲಿ ಸೀಟುಗಳು ಸಿಕ್ಕುತ್ತಿವೆ. ಆದರೆ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಎಂದಿನಿಂದ ನಮ್ಮಲ್ಲಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳು ಸ್ಥಾಪಿತವಾದವೋ ಅಂದಿನಿಂದಲೂ ಆ ಹೈದ್ರಾಬಾದ್ ಕರ್ಣಾಟಕದ ಜನರಿಗೆ ಇಲ್ಲಿಯತನಕ ಎಷ್ಟು ಸೀಟುಗಳು ದೊರೆಯಬೇಕಾಗಿತ್ತೋ ಅಷ್ಟನ್ನು ಇವರಿಗೆ ಕೊಡದೆ ಅವುಗಳನ್ನೆಲ್ಲಾ ಆಂಧ್ರ ಮತ್ತು ಮಹಾರಾಷ್ಟ್ರದವರಿಗೆ ಹಂಚಿ ಹಣವನ್ನು ಪಡಿದಿದ್ದಾರೆ. ಇದನ್ನು ಅವರು ಕೂಡಲೆ ವಿಚಾರಣೆಮಾಡಬೇಕು. ಇದು ಏನಾದರೂ ಸುಳ್ಳಾಗಿದ್ದಲ್ಲಿ ನಾನು ನನ್ನ ಈ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗುವುದಕ್ಕೆ ತಯಾರಾಗಿದ್ದೇವೆ. ಈ ದಿವಸ ಅಲ್ಲಿ ಇದು ಬಹಳ ಗಂಭೀರ ಪರಿಸ್ಥಿತಿಗೇರಿದೆ. ಬಹಳ ಜನರಿಗೆ ತುಂಬಾ ಅನ್ಯಾಯವಾಗಿದೆ. ಅನೇಕ ಹುಡುಗರಿಗೆ ಅನ್ಯಾಯವಾಗಿದೆ. ಇದು ಬಹಳ ದುರ್ದೈವದ ಸಂಗತಿ. ನಾವು ಅಲ್ಲಿ ಕಟ್ಟಡವನ್ನು ಕಟ್ಟುವುದಕ್ಕಾಗಿ 5 ಸಾವಿರ ರೂಪಾಯಿಗಳನ್ನು ಆ ಭಾಗದ ಜನರಿಂದ ವಸೂಲ್ಮಾಡಿದ್ದೇವೆ. ಹಾಗಿದ್ದರೂ ಅಲ್ಲಿಯ ಜನರಿಗೆ ಸೀಟನ್ನು ಕೊಡದೆ ಆಂಧ್ರ ಮತ್ತು ಮಹಾರಾಷ್ಟ್ರದ ಹುಡುಗರಿಗೆ ಸೀಟುಗಳನ್ನು ಕೊಟ್ಟಿದ್ದಾರೆ. ಈ ಹಿಂದೆ ಮಾತನಾಡಿದ ಶ್ರೀಮಾನ್ ಸಿದ್ಧವೀರಪ್ಪನವರು ಮಣಿಪಾಲ್ ಕಾಲೇಜಿನಲ್ಲಿ ದುಡ್ಡನ್ನು ತೆಗೆದುಕೊಂಡಿದ್ದಕ್ಕೆ ಒಂದು ರಶೀದಿಯನ್ನಾದರೂ ಕೊಡುತ್ತಾರೆಂದು ಹೇಳಿದರು. ಇಲ್ಲಿ ಅದು ಕೂಡ ಕೊಡುವುದಿಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲರೂ ಇಲ್ಲೇ ಇದ್ದಾರೆ ಅವರಿಗೆ ಈ ವಿಚಾರಗಳೆಲ್ಲಾ ಗೊತ್ತಿದೆ. ಅಲ್ಲಿ ಹೀಗೆ ಪಗಡಿ ತೆಗೆದುಕೊಳ್ಳುವುದು ಒಂದೇ ಅಲ್ಲ. ಇನ್ನೂ ಒಂದು ವಿಚಿತ್ರವಾದ ಸಂಗತಿ ಅಲ್ಲಿ ನಡೆಯುತ್ತಿದೆ. ಅದನ್ನು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ಒಂದು ಸೀಟಿಗೆ 5 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅಷ್ಟಕ್ಕೆ ಮಾತ್ರ ಪಾವತಿ ಕೊಟ್ಟು ಉಳಿದುದನ್ನು ಅವರು ಗುಪ್ತ ಮಾಡುತ್ತಿದ್ದಾರೆಂದು ಹೇಳುತ್ತೀರಾ ?

ಶ್ರೀ ಶರಣಗೌಡ ಇನಾಂದಾರ್.—ಅಲ್ಲಿ ಮೊದಲು 5 ಸಾವಿರ ಕ್ಯಾಪಿಟೇಷ್ ಫೀ ತುಂಬಿದ ಮೇಲೆ ಕೊಡತಕ್ಕ ಇನ್ನು 5 ಸಾವಿರ ಅದು ಲೆಕ್ಕಕ್ಕೇ ಬರುವುದಿಲ್ಲ. ಹೀಗೆ 24 ಸೀಟುಗಳಿಗೆ ಇಲ್ಲಿಯವರೆಗೂ ಎಷ್ಟು ಹಣವನ್ನು ಪಡೆದಿದ್ದಾರೆಂಬುದನ್ನು ತಾವೆಲ್ಲರೂ ಲೆಕ್ಕಮಾಡಬೇಕು. ಇದರ ಜೊತೆಗೆ ಯಾರಾದರೂ ಒಬ್ಬ ಹುಡುಗ ತನಗೆ ಇದೇ ವರ್ಷ ಸೀಟನ್ನು ಕೊಡಬೇಕೆಂದರೆ ಅವನು 10 ಸಾವಿರ ಪಗಡಿ ತುಂಬಬೇಕು, 5-6 ಸಾವಿರ ಕೊಡತಕ್ಕವರಿಗೆ ಅದರ ಮೂರನೆಯ ವರ್ಷ ಸೀಟನ್ನು ಕೊಡುತ್ತಾರೆ. 3-4 ಸಾವಿರ ರೂಪಾಯಿಗಳನ್ನು ಕೊಡತಕ್ಕವರು ಮೂರು ವರ್ಷ ಸೀಟಿಗೆ ಕಾಯಬೇಕು. ಈ ದಿವಸ ಜನರಲ್ ಪೂಲಿನಲ್ಲಿ ಬರತಕ್ಕ ಹುಡುಗನೂ ಕೂಡ ಮೊದಲನೇ ವರ್ಷ ಸೀಟನ್ನು ಪಡೆಯಬೇಕಾದರೆ 10 ಸಾವಿರ ರೂಪಾಯಿಗಳನ್ನು ಕೊಡಬೇಕು. 6 ಸಾವಿರ ಕೊಟ್ಟವರಿಗೆ ಅದರ ನೆಕ್ಸ್ಟ್ ಇಯರ್ ಸೀಟ್ ಸಿಕ್ಕುತ್ತದೆ. 3-4 ಸಾವಿರ ಕೊಟ್ಟವರಿಗೆ ಮೂರನೆ ವರ್ಷದಲ್ಲಿ ಸೀಟುಗಳನ್ನು ರಿಜರ್ವ್ ಮಾಡುತ್ತಾರೆ. ಹೀಗೆ ಸೀಟುಗಳನ್ನು ರಿಜರ್ವ್ ಮಾಡತಕ್ಕ ಪದ್ಧತಿ ಬೇರೆ ಇದೆ. ಈ ವಿಚಾರಗಳೆಲ್ಲಾ ಸರ್ಕಾರದವರಿಗೆ ಗೊತ್ತಿದೆ. ಗೊತ್ತಿದ್ದೂ ಇವರು ಕಣ್ಣುಮುಚ್ಚಿ ಕುಳಿತ್ತಿದ್ದಾರೆ. ಇದರ ಕಾರಣ ನನಗೆ ಗೊತ್ತಾಗುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಇದರಿಂದ ದೇಶಕ್ಕೂ, ಸಮಾಜಕ್ಕೂ ಬಹಳ ಅನ್ಯಾಯವಾಗುತ್ತದೆಂದು ಹೇಳಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎನ್. ಕೊಟ್ರಬಸವಯ್ಯ ಸೋಗಿ (ಹಡಗಲ).—ಮಾನ್ಯ ಸಭಾಪತಿಗಳೇ, ವಿದ್ಯಾಭ್ಯಾಸದ ವಿಚಾರಕ್ಕೆ ಸಂಬಂಧಪಟ್ಟಹಾಗೆ ನಮ್ಮ ಮಾನ್ಯ ವಿದ್ಯಾಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ 33,57,28,700 ರೂಪಾಯಿಗಳ ಬೇಡಿಕೆಯನ್ನು ನಾನು ಸಮರ್ಥಿಸುತ್ತಾ ಈ ಶಿಕ್ಷಣ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಹಾಗೂ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ.

ಶಿಕ್ಷಣ—ಇದು ಒಂದು ಬಹಳ ಗಹನವಾದ ವಿಚಾರ. ಇಡೀ ಮಾನವತೆಯನ್ನು ಮಾನವತೆಯಾಗಿ ತಯಾರಿಸುವಂಥ ವಿಚಾರ ಇದು. ಅದಕ್ಕಾಗಿ ನಮ್ಮ ಸರ್ಕಾರದವರು ಬಹಳ ಉದಾತ್ತಭಾವನೆಯಿಂದ ಈ ಬಾಬಿಗೆ ಬಹಳ ಹಣವನ್ನು ಪೂರೈಕೆ ಮಾಡಿದ್ದಾರೆ. ಇದು ಬಹಳ ಸ್ತುತ್ಯಾರ್ಹವಾದಂಥ ವಿಷಯ. ನಮ್ಮ ದೇಶದಲ್ಲಿ ಸರ್ಕಾರದವರು ಶಿಕ್ಷಣದ ಪ್ರಗತಿಗಾಗಿ ನಾನಾ ವಿಧವಾದ ಪದ್ಧತಿಗಳನ್ನೂ ಮತ್ತು ಕಾರ್ಯಕ್ರಮಗಳನ್ನೂ ಕೈಗೊಂಡಿದ್ದಾರೆ. ಅವೆಲ್ಲವೂ ಈಗ ಕಾರ್ಯಗತವಾಗುತ್ತಿವೆ. ಆದರೆ ಸರ್ಕಾರದವರು ಇಷ್ಟೆಲ್ಲಾ ಖರ್ಚುಮಾಡುತ್ತಿದ್ದಾಗ್ಗೂ ಇದರ ಪೂರ್ಣ ಲಾಭ ದೇಶದಲ್ಲಿರತಕ್ಕ ಮಹಾ ಜನರಿಗೆ ಸಿಕ್ಕುತ್ತಿದೆಯೇ ಎಂಬ ವಿಚಾರದಲ್ಲಿ ನನಗೆ ಸಂಶಯವುಂಟಾಗುತ್ತಿದೆ. ನಾವು ಈ ಬಗ್ಗೆ ಕೆಲವು ಸುಧಾರಣೆಗಳನ್ನು ಮಾಡಬೇಕಾಗಿದೆ. ಆದರೆ ನಮ್ಮ ದೇಶದಲ್ಲಿರತಕ್ಕ ಶಿಕ್ಷಣ ಪದ್ಧತಿ ಅಷ್ಟು ತೃಪ್ತಿಕರವಾಗಿಲ್ಲವೆಂದು ಅನೇಕ ಮಹಾ ಮಹಾ ತಜ್ಞರು ಹೇಳಿದ್ದಾರೆ. ಆದರೆ ನಮ್ಮ ಶಿಕ್ಷಣವು ಒಂದು ಸರಿಯಾದ ದಿಶೆಯಲ್ಲಿ ಸಾಗುತ್ತಿಲ್ಲ, ಆಗುತ್ತಿಲ್ಲವೆಂದು ನನ್ನ ಅಭಿಪ್ರಾಯ. ಈ ವಿಚಾರದಲ್ಲಿ ನಮ್ಮ ಮಾಜಿ ರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್‌ರವರೂ ಮತ್ತು ಹಾಲಿ ರಾಷ್ಟ್ರಾಧ್ಯಕ್ಷರಾಗಿರತಕ್ಕ ಡಾ. ಜಕೀರ್ ಹುಸೇನ್‌ರವರೂ ಸಹಾ ನಮ್ಮ ದೇಶದಲ್ಲಿ ಅನುಸರಿಸುತ್ತಿರುವ ಶಿಕ್ಷಣ ನೀತಿ ತೃಪ್ತಿಕರವಾಗಿಲ್ಲ ಎಂಬುದಾಗಿ ಹೇಳಿದ್ದಾರೆ. ಇನ್ನೂ ಅನೇಕ ದೊಡ್ಡ ದೊಡ್ಡ ತಜ್ಞರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ತಜ್ಞರೆಲ್ಲರೂ ಹೀಗೆ ಹೇಳುತ್ತಿದ್ದರೆ ಇದನ್ನು ಇನ್ನು ಸರಿಪಡಿಸತಕ್ಕವರು ಯಾರು ಎಂಬ ಜಿಜ್ಞಾಸೆ ಉಂಟಾಗಿದೆ. U. G. C. ಅಧ್ಯಕ್ಷರಾದ ಕೊಠಾರಿಯವರು ರಷ್ಯಾದೇಶಕ್ಕೆ ಹೋಗಿ ಬಂದಮೇಲೆ ಅಲ್ಲಿನ ವಿದ್ಯಾಭ್ಯಾಸ ಕ್ರಮವನ್ನೂ ನಮ್ಮ ದೇಶದಲ್ಲಿ ನಡೆಯುತ್ತಿರುವ ವಿದ್ಯಾಭ್ಯಾಸ ಕ್ರಮವನ್ನೂ ಹೋಲಿಸಿ—ರಷ್ಯಾದೇಶದಲ್ಲಿ ಅವರು ಕೇವಲ 10-15 ವರ್ಷಗಳಲ್ಲಿ ಬಹಳ ಅತ್ಯದ್ಭುತ ಪ್ರಗತಿಯನ್ನು ಸಾಧಿಸಿದ್ದಾರೆಂದೂ ಆದರೆ ಇಲ್ಲಿ ಅಂಥಾ ಸಾಧನೆಗಳೇನೂ ನಡೆದಿಲ್ಲವೆಂದೂ ಅವರು ಹೇಳುತ್ತಿದ್ದಾರೆ. ಹೀಗೆ ಆ ಕೊಠಾರಿಯವರೇ ಹೇಳುತ್ತಿರುವುದರಿಂದ ಇಲ್ಲಿ ನಮ್ಮ ಶಿಕ್ಷಣಪದ್ಧತಿಯನ್ನು ಯಾವ ರೀತಿಯಾಗಿ ಬದಲಾವಣೆಮಾಡಬೇಕು, ಇದನ್ನು ಹೇಗೆ ಸರಿಪಡಿಸಬೇಕು, ಇದಕ್ಕೆ ಯಾವ ರೀತಿ ಒಂದು ಹೊಸ ರೂಪವನ್ನು ಕೊಡಬೇಕು ಎಂಬುದನ್ನೆಲ್ಲಾ ಆಡಳಿತದ ಜವಾಬ್ದಾರಿಯನ್ನು ಹೊತ್ತಿರತಕ್ಕ ಜನರು ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಮನಸ್ಸನ್ನು ಮಾಡಬೇಕು. ನಮ್ಮ ದೇಶದಲ್ಲಿ ಆ ಇಂಗ್ಲೀಷರಿದ್ದ ಕಾಲದಲ್ಲಿ ಏನು ಒಂದು ವಿದ್ಯಾಭ್ಯಾಸ ನಡೆಯುತ್ತಿತ್ತೋ ಈಗಲೂ ಅದೇ ನಡೆದುಕೊಂಡು ಬರುತ್ತಿದೆ. ಅದು ಒಂದು 'ಜಾಬ್ ಸೀಕಿಂಗ್' (ನೌಕರಿ ಅರಸುವ) ಶಿಕ್ಷಣ. ಆದುದರಿಂದ ಅದು ಸರಿಯಾದ್ದಲ್ಲ. ಅದು ಕೂಡಲೆ ರದ್ದಾಗಬೇಕು. ನಮ್ಮ ರಾಷ್ಟ್ರಪಿತ ಬಾಪೂಜಿಯವರು ವೃತ್ತಿ ಶಿಕ್ಷಣದ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂದು ಹೇಳಿದ್ದರು. ನಾವು ಅದನ್ನು ಜಾರಿಗೆ ತರಲಿಲ್ಲ. ಅತ್ತಕಡೆಗೆ ನಮ್ಮ ಗಮನ ಹರಿಯಲಿಲ್ಲ. ಅದು ಇಂದಿಗೂ ಒಂದು ಕನಸಾಗೇ ಉಳಿದಿದೆ. ಆದುದರಿಂದಲೇ ನಮ್ಮ ಇಂದಿನ

(ಶ್ರೀ ಎಂ. ಎನ್. ಕೊಟ್ರಬಸವಯ್ಯ ಸೋಗಿ)

ಶಿಕ್ಷಣ ಪದ್ಧತಿ ಅಷ್ಟು ತೃಪ್ತಿಕರವಾಗಿಲ್ಲ ಎಂದು ಎಲ್ಲರೂ ಹೇಳುತ್ತಿದ್ದಾರೆ. ಅಷ್ಟೆಲ್ಲಾ ಅವರು ಹೇಳಿದ್ದಾಗ್ಯೂ ಅದನ್ನು ಜಾರಿಗೆ ತಾರದಿರುವುದು ತುಂಬಾ ವ್ಯಸನಕರವಾದ ಸಂಗತಿ. ಈಗಲಾದರೂ ಇತ್ತ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಜನರಿಗೆ ಓದುವುದು ಬರೆಯುವುದು ಬಾರದಿದ್ದರೂ ಅವರೇನೂ ಶಕ್ತಿಹೀನರಾಗಿಲ್ಲ. ಅವರಲ್ಲಿ ಕೆಲಸಮಾಡತಕ್ಕ ಶಕ್ತಿ ಇದೆ. ಸಂಪಾದನೆ ಮಾಡತಕ್ಕ ಚೈತನ್ಯ ಅವರಲ್ಲಿದೆ. ಆದರೆ ಅವಿದ್ಯಾವಂತರ ಮಾತು ಹಾಗಿರಲಿ. ಈ ದಿವಸ ದೇಶದಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿರತಕ್ಕ ಜನರೂ ಹಾಗೂ ಡಿಗ್ರಿ ಪಡೆದಿರತಕ್ಕ ಅನೇಕ ಜನರು ತಮ್ಮ ಜೀವನದ ಸಮಸ್ಯೆಯನ್ನು ಎದುರಿಸಲಾರದೆ ಏನುಮಾಡುವುದು ಎಂದು ಕೈ ಕಟ್ಟಿ ಕುಳಿತಿರುವ ಮಂದಿ ಬಹಳ ಇದೆ. ನಾವು ಇಂದು ಇಂಥಾ ಒಂದು ದೊಡ್ಡ ಪ್ರಶ್ನೆಯನ್ನು ಎದುರಿಸ ಬೇಕಾಗಿ ಬಂದಿದೆ. ಈ ದಿವಸ ತಾವು ವಿದ್ಯಾವಂತರು ಎಂದು ಹೇಳಿಕೊಳ್ಳುತ್ತಿರುವ ಜನರಿಗೆ ಓದುವುದು ಬರೆಯುವುದು ಇವೆರಡನ್ನು ಬಿಟ್ಟರೆ ಅವರಿಗೆ ಮತ್ತೊಂದು ವಿದ್ಯೆ ಗೊತ್ತಿರುವುದಿಲ್ಲ. ವಿದ್ಯಾವಂತ ರೆಂದು ಹೇಳಿಕೊಳ್ಳತಕ್ಕ ಜನರಿಗೆ ಸರಿಯಾಗಿ ಕಸವನ್ನು ಗುಡಿಸುವುದಕ್ಕೂ ಕೂಡ ಬರುವುದಿಲ್ಲ.

11-30 A.M.

ಅಂತಹ ಪರಿಸ್ಥಿತಿ ಈಗಿನ ಶಿಕ್ಷಣ ಪದ್ಧತಿಯಲ್ಲಿದೆ, ಕನಿಷ್ಟ ಪಕ್ಷ ಒಂದು ಕಪ್ ಚಾ ಮಾಡುವುದಕ್ಕೆ ಬರು ವುದಿಲ್ಲ. ಇದು ಹೋಗಬೇಕು. ಜೀವನ ಮಾರ್ಗಕ್ಕೆ ಅವಶ್ಯಕವಾದ ವೃತ್ತಿಯನ್ನು ಅಲ್ಲಿ ಬೆಳಸಬೇಕು. ಇವು ಮೂಲಭೂತವಾದ ಹಾಗೂ ತಾತ್ವಿಕವಾದ ಪ್ರಶ್ನೆಯೆಂಬುದಾಗಿ ನಾನು ಸರ್ಕಾರದ ಮುಂದೆ ಇಡುತ್ತಿದ್ದೇನೆ. ಈಗಿನ ಶಿಕ್ಷಣ ಹಂತದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಶಿಕ್ಷಣವೆಂದು ಮೂರು ಹಂತಗಳಿವೆ. ಆದರೆ ಈಗ ಸರ್ಕಾರದವರು ತೆಗೆದುಕೊಂಡಿರುವ ಯೋಜನೆ ಗಳು ಗ್ರಾಮಾಂತರ ಪ್ರದೇಶಗಳಲ್ಲಿ ಲಾಭದಾಯಕವಾಗಿಲ್ಲ. ಇದರಲ್ಲಿ ಸರ್ಕಾರದವರ ತಪ್ಪು ಇದೆ. ಯಾವುದೋ ಒಂದು ಹಳ್ಳಿಯ ಶಾಲೆಯಲ್ಲಿ ಒಬ್ಬ ಮಾಸ್ತರು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಶಿಕ್ಷಣ ಅಧಿಕಾರಿಗಳನ್ನು ಮತ್ತು ಮಂತ್ರಿಗಳನ್ನು ನಿಂದನೆ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳು ಸರಿಯಾಗಿ ನಡೆದುಕೊಳ್ಳುವಹಾಗೆ ನೋಡಿಕೊಳ್ಳಬೇಕು. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳು ಸಾಕಷ್ಟು ತೃಪ್ತಿಕರವಾಗಿ ನಡೆಯುತ್ತಾ ಇಲ್ಲ. ಈಗ ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಅದೊಂದೇ ಅಲ್ಲ. ಈಗಿನ ನಿತ್ಯ ಜೀವನದಲ್ಲಿ ನಾವು ನೋಡುವುದಾದರೆ ದೇಶಾದ್ಯಂತ ಎಲ್ಲೆಡೆಯಲ್ಲೂ ವಿದಾರ್ಥಿಗಳ ಒತ್ತಡ ಬಹಳ ಜಾಸ್ತಿಯಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಸ್ಥಳಾವಕಾಶವಿಲ್ಲದೆ ವಿದ್ಯಾರ್ಥಿಗಳ ಒತ್ತಡವೇ ಜಾಸ್ತಿಯಾಗುತ್ತಿದೆ. ಈಗ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರುವ ಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವ ರೀತಿಯಲ್ಲಿದೆ. ಅದಕ್ಕನುಗುಣವಾಗಿ ಸ್ಥಳಾವಕಾಶವನ್ನು ಒದಗಿಸಲು ಸರ್ಕಾರದವರಿಗೆ ಬಹಳ ಕಷ್ಟವಾಗಿದೆ. ವ್ಯವಸಾಯೋಪಕರಣಗಳನ್ನು ರೈತರಿಗೆ ಒದಗಿಸುವುದರಲ್ಲಿ ಸರ್ಕಾರದವರು ಯಾವ ರೀತಿಯ ಉದಾ ಸೀನಭಾವನೆಯನ್ನು ತಾಳಿದ್ದಾರೋ ಅದೇ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಸ್ಥಳಾವಕಾಶ ವನ್ನು ಒದಗಿಸುವ ಬಗ್ಗೆ ಒಂದು ವಿಧವಾದ ಉದಾಸೀನ ಮನೋಭಾವನೆಯನ್ನು ತಾಳಿದ್ದಾರೆ. ಶಾಲಾ ಮಕ್ಕಳಿಗೆ ಶಾಲೆಗಳಲ್ಲಿ ಸರಿಯಾದ ಸ್ಥಳಾವಕಾಶವಿಲ್ಲದೆ ಇರುವುದು ಅದು ದೇಶಾದ್ಯಂತ ಇರುವ ಪ್ರಸಂಗವಾಗಿದೆ. ತಾಲ್ಲೂಕು ಬೋರ್ಡಿನವರಿಗೆ ಶಾಲೆಗಳಿಗೆ ಕಟ್ಟಡ ಕಟ್ಟಿಸಿಕೊಳ್ಳುವುದ ಕ್ಕಾಗಿ ಈಗ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರ. ಒಂದುವೇಳೆ ಅವರು ಅದನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ ಆಗ ಸರ್ಕಾರದವರೇ ಅದನ್ನು ಕಟ್ಟಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಶಿಕ್ಷಣ ಖಾತೆಯಲ್ಲಿ ಶಾಲಾ ಕಟ್ಟಡಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಹೆಚ್ಚಿನ ರೀತಿಯಲ್ಲಿ ಸ್ಥಳಾವಕಾಶವನ್ನುಂಟುಮಾಡಬೇಕೆಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನ. ಪ್ರತಿಯೊಂದಕ್ಕೂ ಟೈಪ್ ಡಿಸೈನ್ ಇರಬೇಕು, ಎನ್ನುತ್ತಾರೆ. ಒಂದು ಕೋಣೆಯಲ್ಲಿ 45 ವಿದಾರ್ಥಿಗಳು ಕೂಡುವಂತೆ ವ್ಯವಸ್ಥೆ ಇರಬೇಕು. ಅದಕ್ಕಾಗಿ 6 ಸಾವಿರ ರೂಪಾಯಿಗಳು ಖರ್ಚಾಗುತ್ತವೆಂದು ಅಂದಾಜುಮಾಡಿ ದೆಯೆಂದು ಹೇಳಿದ್ದಾರೆ. ಆದರೆ ಸ್ಥಳದಲ್ಲಿ ಸಿಗತಕ್ಕಂಥ ವಸ್ತುಗಳನ್ನು ಹಾಗೂ ಲೋಕಲ್ ಮೆಟೀರಿ ಯಲ್ಸನ್ನು ಉಪಯೋಗ ಮಾಡಿಕೊಂಡು ಶಾಲಾ ಕಟ್ಟಡಗಳನ್ನು ಕಟ್ಟಬೇಕು. ಆಗ ಒಂದು ಕೋಣೆಗೆ ಕೇವಲ 2—3 ಸಾವಿರ ರೂಪಾಯಿಗಳ ಖರ್ಚು ಆಗಬಹುದು. ಅದಕ್ಕೆ ಸರ್ಕಾರದವರು ಅವಕಾಶವನ್ನು ಮಾಡಿಕೊಡಬೇಕು. ಯಾವ ರೀತಿಯಲ್ಲಿಯೂ ಇಂಥಾದ್ದೇ ಟೈಪ್ ಡಿಸೈನ್ ಇರಬೇ ಕೆಂದು ಒತ್ತಾಯ ಮಾಡದೇ ಇರುವ ಅವಕಾಶವನ್ನು ಮಾಡಿಕೊಡಬೇಕು.

ಇನ್ನು ಶಿಕ್ಷಕರ ವಿಷಯ. ಅದು ಬಹಳ ದುರ್ದೆಶೆಯಲ್ಲಿದೆ. ಶಾಲೆಗಳಲ್ಲಿ ಶಿಕ್ಷಕರು ಯಾವ ರೀತಿಯಲ್ಲಿ ಪಾಠ ಹೇಳುತ್ತಿದ್ದಾರೆ ಎಂಬುದನ್ನು ಒಂದೆರಡು ಉದಾಹರಣೆಗಳಿಂದ ಇಲ್ಲಿ ಸ್ಪಷ್ಟಪಡಿಸ ಬೇಕಾಗಿದೆ. ಒಂದು ಕಡೆ ಶಾಲೆಯಲ್ಲಿ ಉಪಾಧ್ಯಾಯರು ಪಾಠವನ್ನು ಮಾಡುತ್ತಾ ಮಾಡುತ್ತಾ ಹಾಗೆಯೇ ಸ್ವಲ್ಪ ತೂಕಡಿಸುತ್ತಿದ್ದರು. ಅಕಸ್ಮಾತ್ತಾಗಿ ಆ ಸಮಯಕ್ಕೆ ಸರಿಯಾಗಿ ಇನ್‌ಸ್ಪೆಕ್ಟರ್ ಬಂದಿದ್ದರಿಂದ, ಇದೆಲ್ಲಾ ಕುಂಭಕರ್ಣನ ಪಾಠ ಎಂಬುದಾಗಿ ಹೇಳಿದರಂತೆ. ಕುಂಭಕರ್ಣನ ನಿದ್ರೆ ಯೆಂದು ಹೇಳುವ ರೀತಿಯ ಪಾಠ ಈಗ ಇದೆ. ಇನ್ನೊಂದು ವಿಷಯ. ಒಂದು ಸಾರಿ ಶಿಕ್ಷಕನೇ ವಿದ್ಯಾರ್ಥಿಗೆ ಬೀಡಿ, ಸಿಗರೇಟ್ ಅಂಗಡಿಗೆ ಹೋಗಿ ಒಂದು ಕಟ್ಟು ಬೀಡಿ ತೆಗೆದುಕೊಂಡು ಬಾ ಎಂಬು ದಾಗಿ ಹೇಳುತ್ತಿದ್ದನು. ಇಂತಹ ಶಾಲೆಗಳಲ್ಲಿ ಬೇಕಿಲ್ಲ. ಬರೀ ಪುಸ್ತಕದ ಪಾಠ ಹೇಳಿದರೆ ಶಾಲೆಗ ಳಲ್ಲಿ ಅದರಿಂದೇನೂ ಪ್ರಯೋಜನವಿಲ್ಲ. ವಿದ್ಯಾರ್ಥಿಗಳಲ್ಲಿ ನಿಜವಾದ ಶಿಕ್ಷಣ ಬಂದೇ ಬರಬೇಕು. ಅದನ್ನು ಬಿಟ್ಟು ಬರೀ ಪುಸ್ತಕದ ಪಾಠವನ್ನು ಉಪದೇಶ ಮಾಡುತ್ತಾ ಹೋದರೆ ಅದರಿಂದ ಅಷ್ಟಾಗಿ ವಿದ್ಯಾರ್ಥಿಗಳು ಉಪಯೋಗವನ್ನು ಹೊಂದಲಾರರು. ಸರ್ಕಾರದವರು ಇನ್ನೂ ಅವರ ರೀತಿನೀತಿಗಳ ಕಡೆಗೆ ಲಕ್ಷ್ಯ ಕೊಡುತ್ತಾ ಇಲ್ಲ. ಅಂತಹವರ ಬಗ್ಗೆ ಕೂಡಲೇ ಯೋಗ್ಯ ಕ್ರಮವನ್ನು ತೆಗೆದುಕೊ ಳ್ಳಬೇಕು. ಶಾಲೆಗಳ ಬಗ್ಗೆ ನಾನು ಈಗ ರಸ್ಕಿನ್ ಅವರು ಹೇಳಿದ ಒಂದು ಮಾತನ್ನು ಹೇಳುತ್ತೇನೆ. ಅದು ಈ ರೀತಿ ಇದೆ : "The aim of education is not only to teach them what they do not know, but it is necessary to teach them to behave as they do not behave." ಆದ್ದರಿಂದ ಅವರಿಗೆ ನೀತಿ ಶಿಕ್ಷಣ ಹೇಳಬೇಕು. ಬರೀ ಪಠ್ಯ ಪುಸ್ತಕಗಳ ಶಿಕ್ಷಣ ಏನೇನೂ ಸಾಲದು. ಜೀವನ ಶಿಕ್ಷಣಕ್ಕೆ ಬೇಕಾದ ರೀತಿನೀತಿಗಳನ್ನು ಅಲ್ಲಿ ಭೋದಿಸುವ ಹಾಗೆ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಮಾಧ್ಯಮಿಕ ಶಾಲೆಗಳ ಆಡಳಿತವನ್ನು ಬಹುಶಃ ಬಹುಮಟ್ಟಿಗೆ ತಾಲ್ಲೂಕ್ ಬೋರ್ಡಿನವ ರಿಗೆ ವಹಿಸಿಕೊಟ್ಟಿದ್ದಾರೆ. ಇದಲ್ಲದೆ ಈಗ ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ತಾಲ್ಲೂಕುಬೋರ್ಡ್ ಶಾಲೆಗಳು, ಸರ್ಕಾರಿ ಶಾಲೆಗಳು, ಖಾಸಗಿ ಶಾಲೆಗಳು, ಸಮಾಜ ಕಲ್ಯಾಣ ಶಾಖೆಯ ಶಾಲೆಗಳು, ಮುನಿಸಿಪಲ್ ಶಾಲೆಗಳು—ಹೀಗೆ ಬೇಕಾದಷ್ಟು ಶಾಲೆಗಳಿವೆ. ಅವುಗಳಲ್ಲಿ ನಾನಾವಿಧವಾದ ಆಡಳಿತ ಪದ್ಧತಿ ಇದೆ. ನಮ್ಮ ಬಳ್ಳಾರಿಯ ಜಿಲ್ಲೆಯಲ್ಲಿ ಬರೀ ಮ್ಯಾನೇಜ್‌ಮೆಂಟಿನ ವರು ನಡೆಸತಕ್ಕ ಶಾಲೆಗಳಿವೆ. ಆ ತರಹ ಬೇರೆ ಕಡೆಗಳಲ್ಲಿಯೂ ಇದೆ. ಆದರೆ ಅಲ್ಲಿನ ಸರ್ಕಾರೀ ಏಡೆಡ್ ಶಾಲೆಗಳಿಗೆ ಅಲ್ಲಿನ ಮ್ಯಾನೇಜರ್ ಅವರೇ ಸರ್ವಾಧಿಕಾರಿ. ಅತ ಏನು ಬೇಕಾದರೂ ಮಾಡಬಹುದು. ಅಷ್ಟುಮಟ್ಟಿಗೆ ಅವರಿಗೆ ಅಧಿಕಾರವನ್ನು ಕೊಡುತ್ತಾರೆ. ಈ ರೀತಿಯಾಗಿ ವಿಧವಿಧವಾಗಿರತಕ್ಕ ಆಡಳಿತ ಪದ್ಧತಿಯನ್ನು ತಪ್ಪಿಸಿ ಏಕರೂಪವಾದ ಆಡಳಿತವನ್ನು ಎಲ್ಲಾ ಶಾಲೆಗಳಲ್ಲಿ ನಿರ್ಮಾಣ ಮಾಡ ಬೇಕು. ಅದಕ್ಕೆ ಸರಿಯಾದ ಯೋಜನೆಗಳನ್ನು ಕೂಡಲೇ ಹಾಕಬೇಕು. ಮುಖ್ಯವಾಗಿ ಶಾಲಾಡಳಿತದ ಪದ್ಧತಿಯನ್ನು ಸುವ್ಯವಸ್ಥಿತ ರೀತಿಯಲ್ಲಿರುವ ಹಾಗೆ ಮಾಡಬೇಕೆಂದು ನಾನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಬಳ್ಳಾರಿ ಜಿಲ್ಲೆಯಲ್ಲಿರುವ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಅವನ್ನು ಮ್ಯಾನೇಜ್ ಮೆಂಟಿನವರು ನಡೆಸುತ್ತಿದ್ದರೂ ಅಲ್ಲಿನ ಆ ಶಾಲೆಗಳಲ್ಲಿ ಸುಮಾರು 45 ಕ್ಕೆ ಮೇಲ್ಪಟ್ಟು ಇರತಕ್ಕ ಹಿಂದೀ ಪಂಡಿತರಿಗೆ ಸುಮಾರು ಒಂದು ವರ್ಷವಾದರೂ ಅವರಿಗೆ ಸಂಬಳ ಬಂದಿಲ್ಲ. ಅವರಿಗೆ ಎಷ್ಟೋ ತೊಂದರೆಗಳಾಗಿವೆ. ಅವರ ಬೇಡಿಕೆ ಇನ್ನೂ ಈಡೇರಲೇ ಇಲ್ಲ. ಇಂತಹ ಪರಿಸ್ಥಿತಿಯನ್ನು ಕೂಡಲೇ ಸರಿಪಡಿಸಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾಧ್ಯಮಿಕ ಶಾಲೆಗಳಲ್ಲಿಯೂ ಶಿಕ್ಷಕರ ಕೊರತೆ ಅದರಲ್ಲಿಯೂ ಮುಖ್ಯವಾಗಿ ಕನ್ನಡ ಪಂಡಿತರ ಕೊರತೆ ಬಹಳ ಜಾಸ್ತಿಯಾಗಿದೆ. ಇದರಿಂದ ಅವರಿಗೆ ದೊಡ್ಡ ತೊಂದರೆಯಾಗಿದೆ. ಯಾವುದೋ ಒಂದು ಹೈಸ್ಕೂಲ ನಲ್ಲಿ 11 ನೇ ತರಗತಿಯನ್ನು ಪ್ರಾರಂಭ ಮಾಡಿದರು. ಅಲ್ಲಿಗೆ ವಿದ್ಯಾರ್ಥಿಗಳು ಯಾರೂ ಬರಲಿಲ್ಲ. ಅದರಿಂದ ಆ ತರಗತಿಯನ್ನು ತೆಗೆದುಹಾಕಿದರು. ಅಲ್ಲಿ ಸುಮಾರು 4 ವರ್ಷಗಳಿಂದಲೂ ಅಲ್ಲಿಗೆ ಕನ್ನಡ ಪಂಡಿತರೇ ಇಲ್ಲ. ಅರ್ಹರಾದ ಶಿಕ್ಷಕರೂ ಸಹ ಸಿಗುತ್ತಿಲ್ಲ. ಬಹಳ ಕಷ್ಟ. ನಾವು ನಮ್ಮದು ಕನ್ನಡ ರಾಜ್ಯ, ಕನ್ನಡ ದೇಶವೆಂದು ಬಹು ಹೆಮ್ಮೆಯಿಂದೇನೋ ಹೇಳುತ್ತಿದ್ದೇವೆ. ಕನ್ನಡ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಬೇರೆ ಹೇಳುತ್ತಿದ್ದೇವೆ. ಆದರೆ ಹೈಸ್ಕೂಲುಗಳಲ್ಲಿ ಕನ್ನಡ ಬೋಧನ ಮಾಡತಕ್ಕ ಕನ್ನಡ ಪಂಡಿತರೇ ಇಲ್ಲವೆಂದು ಹೇಳಿದರೆ ಹೇಗೇ ? ಇದಕ್ಕೆ ತಕ್ಕ ಅವಕಾಶವನ್ನು ವ್ಯವಸ್ಥಿತ ರೂಪದಲ್ಲಿ ಮಾಡಿಕೊಡಬೇಕು. ಆದ್ದರಿಂದ ಕನ್ನಡ ಪಂಡಿತರು ಸಾಕಷ್ಟು ಸಿಗುವವರೆಗೂ ಸರ್ಕಾರದಿಂದ ನಿವೃತ್ತಿಯಾಗಿರತಕ್ಕ ಕನ್ನಡ ಪಂಡಿತರುಗಳನ್ನು ನೇಮಕ ಮಾಡಿಕೊಳ್ಳುವುದು ಒಳ್ಳೆಯದು. ಅವರಿಗೆ ವಯೋ ನಿರ್ಬಂಧ ಹಾಕದೆ ಅವರು ಆರೋಗ್ಯದೃಷ್ಟಿಯಿಂದ ಫಿಸಿಕಲ ಫಿಟ ಆಗಿದ್ದ ಪಕ್ಷದಲ್ಲಿ, ಆ ಕೆಲಸ ಮಾಡಲು ಇನ್ನೂ ಸಮರ್ಥರಾಗಿದ್ದರೆ, ಅಂತಹವರನ್ನು ಕೂಡಲೇ ಅಲ್ಲಿ ನೇಮಕ ಮಾಡಬೇಕು. ಕನ್ನಡಭಾಷೆ ನೋಡುವುದಕ್ಕೆ ಚಿಕ್ಕದಾದರೂ ಬಹಳ ಮಂದಿ ಕನ್ನಡದಲ್ಲಿಯೆ

(ಶ್ರೀ ಎಂ ಎನ್. ಕೊಟ್ರಬಸವಯ್ಯ ಸೋಗಿ)

ಫೇರ್ ಆಗುತ್ತಾರೆ. ಒಟ್ಟಿನಲ್ಲಿ ಕನ್ನಡ ಪಂಡಿತರು ಸಾಕಷ್ಟು ಸಿಗದಿರುವ ಈ ಕೊರತೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಕೂಡಲೇ ಪ್ರಯತ್ನ ಮಾಡಬೇಕು. ಇದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಇನ್ನು ಬಳ್ಳಾರಿ ಜಿಲ್ಲೆಯ ವಿಚಾರವಾಗಿ ಹೇಳುತ್ತೇನೆ. ಅಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲಗಳಿವೆ. ಅಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 2,500 ಮಂದಿ ಶಿಕ್ಷಕರು ಇದ್ದಾರೆ. ಅಲ್ಲಿನ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲುಗಳನ್ನು ಡಿಫಂಕ್ಟ್ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲುಗಳೆಂದು ಕರೆಯಬಹುದು. ಅಲ್ಲಿ ಒಬ್ಬ ಅಡ್ಮಿನಿಸ್ಟ್ರೇಟರ್ ಎಂದು ಮಾಡಿದ್ದಾರೆ. ಬಹುಶಃ ಈ ವ್ಯವಸ್ಥೆ ಈ ರಾಜ್ಯದ ಇನ್ನಾವ ಭಾಗದಲ್ಲಿಯೂ ಇಲ್ಲವೆಂದು ಹೇಳಬಹುದು. ರಾಜ್ಯದ ಇತರ ಭಾಗಗಳನ್ನು ಪರಿಗಣನೆಗೆ ತೆಗೆದುಕೊಂಡು ಏಕರೂಪವಾದ ವ್ಯವಸ್ಥೆಯನ್ನು ಇಡೀ ರಾಜ್ಯದಲ್ಲಿ ಜಾರಿಗೆ ತರಬೇಕೆಂದು ಈ ಭಾಗದಿಂದ ಸರ್ಕಾರಕ್ಕೆ ಸಾಕಷ್ಟು ಮನವಿಗಳು ಬಂದಿವೆಯೆಂದು ನಾನು ತಿಳಿದಿದ್ದೇನೆ. ಅಲ್ಲಿನ ಅಡ್ಮಿನಿಸ್ಟ್ರೇಟರ್ ಆಫೀಸಿನಲ್ಲಿ ಕೇವಲ ಇಬ್ಬರು ಗುಮಾಸ್ತರು ಇದ್ದಾರೆ. ಅಲ್ಲಿರತಕ್ಕ 2,500 ಮಂದಿ ಶಿಕ್ಷಕರ ವ್ಯವಹಾರ ಕೇವಲ ಇಬ್ಬರು ಗುಮಾಸ್ತರಿಂದ ಹೇಗೆ ನಡೆಯುತ್ತದೆ ? ಅಲ್ಲಿಗೆ 9 ಹುದ್ದೆಗಳಿವೆ ಉಳಿದ ಎಲ್ಲಾ ಜಾಗಗಳು ಖಾಲಿ ಇವೆ. ಇದಲ್ಲದೆ ಸಕಾಲಕ್ಕೆ ಸಾಕಷ್ಟು ಹಣದ ಪೂರೈಕೆ ಆಗುತ್ತಾ ಇಲ್ಲ. ಇರತಕ್ಕ ಪ್ರಾಥಮಿಕ ಶಿಕ್ಷಕರಿಗೆ ಸಂಬಳ ಸುಮಾರು 3—4 ತಿಂಗಳುಗಳಿಂದಲೂ ಬರುತ್ತಾ ಇಲ್ಲ. ಅವರಿಗೆ ಬರಬೇಕಾದ ಇಂಕ್ರಿಮೆಂಟ್, ಡಿ.ಎ. ಮತ್ತು ಟಿ.ಎ. ಗಳಿಗೆ ತೊಂದರೆಯಾಗಿದೆ. ಆ ಒಂದು ಸೌಲಭ್ಯವೂ ಸಹ ಇಲ್ಲ. ಹೀಗಿರುವುದರಿಂದ ಇವರಿಂದ ಅನೇಕರು ಅವರ ಕೆಲಸದಲ್ಲಿ ದಕ್ಷತೆ ವಹಿಸದೆ ಬಹಳ ನಿರಾಶರಾಗಿದ್ದಾರೆ. ಅಂಥಾದ್ದನ್ನು ಕೂಡಲೇ ನಿವಾರಿಸಬೇಕಾಗಿದೆ. ಒಟ್ಟಿನಲ್ಲಿ ಬಳ್ಳಾರಿ ಪ್ರಾಥಮಿಕ ಶಿಕ್ಷಣ ಶಾಲೆಗಳನ್ನು ಸರ್ಕಾರದವರು ವಹಿಸಿಕೊಂಡು ಅಥವಾ ಹೊಸದಾಗಿ ಸ್ಕೂಲುಬೋರ್ಡುಗಳನ್ನು ಮಾಡಿ ಅದರಲ್ಲಿ ಒಂದು ಏಕರೂಪವಾದ ಕಾನೂನನ್ನು ಜಾರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಆದರೆ ಈಗ ಇರತಕ್ಕವು ಡಿಫಂಕ್ಟ್ ಡಿಸ್ಟ್ರಿಕ್ಟ್ ಬೋರ್ಡು ಸ್ಕೂಲುಗಳು. ಅವನ್ನು ಈಗ ಯಾರೂ ಕೇಳುವವರೇ ಇಲ್ಲದಂತಾಗಿದೆ. ಅದು ಈಗ ಹಂಪೆಯಂತೆ ಫರ್‌ಗಾಟನ್ ಎಂಪೈರ್ ಆಗಿದೆ. ಆದಕಾರಣ ಸರ್ಕಾರದವರು ಈ ಬಗ್ಗೆ ತೀವ್ರವಾದ ಗಮನಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

[MR. DEPUTY SPEAKER in the Chair]

ಇನ್ನೊಂದು ಮುಖ್ಯ ಅಂಶವೇನೆಂದರೆ, ಕಾಲೇಜುಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮ ಮಾಡುವುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಎಲ್ಲರೂ ಹೇಳುತ್ತಾರೆ ಕನ್ನಡ ಶಿಕ್ಷಣ ಮಾಧ್ಯಮಕ್ಕೆ ಬೇಕಾದ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಲ್ಲ ಎಂದು. ಕನ್ನಡ ಟೆಕ್ಸ್ಟ್‌ಬುಕ್ಕುಗಳನ್ನು ಪ್ರಿಂಟ್ ಮಾಡುವುದಾಗಲೀ ಉಪಾಧ್ಯಾಯರಿಗೆ ತರಬೇತಿಯನ್ನು ಕೊಡುವುದಾಗಲೀ ನಡೆದಿಲ್ಲ. ಹೈಸ್ಕೂಲನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಕಾಲೇಜಿಗೆ ಹೋದಕೂಡಲೇ ಅಲ್ಲಿ ಇಂಗ್ಲೀಷ್ ಮೀಡಿಯಂ ಇರುವುದರಿಂದ ಹೈಸ್ಕೂಲಿನಿಂದ ಕಾಲೇಜಿಗೆ ಹೋದ ವಿದ್ಯಾರ್ಥಿಗೆ ಅಲ್ಲಿ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ಕಾಲೇಜಿನಲ್ಲಿ ಕನ್ನಡ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರುವುದಕ್ಕೆ ಸರ್ಕಾರದವರು ಕೂಡಲೇ ಕ್ರಮಕೈಗೊಳ್ಳಬೇಕು. ಕನ್ನಡ ಸಾಹಿತ್ಯಕ್ಕೆ ಮತ್ತು ಕನ್ನಡ ಸಾಹಿತ್ಯಪರಿಷತ್ತಿಗೆ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿ ಸಂಸ್ಕೃತಿ ಪ್ರಚಾರದ ಕಾರ್ಯಕ್ರಮ ಇತ್ತು. ಆಮೇಲೆ ಇತ್ತೀಚೆಗೆ ಅದು ಸರಿಯಾಗಿ ನಡೆಯಲಿಲ್ಲ ಎಂದು ಹೇಳಿ ಅದನ್ನು ತೆಗೆದುಹಾಕಿದರು. ಯೋಜನೆಗಳು ಸರಿಯಾಗಿ ನಡೆಯುವುದಿಲ್ಲ ಎಂದು ಕಂಡುಬಂದಾಗ ಆ ಯೋಜನೆಯನ್ನು ಪೂರ್ತಿಯಾಗಿ ತೆಗೆದುಹಾಕುವುದಕ್ಕೆ ಬದಲಾಗಿ ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಸಾಹಿತ್ಯ ಮತ್ತು ಸಂಸ್ಕೃತಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕುವಂತೆ ಮಾಡಬೇಕು. ಕನ್ನಡ ಸಾಹಿತ್ಯಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಟ್ಟಂತೆ ಕಾಣಲಿಲ್ಲ. ಆದ್ದರಿಂದ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದರ ಜೊತೆಗೆ ಆಡಳಿತ ವ್ಯವಸ್ಥೆಯಲ್ಲಿ ಸರಿಯಾದ ಒಂದು ಆಸಕ್ತಿಯನ್ನು ವಹಿಸಿ ಹೆಚ್ಚು ರೀತಿಯಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಹೆಚ್ಚು ಅಭಿವೃದ್ಧಿಯಾಗುವುದಕ್ಕೆ ಅವಕಾಶವನ್ನು ಕೊಡಬೇಕು. ಕನ್ನಡ ವಿಶ್ವಕೋಶ ಇನ್ನೂ ಪ್ರಿಂಟಿನಲ್ಲೇ ಇದೆ. ಅದು ಈಗ 10 ವರ್ಷಗಳಿಂದಲೂ ಇರುತ್ತಿದೆ. ಇದುವರೆಗೂ ಅದು ಬರಲಿಲ್ಲ. ಆದಕಾರಣ ಕನ್ನಡ ವಿಶ್ವಕೋಶ ಕೂಡಲೇ ಬರುವಂತೆ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಸ್ವಾಮಿ, ಇವೊತ್ತು ಈ ಸಭೆಯ ಮುಂದೆ ಸರ್ಕಾರದವರು ಇಟ್ಟಿರತಕ್ಕ ಶಿಕ್ಷಣ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಕೆಲವು ಸೂಚನೆಗಳನ್ನು ನೀಡಬಯಸುತ್ತೇನೆ. ಮೊದಲನೆಯದಾಗಿ ಫ್ರೀಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಚಿಕ್ಕಮಕ್ಕಳಿಗೆ ಎಂದರೆ 5 ವರ್ಷಗಳವರೆಗಿನ ಮಕ್ಕಳಿಗೆ ಈ ಶಿಕ್ಷಣ ಪ್ರಾರಂಭವಾಗುತ್ತದೆ. ಇದರಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಮುಖ್ಯವಾಗಿ ಷಹರಗಳಲ್ಲಿ ಇರತಕ್ಕ ಜನಗಳಿಗೆ ಇದರ ಲಾಭ ಸಿಕ್ಕುತ್ತದೆ. ಹಳ್ಳಿಗಳ ಸುತ್ತಮುತ್ತ ಇರತಕ್ಕ ಜನಗಳಿಗೆ ಇದರ ಲಾಭ ಸಿಕ್ಕುವುದಿಲ್ಲ. ಅದಕ್ಕಾಗಿ ಸರ್ಕಾರದವರು ವಿಶೇಷವಾಗಿ ಇದಕ್ಕೆ ಹಣವನ್ನು ಖರ್ಚು ಮಾಡದೆ ಇದರ ಜವಾಬ್ದಾರಿಯನ್ನು ಸಾರ್ವಜನಿಕರಿಗೇ ಬಿಡಬೇಕು. ಅವರು ತಮ್ಮ ಹಣದಿಂದ ಅದನ್ನು ನಡೆಸಿಕೊಂಡು ಹೋಗಲಿ. ಅದಕ್ಕಾಗಿ ಸರ್ಕಾರದವರು ಹೆಚ್ಚು ಹಣವನ್ನು ಖರ್ಚುಮಾಡಬಾರದು. ಈ ಫ್ರೀ ಪ್ರೈಮರಿ ವಿದ್ಯಾಭ್ಯಾಸದಲ್ಲಿ ಹಳ್ಳಿಗಳಿಗೂ ಮತ್ತು ಷಹರಗಳಿಗೂ ವ್ಯತ್ಯಾಸವಿರುವ ಕಾರಣ ಷಹರಗಳಲ್ಲಿಯೇ ಎಲ್ಲಾ ಹಣವೂ ಉಳಿಯುತ್ತದೆ.

ಇನ್ನು ಎರಡನೆಯದು, ಪ್ರಾಥಮಿಕ ಶಿಕ್ಷಣ. ಇದರಲ್ಲಿ ಬಹಳ ವ್ಯತ್ಯಾಸಗಳು ಆಗಿವೆ. ಕೆಲವು ಕಡೆ ಸರ್ಕಾರಿ ಶಾಲೆಗಳು ನಡೆಯುತ್ತಿವೆ. ಕೆಲವು ಸ್ಕೂಲ್ ಬೋರ್ಡ್, ಖಾಸಗೀ ಶಾಲೆಗಳು ನಡೆಯುತ್ತಿವೆ. ಕೆಲವು ಜಾತಿಯ ಮಿಷನರಿ ಶಾಲೆಗಳು ನಡೆಯುತ್ತಿವೆ. ಈ ತರಹ ವ್ಯತ್ಯಾಸಗಳು ಹೋಗಬೇಕು. ಎಲ್ಲಾ ಕಡೆಗೂ ಇಡೀ ಮೈಸೂರು ರಾಜ್ಯಕ್ಕೆ ಏಕರೂಪವಾದ ಆಡಳಿತ ಜಾರಿಗೆ ಬರಬೇಕು. ಬಳ್ಳಾರಿ ಮತ್ತು ಉತ್ತರ ಕರ್ನಾಟಕದಲ್ಲಿ ಸ್ಕೂಲ್ ಬೋರ್ಡುಗಳು ನಡೆಸುವ ಶಾಲೆಗಳನ್ನು ಶೀಘ್ರವಾಗಿ ರದ್ದು ಮಾಡಬೇಕು ಎನ್ನುವ ಮಾತನ್ನು ಕೆಲವು ಜನಗಳು ಹೇಳುತ್ತಿದ್ದಾರೆ. ಆದ್ದರಿಂದ ನಾನು ಒತ್ತಾಯವಾಗಿ ಹೇಳುತ್ತೇನೆ. ಈ ಸ್ಕೂಲ್ ಬೋರ್ಡ್ ಶಾಲೆಗಳನ್ನು ತೀವ್ರವಾಗಿ ರದ್ದು ಮಾಡಬೇಕು. ಇದರಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಮ್ಯಾನೇಜ್‌ಮೆಂಟುಗಳು ಶಿಥಿಲವಾಗುತ್ತಿವೆ. ಅವರು ಸಾಕಷ್ಟು ಶಿಕ್ಷಣದಲ್ಲಿ ಲಕ್ಷ್ಯ ಕೊಡುತ್ತಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಶಿಕ್ಷಕರ ಮೇಲೆ ಸರಿಯಾದ ಬಗಿ ಇಲ್ಲ. ವರ್ಗಾವರ್ಗಿ ಆಗಬೇಕಾದರೆ, ಹೊಸ ನೇಮಕಗಳು ಆಗಬೇಕಾದರೆ ಅನೇಕ ಅವಾಂತರಗಳು ನಡೆಯುತ್ತವೆ ಎನ್ನುವ ಮಾತು ಮನೆಯಮಾತಾಗಿದೆ. ಒಂದು ವರ್ಗ ಆಗಬೇಕಾದರೆ 100-200 ರೂಪಾಯಿಗಳು, ಒಂದು ಹೊಸ ನೇಮಕವಾಗಬೇಕಾದರೆ 300-500 ರೂಪಾಯಿಗಳನ್ನು ಕೊಡುವಂತಹ ಒಂದು ಪದ್ಧತಿ ಇದೆ. ಇದನ್ನು ತಪ್ಪಿಸಬೇಕು. ಎಲ್ಲರೂ ಇದನ್ನು ವಿಚಾರ ಮಾಡಬೇಕಾಗಿದೆ. ಪವಿತ್ರವಾದ ಶಿಕ್ಷಣ ಕಾರ್ಯದಲ್ಲಿ ಲಂಚಗುಳಿತನ ಎಷ್ಟರಮಟ್ಟಿಗೆ ಇದೆ ಎಂದರೆ ಹಣವನ್ನು ಕೊಡದೇ ಯಾವ ನೇಮಕಗಳೂ ಆಗುವುದಿಲ್ಲ ಎನ್ನುವ ಮಾತನ್ನು ತಮ್ಮ ಲಕ್ಷ್ಯಕ್ಕೆ ತರಬಯಸುತ್ತೇನೆ. ಶಿಕ್ಷಕರಿಗೆ ಎಲ್ಲಿ ತೊಂದರೆಯಾಗುವುದಿಲ್ಲವೋ, ಎಲ್ಲಿ ಅನಾನುಕೂಲವಾಗಿದೆಯೋ ಅಂಥಾ ಕಡೆಗಳಲ್ಲಿ ಅವರು ಹೆಚ್ಚು ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಆದ್ದರಿಂದ ಉಪಾಧ್ಯಾಯರು ಯಾವ ಸ್ಥಳದಲ್ಲಿ ಹೆಚ್ಚು ಉತ್ಸಾಹದಿಂದ ಕೆಲಸಮಾಡುವುದಕ್ಕೆ ಅಪೇಕ್ಷೆ ಮಾಡುತ್ತಾರೆಯೋ ಅಂಥಾ ಕಡೆ ಅವರನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಒಂದು ತಿದ್ದುಪಡಿ ನಿಯಮಾವಳಿಯನ್ನು ಮಾಡಿಕೊಂಡರೆ ಅನುಕೂಲವಾಗುತ್ತದೆ. ಶಿಕ್ಷಕರನ್ನು ಅವರ ಹಳ್ಳಿಗಳಲ್ಲಿ ಇಡಬಾರದು, ಅವರ ಊರು ಸಮೀಪದಲ್ಲಿ ಇಡಬಾರದು ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಶಿಕ್ಷಕರು ಬಹಳ ಕಡಿಮೆ ಸಂಬಳವನ್ನು ಪಡೆಯತಕ್ಕ ಜನ ಹಾಗೆಯೇ ಶಿಪಾಯಿಗಳೂ ಕೂಡ ಕಡಿಮೆ ಸಂಬಳವನ್ನು ಪಡೆಯತಕ್ಕ ಜನ. ಅವರಿಗೆ ಬರತಕ್ಕ ಸಂಬಳದಲ್ಲಿ ಅವರು ತಮ್ಮ ಸಂಸಾರವನ್ನು ತಾಪತ್ರಯವಿಲ್ಲದೆ ಹೇಗೆ ನಡೆಸಿಕೊಂಡು ಹೋಗಬೇಕು ? ಈ ದೃಷ್ಟಿಯಿಂದ ಅವರನ್ನು ಅವರ ಊರಿನ ಸಮೀಪದಲ್ಲಿಯೇ ಇಟ್ಟರೆ ಅನುಕೂಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಊರಿನಲ್ಲಿಟ್ಟರೆ ಅವರು ಶಾಲೆಯ ಕಡೆ ಲಕ್ಷ್ಯಕೊಡುವುದಿಲ್ಲ ಎಂದು ಕೆಲವರು ಹೇಳಿದರು. ಅದು ಹಾಗಾಗುವುದಿಲ್ಲ. ಅವರಿಗೂ ತಮ್ಮ ಊರು ಬೆಳೆಯಬೇಕು, ತಮ್ಮ ಶಾಲೆ ಬೆಳೆಯಬೇಕು, ತಮ್ಮ ಶಾಲೆಗೆ ಒಳ್ಳೆಯ ಹೆಸರು ಬರಬೇಕು ಎನ್ನುವ ಅಭಿಮಾನವಿರುತ್ತದೆ. ಯಾರಾದರೂ ತಪ್ಪು ಮಾಡಿದರೆ ಅಂಥವರನ್ನು ಬೇರೆಕಡೆಗೆ ಹಾಕಿ. ಕಡಿಮೆ ಸಂಬಳವನ್ನು ಪಡೆಯತಕ್ಕ ಜನಗಳಿಗೆ ಅನುಕೂಲ ಮಾಡಬೇಕೇ ಹೊರತು ಅವರಿಗೆ ತೊಂದರೆಯನ್ನು ಕೊಡಕೂಡದು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಶಿಕ್ಷಣವು ಬಹಳ ಪವಿತ್ರವಾದ ಕೆಲಸ. ಆದ್ದರಿಂದ ಈ ಕೆಲಸವನ್ನು ಮಾಡತಕ್ಕ ಜನಗಳಿಗೆ ಅನಾನುಕೂಲವಾಗದಂತೆ ಅವರನ್ನು ಆಯಾಯ ಊರುಗಳಲ್ಲಿಯೇ ಹಾಕುವುದು ಒಳ್ಳೆಯದು. ಇದರಿಂದ ಅವರು ತಮ್ಮ ಶಾಲೆಯ ಕೆಲಸದ ಜೊತೆಗೆ ಇತರೇ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಊರಿನ ಸಂಬಂಧದ ಒಂದು ವಾತಾವರಣ ಬೆಳೆದು ಬರುತ್ತದೆ. ಊರಿನ ಪ್ರಗತಿಗೆ ಮತ್ತು ಶಿಕ್ಷಣದ ಕಡೆ ಹೆಚ್ಚು ಗಮನಕೊಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

(ಶ್ರೀ ಎ. ಆರ್. ಪಂಚಗಾವಿ.)

ಇನ್ನು ಶಾಲೆಗಳ ಕಟ್ಟಡದ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವುದರಿಂದ ಅಷ್ಟು ಸಮರ್ಪಕವಾಗುವುದಿಲ್ಲ ಎಂದು ಕಾಣುತ್ತದೆ. ಏತಕ್ಕೆಂದರೆ ಅವರಲ್ಲಿ ಸಾಕಷ್ಟು ದುಡ್ಡು ಇಲ್ಲ. ಆದ್ದರಿಂದ ಸರ್ಕಾರದವರು ಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಹೆಚ್ಚು ಹಣವನ್ನು ಕೊಡಬೇಕು. ಕೆಲವು ಹಳ್ಳಿಗಳಲ್ಲಿ ಜನಗಳು ಉತ್ಸಾಹದಿಂದ ಶಾಲೆಯ ಕಟ್ಟಡಕ್ಕೆ ಹಣವನ್ನು ಕೊಡುತ್ತಾರೆ. ಕೆಲವು ಊರುಗಳಲ್ಲಿ ಶಾಲೆಯ ಕಟ್ಟಡಕ್ಕೆ ಹಣವನ್ನು ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಅಂಥಾ ಕಡೆ ಆ ಕೆಲಸವನ್ನು ಮಾಡುವುದು ಅಸಾಧ್ಯವಾಗುತ್ತದೆ. ಸರ್ಕಾರದವರು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ಸ್ಕೂಲ್‌ಬೋರ್ಡಿನವರು ತಮ್ಮ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದೂ ಕೂಡ ಈಗ ಸ್ಕೂಲ್‌ಬೋರ್ಡಿನಲ್ಲಿ ಫಂಡ್ ಬಹಳ ಕಡಿಮೆ ಇರುವುದರಿಂದ ಈಗ ಅವರು ಸಾಕಷ್ಟು ಈ ಕೆಲಸವನ್ನು ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಶಾಲೆಗಳ ಕಟ್ಟಡಕ್ಕೆ ಸರ್ಕಾರದವರೇ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಆದರೂ ಕೂಡ ಈಗ ನಮ್ಮ ದೇಶದಲ್ಲಿ ಅಕ್ಷರತೆಯ ಪ್ರಮಾಣ 30 ಪರ್ಸೆಂಟ್ ಮುಟ್ಟಿಲ್ಲ ಎಂದು ಅಂಕಿಅಂಶಗಳ ವರದಿಯಲ್ಲಿ ಕೊಟ್ಟಿದ್ದಾರೆ. 1961ನೇ ಇಸವಿಯಲ್ಲಿ ನಮ್ಮ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಕೇವಲ 25.8 ಇತ್ತು. ಇದನ್ನು ನೋಡಿದರೆ ಸಾಕ್ಷರತೆಯ ಪ್ರಮಾಣ ಬೃಹದಾಕಾರವಾಗಿ ಬೆಳೆಯಬೇಕಾಗಿದೆ. ಇದಕ್ಕೆ ಮಹತ್ವ ಕೊಡಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿರುವ ಕನ್ನಡ ಶಾಲೆಗಳಲ್ಲಿ ಸುಮಾರು 12-13 ಲಕ್ಷ ವಿದ್ಯಾರ್ಥಿಗಳ ಸಂಖ್ಯೆ ಇದೆ. ಇದಲ್ಲದೆ 5 ವರ್ಷದಿಂದ 9 ವರ್ಷ ವಯಸ್ಸಿನ ಹುಡುಗರ ಸಂಖ್ಯೆ 30 ಲಕ್ಷವಾಗುತ್ತದೆ. ಇದನ್ನು ನೋಡಿದರೆ ಈಗ ಕೊಡುತ್ತಿರುವ ಶಿಕ್ಷಣವು ಇನ್ನೂ ಎರಡೂವರೆ ಪಟ್ಟು ಹೆಚ್ಚು ಬೆಳೆಯಬೇಕಾಗಿದೆ. ಇದು ಪೂರ್ತಿಯಾಗಬೇಕ ದರೆ ಶಿಕ್ಷಕರು ಎಷ್ಟು ಬೇಕು, ಶಾಲೆಗಳು ಎಷ್ಟು ಬೇಕು, ಇದಕ್ಕೆ ಎಷ್ಟು ದುಡ್ಡು ಖರ್ಚು ಮಾಡಬೇಕು ಎಂಬುವನ್ನು ಯೋಚನೆ ಮಾಡಬೇಕು. ಈ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ವೆಲ್‌ಫೇರ್ ಸ್ಟೇಟ್ ಆಗಬೇಕಾದರೆ Three R's ಆಗಬೇಕು. ಓದು, ಬರಹ, ಲೆಕ್ಕ ಇದನ್ನು ಪ್ರತಿಯೊಬ್ಬ ನಾಗರಿಕನಿಗೆ ಕಲಿಸಬೇಕಾದುದು ಸರಕಾರದ ಕರ್ತವ್ಯ. ಮೊದಲು ಪ್ರತಿಯೊಬ್ಬರಿಗೆ ಒಂದರಿಂದ ನಾಲ್ಕನೇ ವರ್ಗದವರೆಗೆ ಶಿಕ್ಷಣ ಸಿಕ್ಕಲೇಬೇಕು ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಪ್ರತ್ಯಕ್ಷ ನಡೆದದ್ದನ್ನು ನೋಡಿದರೆ ಇನ್ನೂ ಅತ್ಯಂತ ಕೆಳಮಟ್ಟದಲ್ಲಿ ಇದ್ದೇವೆ. ಪ್ರಾಥಮಿಕ ಶಿಕ್ಷಣಕ್ಕೆ ಇನ್ನೂ ಹೆಚ್ಚು ಹಣ ಖರ್ಚು ಮಾಡುವ ಪ್ರಯತ್ನ ಆಗಬೇಕು. ಎಸ್.ಎಸ್.ಎಲ್.ಸಿ. ಪಾಸು ಆದ ಹುಡುಗರು ಉದ್ಯೋಗವಿಲ್ಲದೆ ತಿರುಗುತ್ತಿದ್ದಾರೆ. ಅವರ ಸೇವೆಯನ್ನು ಈ ದಿಶೆಯಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ವಿಚಾರ ಮಾಡಿ ಒಂದು ಯೋಜನೆ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನನಗೆ ಅನಿಸುತ್ತದೆ. ಅನೇಕರು ನಮ್ಮ ಸಮಾಜದಲ್ಲಿ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ. ಮುಂದುವರಿದ ವರ್ಗದವರು, ವ್ಯಾಪಾರಸ್ಥರು, ನೌಕರಿ ಮಾಡತಕ್ಕಂಥವರು ಧಾರ್ಮಿಕ ವಿಚಾರದವರು, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ. ಅವರಿಗೆ ಶಿಕ್ಷಣ ಬೇಕೇಬೇಕು. ಒಕ್ಕಲತನ ಮಾಡುವವರು ದನ ಕಾಯುತಕ್ಕಂಥವರು ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲ. ಮುಂದುವರಿದವರು ಮುಂದುವರಿದಿದ್ದಾರೆ. ಮೊದಲಿನಿಂದಲೂ ಹಿಂದುಳಿದವರು ಈಗಲೂ ಸಹ ಹಿಂದುಳಿದವರು ಆಗಿದ್ದಾರೆ. ಇಂಥ ಸಮಾಜ ಹಳ್ಳಿಗಾಡಿನಲ್ಲಿದೆ. ಅದರಲ್ಲಿಯೂ ಗುಡ್ಡಗಾಡು ಪ್ರದೇಶದಲ್ಲಿ ಇಂಥ ಜನರಿದ್ದಾರೆ. ಇಂಥವರಿಗೆ ಶಿಕ್ಷಣ ಕೊಟ್ಟು ಒಳ್ಳೇ ನಾಗರೀಕತೆಯ ಮಟ್ಟಕ್ಕೆ ತರಲು ಬಹಳ ಲಕ್ಷ್ಯ ಕೊಟ್ಟು ಪ್ರಯತ್ನ ಮಾಡಬೇಕಾದದು ಅತ್ಯಗತ್ಯವಾಗಿದೆ. ಇಂಥವರನ್ನು ತರಪೇತಿ ಮಾಡುವುದಕ್ಕೆ ಎಸ್ಸೆಸ್ಸೆಲ್ಸಿ ಪಾಸು ಮಾಡಿಕೊಂಡು ನಿರುದ್ಯೋಗಿಗಳಾಗಿರುವವರ ಸೇವೆ ದೊರಕಿಸಿಕೊಂಡರೆ ಒಂದು ಒಳ್ಳೆಯ ಉಪಯುಕ್ತವಾದ ಕೆಲಸ ಮಾಡಿದಂತಾಗುತ್ತದೆಂದು ಹೇಳಬಯಸುತ್ತೇನೆ. ಇಂದು ನಾವು ಅಣು ಯುಗದಲ್ಲಿ ಇದ್ದೇವೆ. ಆದರೆ ನಮ್ಮ ಭಾರತ ದೇಶವು ಇಂದು ಸೈಕಲ್ ಯುಗದಲ್ಲಿ ಇದೆ. ಪರದೇಶಗಳ ಮಟ್ಟಕ್ಕೆ ನಾವು ಬರಬೇಕಾಗಿದೆ. ಇಂದು ದೇಶದಲ್ಲಿ ಏನು ನಡೆದಿದೆ ಎಂಬುದನ್ನು ತಿಳಿದುಕೊಳ್ಳಲು ಓದು ಬರಹ ಎಲ್ಲರಿಗೂ ಬರಬೇಕು. ಜಗತ್ತಿನಲ್ಲಿ ಇಂದು ಏನೇನು ನಡೆದಿವೆ ಎಂಬುದನ್ನು ತಿಳಿದುಕೊಳ್ಳಲು ಓದು ಬರಹ ಬರಬೇಕು. ಇಲ್ಲದಿದ್ದರೆ ಯಾವ ಪ್ರಗತಿಯೂ ಕಂಡುಬರುವುದಕ್ಕೆ ಸಾಧ್ಯವಿಲ್ಲ. ಒಕ್ಕಲತನ ಮಾಡತಕ್ಕಂಥವರಿಗೂ ಓದು ಬರಹ ಬರಬೇಕು. ಓದು ಬರಹ ಬಾರದೇ ಇದ್ದರೆ ಸಂಶೋಧನೆ ಮಾಡಿದ್ದನ್ನು ಜಾರಿಗೆತರಲು ಕಷ್ಟವಾಗುತ್ತದೆ. ಇತ್ತೀಚೆಗೆ ಒಕ್ಕಲತನದಲ್ಲಿ ಪ್ರಗತಿಯು ಭರದಿಂದ ನಡೆಯುತ್ತದೆ. ಸಂಶೋಧನೆಯ ಮೂಲಕ ಸುಧಾರಿಸಿದ ಬೀಜ ಉಪಯೋಗಿಸಿಕೊಂಡು ಒಂದು ಎಕರೆ ಭೂಮಿಯಲ್ಲಿ ಐದಾರು ಸಾವಿರ ಉತ್ಪತ್ತಿಯಾಗತಕ್ಕಂಥ ಬೆಳೆ ಉತ್ಪಾದನೆ ಮಾಡುತ್ತಿದ್ದಾರೆ. ಇದೆಲ್ಲವನ್ನು ತಿಳಿದುಕೊಳ್ಳಬೇಕಾದರೆ ಓದು ಬರಹ ಬೇಕು. ಇದನ್ನು ತಿಳಿದುಕೊಂಡು ಸುಧಾರಿಸಿದ ಪದ್ಧತಿಯನ್ನು ಅನುಸರಿ

ಸಬೇಕು. ಬೆಳೆಗಳ ನಾಶವನ್ನು ತಡೆಗಟ್ಟುವುದಕ್ಕೆ ಔಷಧ ಉಪಯೋಗ ಮಾಡಿಕೊಳ್ಳಲು ಶಿಕ್ಷಣ ಅತ್ಯಂತ ಅವಶ್ಯಕವಾಗಿದೆ. ಅಶಿಕ್ಷಿತರು ಈ ರೀತಿ ವ್ಯವಸಾಯ ಬೆಳೆಸಲು ಸಾಧ್ಯವಿಲ್ಲ. ಅಂಥವರು ಕೆಳಮಟ್ಟಕ್ಕೆ ಇಳಿಯುತ್ತಿದ್ದಾರೆ. ಆದುದರಿಂದ ಅವರ ವಿಚಾರದಲ್ಲಿ ಶಿಕ್ಷಣ ಮಟ್ಟ ಹೆಚ್ಚು ಬೆಳೆಸುವುದು ಅತ್ಯಂತ ಅವಶ್ಯವಿದೆ.

ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಯಾದ ಮೇಲೆ ರಿಸರ್ಚ್ ಇನ್‌ಸ್ಟಿಟ್ಯೂಟ್ಸ್ ರಿಸರ್ಚ್ ಫಾರ್ಮ್ಸ್ ಇವುಗಳನ್ನು ಸರ್ಕಾರದವರು ಈ ಯೂನಿವರ್ಸಿಟಿ ವಶಕ್ಕೆ ಒಪ್ಪಿಸಿದ್ದಾರೆ. ಈ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳ ಉಪಯೋಗವನ್ನು ಒಕ್ಕಲಿಗರಿಗೆ ಮಾಡಿಕೊಡಬೇಕಾದುದು ಅವಶ್ಯಕ. ಸುತ್ತು ಮುತ್ತು ಇರತಕ್ಕಂಥವರಿಗೆ ತರಬೇತಿ ಸಿಕ್ಕುವುದು ಅವಶ್ಯಕ. ಅವರಿಂದ ಉಳಿದವರಿಗೆ ತರಬೇತಿ ಸಿಕ್ಕಬೇಕು. ಇದಕ್ಕಾಗಿ ಸಂಶೋಧನ ಕೇಂದ್ರಗಳಿಗೆ ಜನತೆಯ ಸಂಪರ್ಕ ಬರುವಂತೆ ಇರಬೇಕು. ಆದರೆ ಯೂನಿವರ್ಸಿಟಿಯಾದಮೇಲೆ ಅವರು ಬೇರೆ ಸಂಶೋಧನೆ ಕೆಲಸ ಬೇರೆ ಎಂಬ ಮನೋಭಾವನೆ ಇಂದು ಉಂಟಾಗಿದೆ. ಸೀಡ್ ಪ್ರೊಡಕ್ಷನ್ ಕಾರ್ಯಕ್ರಮದಲ್ಲಿ ಸರ್ಕಾರದವರು ಅತ್ಯಂತ ಎಚ್ಚರಿಕೆಯಿಂದ ಕ್ರಮ ತೆಗೆದುಕೊಂಡು ಅನೇಕ ರಿಸರ್ಚ್ ಇನ್‌ಸ್ಟಿಟ್ಯೂಟ್ಸ್ ಮಾಡಿದ್ದಾರೆ. ಆದರೆ ಅವರು ರೈತರಿಗೆ ಸಲಹೆ ಕೊಡುವುದನ್ನು ಬಿಟ್ಟುಕೊಟ್ಟಿದ್ದಾರೆ. ಅವರು ರೈತರ ಕೂಡ ಪಾಲುಗಾರಿಕೆಯಿಂದ ವ್ಯವಸಾಯ ಮಾಡುವುದಕ್ಕೆ ಜಮೀನು ಖರೀದಿ ಮಾಡಿಕೊಂಡು ರಿಸರ್ಚ್ ಮಾಡಿರುವುದನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ರೈತರ ಜಮೀನಿನಲ್ಲಿ ಕೂಡ ಸೀಡ್ ಪ್ರೊಡಕ್ಷನ್ ಕಾರ್ಯಕ್ರಮದಲ್ಲಿ ಹಿಸ್ಸೆ ಇಟ್ಟುಕೊಂಡಿದ್ದು ಅದಕ್ಕೆ ಸೂಕ್ತ ಕಾಗದಪತ್ರ ಸಹ ಬರೆಸಿಕೊಂಡಿದ್ದಾರೆ. ಇವರು ಪಾಲಿನ ವ್ಯವಹಾರ ಮಾಡುವುದು ಕಂಡುಬರುತ್ತಿದೆ. ಇದರಿಂದ ದುಡ್ಡಿನ ಮೋಹ ಎಷ್ಟರಮಟ್ಟಿಗೆ ಬೆಳೆಯುತ್ತಿದೆ ಎಂಬುದನ್ನು ನೋಡಬೇಕು. ರೈತರಿಗೆ ಸಲಹೆ ಕೊಡಬೇಕೆಂದು ಈ ಸಂಶೋಧನೆಗಳು ಇರುತ್ತವೆ. ಆದರೆ ಈ ರೀತಿ ರೈತರನ್ನು ಶೋಷಣೆ ಮಾಡುವುದು ಒಳ್ಳೆಯದಲ್ಲ, ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಇದನ್ನು ಯೂನಿವರ್ಸಿಟಿ ಲಕ್ಷ್ಯಕ್ಕೆ ತರುತ್ತೇನೆ. ಈ ಅನ್ಯಾಯ ತಿದ್ದಿಕೊಳ್ಳಬೇಕೆಂದು ಸರ್ಕಾರದ ಮೂಲಕ ಅವರಿಗೆ ತಿಳಿಸಬಯಸುತ್ತೇನೆ. ಇದು ಪ್ರತ್ಯಕ್ಷ ನಡೆದ ಮಾತು; ಇಷ್ಟು ಹೇಳಿ ಮತ್ತೊಮ್ಮೆ ಹೇಳುವುದು ಏನೆಂದರೆ ಕಾಲೇಜು ಶಿಕ್ಷಣ ಪ್ರಮಾಣ ಬೆಳೆಯಬೇಕು, ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕು, ಅಂದರೆ ರೈತರ ಕಲ್ಯಾಣವಾಗುತ್ತದೆ. ಸರಿಯಾದ ಶಿಕ್ಷಣ ಸಿಕ್ಕರೆ ಹಳ್ಳಿಗಾಡಿನ ರೈತರು ಮುಂದುವರಿಯಲು ಸಾಧ್ಯವಾಗುತ್ತದೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ಶಿಕ್ಷಣ ಖಾತೆಯ ಬೇಡಿಕೆ ನಮ್ಮ ಮುಂದೆ ಇಟ್ಟಿರುವುದನ್ನು ಆಡಳಿತ ಸರಿಯಾಗಿ ನಡೆಸಿ ಪ್ರತಿಫಲ ದೊರಕಿಸಿ ಕೊಡುತ್ತಾ ಇಲ್ಲ ಎಂದು ಇದನ್ನು ವಿರೋಧಿಸಿ ಈ ಖಾತೆಯ ಬಗ್ಗೆ ಕೆಲವು ಅಂಶಗಳನ್ನು ತಮ್ಮ ಮುಂದೆ ಇಡಲಿಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ.

ಮೊದಲನೆಯದಾಗಿ ಬೆಂಗಳೂರು ನಗರದಲ್ಲಿ ನಾನಾ ಖಾಸಗಿ ಸಂಸ್ಥೆಗಳು ಉಪಾಧ್ಯಾಯರಿಗೆ ನ್ಯಾಯವಾಗಿ ಸಲ್ಲುವಂಥ ವೇತನ ಕೊಡದೆ ತೊಂದರೆಯಾಗುತ್ತದೆಂದು ಚೆಕ್ ಸಿಸ್ಟಂ ಮೂಲಕ ಹಣ ಪಾವತಿ ಮಾಡುವುದನ್ನು ಜಾರಿಗೆ ತಂದಿದ್ದಾರೆ. ಇದು ಒಂದು ವಿಧದಲ್ಲಿ ಅನುಕೂಲವಾಗಿದ್ದರೂ ಕೂಡ ಇದರಲ್ಲಿ ನ್ಯೂನತೆಗಳಿವೆ. ಅವುಗಳನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಎರಡು ವಿಚಾರ ಹೇಳುತ್ತೇನೆ, ಖಾಸಗಿ ಸಂಸ್ಥೆಗಳ ಆಡಳಿತ ನಡೆಸತಕ್ಕಂಥವರು ಲೆಕ್ಕಾಚಾರವನ್ನು ಅಡ್ಜಸ್ಟ್ ಮಾಡಿ ಲೆಕ್ಕಾಚಾರದಲ್ಲಿ ಸಿಕ್ಕಿಕೊಳ್ಳದಂತೆ ಮಾಡುತ್ತಾರೆ. ಕಾನೂನು ಚಾಪೆಯ ಕೆಳಗೆ ತೂರುತ್ತಿದ್ದರೆ ಆಡಳಿತ ವರ್ಗದವರು ಅಡ್ಜಸ್ಟ್‌ಮೆಂಟ್ ಮಾಡುವುದರಲ್ಲಿ ರಂಗೋಲಿ ಕೆಳಗೆ ತೂರುತ್ತಾರೆ. ಇಂಥ ಏರ್ಪಾಡು ಮಾಡಿದ್ದಾರೆ. ಇಂಥ ಏರ್ಪಾಡಿನಿಂದ ಉಪಾಧ್ಯಾಯರ ಹಣ ಕಸಿದುಕೊಳ್ಳುತ್ತಾರೆ ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಇದ್ದರೆ ಈ ವ್ಯವಸ್ಥೆಯಿಂದ ಉಪಾಧ್ಯಾಯರಿಗೆ ಅನುಕೂಲವಾಗುವುದಿಲ್ಲ ಎಂದು ಎಚ್ಚರಿಕೆ ಕೊಡುತ್ತೇನೆ. ಈ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಕೆಲವು ವಿದ್ಯಾ ಸಂಸ್ಥೆಗಳು ಬಹಳ ದಿವಸಗಳಿಂದ ತಮ್ಮ ವಿದ್ಯಾಸಂಸ್ಥೆಗಳನ್ನು ಬಹು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ.

12-00 Noon.

ನಾನಾದರೂ ಹೇಳಿಕೊಳ್ಳುವುದಾದರೆ ನ್ಯಾಷನಲ್ ಹೈಸ್ಕೂಲ್, ನ್ಯಾಷನಲ್ ಕಾಲೇಜು ನಡೆಸತಕ್ಕ ಒಂದು ನ್ಯಾಷನಲ್ ಎಜುಕೇಷನ್ ಸೊಸೈಟಿಯ ಆಡಳಿತ ವರ್ಗದಲ್ಲಿ ಕಳೆದ 30 ವರ್ಷದಿಂದಲೂ ಇದ್ದೇನೆ. 1ನೇ ತಾರೀಖು ಸಂಬಳ ಕೊಡುವುದರಲ್ಲಿ ಸರ್ಕಾರದ ಆಡಳಿತದಲ್ಲಿ ನ್ಯೂನತೆ ಇದ್ದರೂ

(ಶ್ರೀ ಟಿ. ಆರ್. ಶಾಮಣ್ಣ)

ಇರಬಹುದು. ಆದರೆ ಈ ಸಂಸ್ಥೆಯಲ್ಲಿ ಇಂಥ ಯಾವ ತರಹ ಲೋಪವೂ ಇಲ್ಲ ಎಂದು ಕಡ್ಡಾಯವಾಗಿ ಹೇಳುತ್ತೇನೆ. ಹೀಗೆ 20-25 ವರ್ಷದಿಂದ ಯಾವ ಲೋಪಕ್ಕೂ ಅವಕಾಶ ಕೊಡದೆ ಸರಿಯಾಗಿ ನಡೆದುಕೊಂಡು ಬರತಕ್ಕ ವಿದ್ಯಾಸಂಸ್ಥೆಗೆ ಎಕ್ಸೆಮ್‌ಷನ್ ಕೊಡಬೇಕು. ಹೀಗೆ ಕೊಡದೇ ಹೋದರೆ ಶಿಸ್ತಿಗೂ ಮತ್ತು ದಕ್ಷತೆಗೂ ಧಕ್ಕೆ ಬರುತ್ತದೆ ಎನ್ನುವ ಅಂಶ ತಿಳಿಸಿ ಚೆನ್ನಾಗಿ ನಡೆದುಕೊಂಡು ಹೋಗುವ ಸಂಸ್ಥೆಗೆ ಚೆಕ್ಕನ್ನು ಡಿಪಾರ್ಟ್‌ಮೆಂಟ್ ಕೊಡುವುದಕ್ಕೆ ಬದಲಾಗಿ ಆಡಳಿತ ವರ್ಗದವರು ಕೊಡುವಂತೆ ಏರ್ಪಾಡು ಮಾಡಿದರೆ ದಕ್ಷತೆ ಮತ್ತು ಶಿಸ್ತಿನಿಂದ ನಡೆಸಿಕೊಂಡು ಬರುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಸಲಹೆಯನ್ನು ತಮ್ಮ ಮುಂದೆ ಈ ಸಂದರ್ಭದಲ್ಲಿ ಇಡುತ್ತೇನೆ. ಶಿಕ್ಷಣ ಸಂಸ್ಥೆ ನಮ್ಮ ದೇಶದಲ್ಲಿ ಬೇರೆ ಎಲ್ಲಾ ಇಲಾಖೆಗಳನ್ನೂ ನಡೆಸಿಕೊಂಡು ಬರುವಂತೆ ಪ್ರಾಯೋಗಿಕವಾದ ಸ್ಟೇಜಿನಲ್ಲಿದೆ. ಬೇರೆ ಎಲ್ಲಾ ಎಕ್ಸ್‌ಪೆರಿಮೆಂಟ್ ಆಗಿದೆ. ಎಲ್ಲಾ ಎಕ್ಸ್‌ಪೆರಿಮೆಂಟ್ ಮಾಡಿಕೊಂಡು ಕೊನೆಗೆ ಮೊದಲು ಇದ್ದ ಸ್ಥಿತಿಗೆ ಬಂದಿದೆ. ಮೊದಲು ಲೋಯರ್ ಸೆಕೆಂಡರಿ ಬೇಡ ಎಂದು ಹೇಳಿ ಈಗ ಲೋಯರ್ ಸೆಕೆಂಡರಿ ಬೇಕು ಎನ್ನುವ ಸ್ಥಿತಿಗೆ ಬಂದಿದೆ. ಪ್ರೀ ಯೂನಿವರ್ಸಿಟಿ ಕೋರ್ಸ್ ತಪ್ಪಿಸಿ 2 ವರ್ಷದ ಪ್ರೀ ಯೂನಿವರ್ಸಿಟಿ ಕೋರ್ಸ್ ಮಾಡಬೇಕು ಎಂದು ಹೇಳುತ್ತಿದ್ದಾರೆ. ಮೊದಲು ಇದ್ದಂಥ ಇಂಟರ್‌ಮೀಡಿಯಟ್ ಪದ್ಧತಿಗೆ ಪುನಃ ಬರುತ್ತಿದ್ದೇವೆ. 11ನೇ ಸ್ಟಾಂಡರ್ಡ್‌ನಲ್ಲಿ ಒಂದು ಪ್ರೀಯೂನಿವರ್ಸಿಟಿ ಕೋರ್ಸ್ ಮತ್ತು ಕಾಲೇಜಿನಲ್ಲಿ ಒಂದು ಪ್ರೀಯೂನಿವರ್ಸಿಟಿ ಕೋರ್ಸ್ ನಡೆಸುತ್ತಾ ಇರತಕ್ಕದ್ದು ನಿಜವಾಗಿಯೂ ಸಮರ್ಪಕವಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದನ್ನು ಕಾಲೇಜಿನಲ್ಲಿ ನಡೆಸಬೇಕು. 11ನೇ ಸ್ಟ್ಯಾಂಡರ್ಡ್ ಸರಿಯಾಗಿಲ್ಲ ಎಂದು ನಾನು ಪೋಷಕ ವರ್ಗಕ್ಕೆ ಸೇರಿದವನಾಗಿ ಹೇಳುತ್ತೇನೆ. 11ನೇ ಸ್ಟ್ಯಾಂಡರ್ಡ್‌ಗೆ ಶಿಕ್ಷಕರು ಸಿಕ್ಕುವುದಿಲ್ಲ. ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ ಸರಿಯಾಗಿ ಇರುವುದಿಲ್ಲ. ಅಲ್ಲಿಯ ವಾತಾವರಣವೂ ಅಷ್ಟು ಸಮರ್ಪಕವಾಗಿ ಇರುವುದಿಲ್ಲ. 11ನೇ ಸ್ಟ್ಯಾಂಡರ್ಡ್ ಹೈಸ್ಕೂಲಿನಿಂದ ತೆಗೆದು ಕಾಲೇಜಿಗೆ ಸೇರಿಸಬೇಕು. ಹೀಗಾಗದೇ ಹೋದ ಪಕ್ಷದಲ್ಲಿ ಜೂನಿಯರ್ ಕಾಲೇಜುಗಳು ಏರ್ಪಾಡು ಮಾಡಿ ಪ್ರೀ ಯೂನಿವರ್ಸಿಟಿ ಕೋರ್ಸನ್ನು ಜೂನಿಯರ್ ಕಾಲೇಜಿಗೆ ಒಪ್ಪಿಸಿ ಸರಿಯಾದಂಥ 2 ವರ್ಷದ ಶಿಕ್ಷಣ ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಎಸ್. ಆರ್. ಕಂಠಿ (ನ್ಯಾಯ ಶಾಖೆಯ ಮಂತ್ರಿಗಳು).—11ನೇ ಸ್ಟಾಂಡರ್ಡ್ ವಿಚಾರವಾಗಿ ನೀವು ಹೇಳಿದಿರಿ. ಹೈಯರ್ ಸೆಕೆಂಡರಿ ಎಜುಕೇಷನ್‌ನ್ನು ಸೆಕೆಂಡರಿ ಎಜುಕೇಷನ್ನಿನಲ್ಲೇ ಇರಬೇಕೆಂದು ಕೊಠಾರಿ ಕಮೀಷನ್ ರಿಪೋರ್ಟ್ ಹೇಳಿದ್ದಾರೆ ಕಾಲೇಜು ನಡೆಸಬೇಕು ಎಂದರೆ ಅದು ಕಷ್ಟ. ರೂರಲ್ ಏರಿಯಾಗಳಿಗೆ ಸಾಧ್ಯವಾಗುವುದಿಲ್ಲ. 11ನೇ ಕ್ಲಾಸ್ ಮಾಡಿ ಡಿಪ್ಲೋಮಾ ಕೊಡುವ ಯೋಚನೆ ಮಾಡಬೇಕು. ಈ ವಿಚಾರ ಎಜುಕೇಷನ್ ಕಮೀಷನ್ನಿನಲ್ಲಿ ಇದೆ. ತಾವು ಹೇಳಿದ ವಿಚಾರ ನೋಡಿದರೆ ರೂರಲ್ ಏರಿಯಾಗಳ ಬಗ್ಗೆ ಏನೂ ವಿಚಾರ ಮಾಡಿಲ್ಲ ಎಂದು ಅರ್ಥವಾಗುತ್ತದೆ. ತಾವು ಹೇಳುವುದು ಬೆಂಗಳೂರು ಸಿಟಿ ಮಾತ್ರ ಗಮನದಲ್ಲಿಟ್ಟು ಹೇಳುತ್ತೀರಿ.

ಶ್ರೀ ಟಿ. ಆರ್. ಶಾಮಣ್ಣ.—ಹೀಗೆ ಆಗಬೇಕು, ಹಾಗೆ ಆಗಬೇಕು ಎಂದು ಒತ್ತಾಯ ಮಾಡುವುದಿಲ್ಲ. ಅವ್ಯವಸ್ಥೆಯಾಗಿದೆ. ಸಮರ್ಪಕವಾಗಿ ಉಪಾಧ್ಯಾಯರು ಇಲ್ಲದೇ ಇರತಕ್ಕದ್ದು, ಸರಿಯಾದಂಥ ಎಕ್ವಿಪ್‌ಮೆಂಟ್ ಇಲ್ಲದೆ ಇರತಕ್ಕ ಶಿಕ್ಷಣ ಬೇಡ. ಸರಿಯಾದಂಥ ವ್ಯವಸ್ಥಿತ ರೀತಿಯಲ್ಲಿ ಇರಬೇಕು.

ಶ್ರೀ ಎಸ್. ಆರ್. ಕಂಠಿ.—ಕಾಲೇಜಿನಲ್ಲಿ ಅದೇ ತರಹ ಆಗಿದೆ. ಇದಕ್ಕೆ ಬೆಂಗಳೂರು ಕಾಲೇಜಿನ ವಿಚಾರ ಹೇಳುತ್ತೀರಿ. ರೂರಲ್ ಕಾಲೇಜಿನಲ್ಲೂ ಇಲ್ಲಿರುವ ಹಾಗೆ ಕಷ್ಟ ಇದೆ, ಹುಡುಗರು ಜಾಸ್ತಿ ಆಗುತ್ತಾ ಇದ್ದಾರೆ. ಅದನ್ನು ಸುಧಾರಣೆ ಮಾಡಬೇಕೇ ವಿನಾ 11ನೇ ಕ್ಲಾಸ್ ತೆಗೆದು ಕಾಲೇಜು ಕೊಡಬೇಕು ಎಂದರೆ ಹಳ್ಳಿಗಾಡಿನಲ್ಲಿರುವ ಜನಗಳಿಗೆ ವಿದ್ಯೆಯನ್ನು ಕೊಡಬಾರದು ಎಂದು ಹೇಳಿದಹಾಗೆ ಆಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಚರ್ಚೆ ಮಾಡಿ ವಿಳಂಬ ಮಾಡಬೇಕು ಎನ್ನುವುದು ನನ್ನ ಉದ್ದೇಶ ಅಲ್ಲ. ಆಡಳಿತ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಒಪ್ಪಿಕೊಂಡರೆ ತೃಪ್ತಿಪಡುತ್ತೇನೆ. ಅವ್ಯವಸ್ಥೆ ಸರಿಪಡಿಸಬೇಕು ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಶ್ರೀ ಶಿವಪ್ಪನವರು ಹೇಳಿದಹಾಗೆ 3 ಯೂನಿವರ್ಸಿಟಿಗಳು ಇವೆ. ಅದರಲ್ಲಿ ಸರಿಯಾದಂಥ ಕೋಆರ್ಡಿನೇಷನ್, ಕೋಆಪರೇಷನ್ ಇಲ್ಲದೇ ಹೋದರೆ ನಾವು ಯಾವರೀತಿ ಇಂಟಿಗ್ರೇಷನ್ ತರಬೇಕು ಎಂದು ಯೋಚನೆ ಮಾಡುತ್ತೇವೋ ಅದು ತರುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಒಂದು ವಿಚಾರ ಹೇಳಬೇಕಾದರೆ, ತುಮಕೂರಿನಲ್ಲಿ ಒಬ್ಬ ವಿದ್ಯಾರ್ಥಿ ಇದ್ದರೆ ಅವನ ತಂದೆ ಬೆಂಗಳೂರಿಗೆ ಟ್ರಾನ್ಸ್‌ಫರ್

ಆದರೆ ಅವನನ್ನು ಇಲ್ಲಿ ಕಾಲೇಜಿಗೆ ಸೇರಿಸುವುದಕ್ಕೆ ತೊಂದರೆಯಾಗುತ್ತದೆ. ಪ್ರೀಯೂನಿವರ್ಸಿಟಿ ಸಿಲಬಸ್ ಅಲ್ಲಿ ಇರುವುದಕ್ಕೂ ಇಲ್ಲಿ ಇರುವುದಕ್ಕೂ ವ್ಯತ್ಯಾಸ ಇದೆ. ಬಿ.ಎ., ಬಿ. ಎಸ್.ಸಿ. ಸಿಲಬಸ್ ನಲ್ಲೂ ವ್ಯತ್ಯಾಸ ಇದೆ. ಡೈವರ್ಸಿಟಿ ಇರಬೇಕು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಬೇರೆ ಬೇರೆ ಕಡೆಗಳಲ್ಲಿ ಹೈಯರ್ ಎಜುಕೇಷನ್ ತೆಗೆದುಕೊಳ್ಳುವಾಗ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪೋಷಕ ವರ್ಗದವರು ವರ್ಗ ಆದಾಗ ಬದಲಾವಣೆ ಮಾಡುವುದು ಬಹಳ ತೊಂದರೆಯಾಗುತ್ತದೆ. 3 ಯೂನಿವರ್ಸಿಟಿಗಳಲ್ಲಿ ಒಂದು ಕೋಆರ್ಡಿನೇಷನ್ ಇಲ್ಲದೇಹೋದ ಪಕ್ಷದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಮುಂದೆ ಉಚ್ಚ ಶಿಕ್ಷಣಕ್ಕೆ ಹೋಗುವ ಸಂದರ್ಭದಲ್ಲಿ ತೊಂದರೆ ಬರುತ್ತದೆ. ಇದನ್ನು ಸ್ವಲ್ಪ ಯೋಚನೆ ಮಾಡಿ. 3 ಯೂನಿವರ್ಸಿಟಿಗಳಲ್ಲಿಯೂ ಶಿಕ್ಷಣವನ್ನು ಸ್ವಲ್ಪ ಇಂಟಿಗ್ರೇಟ್ ಮಾಡಿದರೆ ಆಗ ಸ್ವಲ್ಪ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ 210-220 ಕಮರ್ಷಿಯಲ್ ಇನ್‌ಸ್ಟಿಟ್ಯೂಟ್‌ಗಳು ಇವೆ. ತಮಗೆಲ್ಲಾ ತಿಳಿದ ಹಾಗೆ ಯಾವ ಖಾತೆಯಲ್ಲಿ (Department) ಆಗಲಿ, ಯಾವ ಕೋರ್ಟ್‌ನಲ್ಲಿ ಆಗಲಿ ಯಾವ ರೆಜಿಸ್ಲೇಚರ್‌ನಲ್ಲಿ ಆಗಲಿ, ಯಾವ ವ್ಯಾಪಾರ ಸಂಸ್ಥೆಯಲ್ಲಿ ಆಗಲಿ ಷಾರ್ಟ್‌ಹ್ಯಾಂಡ್ ಟೈಪ್‌ರೈಟಿಂಗ್ ಅಕೌಂಟೆನ್ಸಿ ಬಾರದೇಇದ್ದ ನೌಕರರು ಇಲ್ಲದೇಹೋದರೆ ಸಂಸ್ಥೆಯ ಆಡಳಿತ ಕುಸಿದು ಬೀಳುತ್ತದೆ. ಎಂಬ ಅಂಶ ತಮಗೆ ಗೊತ್ತಿದೆ. ಇಷ್ಟು ಸಂಸ್ಥೆಗಳಲ್ಲಿ 2—3 ಸರ್ಕಾರಿ ಸಂಸ್ಥೆಗಳು ಬಿಟ್ಟರೆ ಉಳಿದ 98 ಭಾಗದಷ್ಟು ಸಂಸ್ಥೆಗಳನ್ನು ಖಾಸಗಿಯವರೇ ನಡೆಸುತ್ತಿದ್ದಾರೆ. ವಿದ್ಯಾ ಇಲಾಖೆಯಲ್ಲಿ ಸಾಧಾರಣವಾಗಿ ಮೂರು ಕಾಸೂ ಖರ್ಚು ಮಾಡದೆ ನಡೆಸತಕ್ಕ ಶಾಖೆ ಎಂದರೆ ಕಮರ್ಷಿಯಲ್ ಎಜುಕೇಷನ್ ಸಂಸ್ಥೆ. ಈಗ ಇದಕ್ಕೆ ಬೇರೆ ಶಾಖೆ ಇಲ್ಲದೆ ಇದನ್ನು ಸೆಕೆಂಡರಿ ಎಜುಕೇಷನ್ನಿಗೆ ಸೇರಿಸಿ ಬಿಟ್ಟಿದ್ದಾರೆ. ಎಲ್ಲಾ ಶಾಖೆಯ ರಿಜಲ್ಟ್ ಬಂದರೂ ಕಮರ್ಷಿಯಲ್ ಎಕ್ಸಾಮಿನೇಷನ್ ರಿಜಲ್ಟ್ ಇದುವರೆಗೂ ಕೂಡ ಬಂದಿಲ್ಲ. ಇದು ನಿಜವಾಗಿಯೂ ಶೋಚನೀಯವಾದ ವಿಚಾರ. ಇದನ್ನು ನೆಗ್ಲೆಕ್ಟಡ್ ಫೀಲ್ಡ್ ಎಂದು ಹೇಳಿದರೂ ಕೂಡ ತಪ್ಪಾಗಲಾರದು ಎಂದು ತಿಳಿದುಕೊಂಡಿದ್ದೇನೆ. ಎಲ್ಲಾ ಪರೀಕ್ಷೆ ಮುಗಿದಮೇಲೆ ಕಮರ್ಷಿಯಲ್ ಪರೀಕ್ಷೆ ನಡೆಸುತ್ತಾರೆ. ಎಲ್ಲಾ ಪರೀಕ್ಷೆಯ ರಿಜಲ್ಟ್ ಬಂದಮೇಲೆ ಕಮರ್ಷಿಯಲ್ ಪರೀಕ್ಷೆಗಳ ರಿಜಲ್ಟ್ ಬರುತ್ತದೆ. ಇದನ್ನು ಸರಿಪಡಿಸಬೇಕು. ಈಗ ಯಾವ ಸಂಸ್ಥೆಗೂ ಕೂಡ ಮೂರು ಕಾಸಿನ ಗ್ರಾಂಟೂ ಕೊಡುತ್ತಾ ಇಲ್ಲ. ಹಿಂದೆ ಕೊಡುತ್ತಿದ್ದ ಗ್ರಾಂಟನ್ನು ಎರಡು ವರ್ಷದಿಂದ ಕಿತ್ತುಹಾಕಿದ್ದಿರಿ. ಸಾಕಾದಷ್ಟು ತರಪೇತು ಕೊಟ್ಟು ದಕ್ಷತೆ ಇರುವ ಷಾರ್ಟ್‌ಹ್ಯಾಂಡ್ ಟೈಪಿಸ್ಟ್‌ಗಳನ್ನು ತಯಾರುಮಾಡಿದ ಸಂಸ್ಥೆಗೆ ಸಾಕಾದಷ್ಟು ಉತ್ತೇಜನ ಕೊಡಬೇಕು. ಸರಿಯಾದ ರೀತಿಯಲ್ಲಿ ಶಿಕ್ಷಣ ಕೊಡುವುದಕ್ಕೆ ಸಾಕಾದಷ್ಟು ಅವಕಾಶ ಮಾಡಿಕೊಡಬೇಕು. ಮಲತಾಯಿ ಭಾವನೆಯನ್ನು ತೋರಿಸದೆ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವ ಈ ಶಾಖೆಗೆ ಸರಿಯಾದ ರೀತಿಯಲ್ಲಿ ವಿದ್ಯಾರ್ಥಿಗಳನ್ನು ತಯಾರುಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅನೇಕ ವಿದ್ಯಾಶಾಲೆಗಳ ವಿಚಾರವಾಗಿ ಅಕಾಮುಡೇಷನ್, ಎಕ್ವಿಪ್‌ಮೆಂಟ್‌ಗಳ ಬಗ್ಗೆ ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಅನೇಕ ಕಡೆಗಳಲ್ಲಿ ಅಕಾಮುಡೇಷನ್ ಇಲ್ಲದೆ ಕುರಿದೊಡ್ಡಿಗಳು ಇದ್ದ ಹಾಗೆ ಇವೆ. ಅದನ್ನು ತಪ್ಪಿಸದೇ ಹೋದ ಪಕ್ಷದಲ್ಲಿ ಸರಿಯಾದಂಥ ಶಿಕ್ಷಣ ಕೊಡುವುದಕ್ಕಾಗುವುದಿಲ್ಲ. ಲೈಬ್ರರಿ, ಲ್ಯಾಬರೇಟರಿ ಎಕ್ವಿಪ್‌ಮೆಂಟ್, ಮ್ಯಾಪ್ಸ್ ಬಗ್ಗೆ ಸಾಕಾದಷ್ಟು ವ್ಯವಸ್ಥೆ ಮಾಡಬೇಕು. ವಿದ್ಯಾಭ್ಯಾಸಕ್ಕಾಗಿ ಎಲ್ಲಾ ಖಾತೆಗಳಿಗಿಂತ ಇದಕ್ಕೆ ಹೆಚ್ಚಾಗಿ ಹಣ ಖರ್ಚು ಮಾಡುತ್ತಾರೆ. ಅಂದರೆ 33½ ಕೋಟಿ ರೂಪಾಯಿ ವಿದ್ಯಾಸಂಸ್ಥೆಗಳಿಗೆ ಖರ್ಚು ಆಗುತ್ತಾ ಇದೆ. ಆದರೆ ಈ ವಿಚಾರದಲ್ಲಿ ಸರಿಯಾದಂಥ ಶಿಕ್ಷಣ ಕೊಟ್ಟು ಸರಿಯಾದಂಥ ಪ್ರಜೆಗಳನ್ನಾಗಿ ಮಾಡುವುದಕ್ಕೆ ಅವಕಾಶ ಆಗುತ್ತಾ ಇಲ್ಲ. ವಿದ್ಯಾರ್ಥಿಗಳನ್ನು ತಯಾರು ಮಾಡುವ ಶಾಲೆಗಳ ಉದ್ದೇಶವಾಗಲಿ, ಕಲಿಯತಕ್ಕ ವಿದ್ಯಾರ್ಥಿಗಳ ಉದ್ದೇಶವಾಗಲಿ ಪರೀಕ್ಷೆಯಲ್ಲಿ ಪಾಸು ಮಾಡಬೇಕು ಎಂಬುದೇ ಮೂಲ ಉದ್ದೇಶ ಆಗಿದೆಯೇ ಹೊರತು ಸರಿಯಾದ ಶಿಕ್ಷಣ ಪಡೆದು ಸತ್ಪ್ರಜೆಗಳಾಗಿ ದೇಶಸೇವೆ ಮಾಡಲು ಸರಿಯಾದ ಮಾರ್ಗ ಹಾಕಿಕೊಡುತ್ತಾ ಇಲ್ಲ. ಇದು ಒಂದು ಹಾಸ್ಯಾಸ್ಪದವಾದ ವಿಚಾರ ಮತ್ತು ನಮ್ಮ ದೌರ್ಭಾಗ್ಯ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ವಿದ್ಯಾನಗರದಲ್ಲಿ ಮೂಲ ಶಿಕ್ಷಣ ಕೇಂದ್ರ ಎಂದು ನಡೆಸುತ್ತಿದ್ದಾರೆ. ಅಲ್ಲಿಯ ಶಿಕ್ಷಕ ಸಂಘದವರು ಎಲ್ಲರಿಗೂ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ.

> "ಈ ಕೇಂದ್ರದಲ್ಲಿ ದಿನಾಂಕ 6-5-1967 ರಂದು, ಅಂದರೆ ನಮ್ಮ ಕೇಂದ್ರದ ಪ್ರಥಮ ವರ್ಷದ ಪರೀಕ್ಷಾ ಸಮಯದಲ್ಲಿ, ವಿದ್ಯುಚ್ಛಕ್ತಿಯ ಸರಬರಾಜು ನಿಂತು, ಓದುವುದಕ್ಕೆ ಬೆಳಕಾಗಲೀ, ಕುಡಿಯುವುದಕ್ಕೆ ನೀರಾಗಲೀ ಇಲ್ಲದಂತಾಯಿತು. ಪರೀಕ್ಷಾ ಸಮಯ; ನಮ್ಮಗಳ ಕಷ್ಟ ಹೇಳತೀರದು. ಅಂತೂ ಕಂಡು ಕೇಳದ ಕಷ್ಟಗಳಿಂದ ಪರೀಕ್ಷೆಯನ್ನು

(ಶ್ರೀ ಟಿ. ಆರ್. ಶಾಮಣ್ಣ)

ಮುಗಿಸಿ ರಜಾ ಕಾಲದಲ್ಲಿ ನಮ್ಮ ಸ್ಥಳಗಳಿಗೆ ವಾಪಸಾದೆವು. ರಜೆಯ ನಂತರ ಕೇಂದ್ರಕ್ಕೆ ಹಿಂತಿರುಗಿದ ಮೇಲೆ, ಪ್ರಥಮ ದಿನದಲ್ಲೇ ಬೆಳಕೂ ಇಲ್ಲ, ನೀರೂ ಇಲ್ಲ. ಈ ಕಷ್ಟವನ್ನು, ರಾಜ್ಯದ ಮಾನ್ಯ ವಿದ್ಯಾ ಮಂತ್ರಿಗಳಿಗೂ, ಮಾನ್ಯ ವಿದ್ಯುತ್ ಇಲಾಖಾ ಮಂತ್ರಿಗಳಿಗೂ, ವಿದ್ಯಾ ಇಲಾಖೆಯ ಮೇಲಧಿಕಾರಿಗಳಿಗೂ ಮನವಿ ಮೂಲಕ ತಿಳಿಸಿದೆವು. ಈಗಿನವರೆಗೂ ಇದನ್ನು ವಿಚಾರಿಸುವವರೇ ಇಲ್ಲವಾಗಿದೆ. ವಿದ್ಯುಚ್ಛಕ್ತಿ ಹಠಾತ್ತನೆ ನಿಲ್ಲಲು ವಿದ್ಯುತ್ ಶಾಖೆಯವರು-ನೀಡುವ ಕಾರಣ ಈ ಕೇಂದ್ರದಿಂದ 47,000 ರೂಪಾಯಿಗಳ ಬಾಕಿ ಇದೆಯೆಂದು; ಈ ಕೇಂದ್ರದ ಶಿಕ್ಷಣಾರ್ಥಿಗಳಿಂದ ಪ್ರತಿ ತಿಂಗಳೂ ವಿದ್ಯುಚ್ಛಕ್ತಿಯ ಶುಲ್ಕವಾಗಿ ಮಾಹೆಯಾನ ಒಂದು ರೂಪಾಯಿನಂತೆ ಸಂದಾಯವೂ ಆಗಿದೆ. 47,750 ರೂಪಾಯಿಗಳು ಬಾಕಿ ಇದ್ದಮೇಲೆ ಸರ್ಕಾರ ಮುಂಚಿತವಾಗಿ ವಸೂಲಿ ಕ್ರಮ ಏಕೆ ಕೈಗೊಳ್ಳಲಿಲ್ಲ? ಹಠಾತ್ತನೆ ಈ ರೀತಿ ವಿದ್ಯುತ್ ಸರಬರಾಜನ್ನು ನಿಲ್ಲಿಸಿ ನಮ್ಮಗಳಿಗೆ ತೊಂದರೆ ಕೊಡಲು ನಾವೇನು ಅಪರಾಧ ಮಾಡಿದ್ದೇವೆ''

ಎಂದು ಇನ್ನೂ ಏನೋ ಬರೆದಿದ್ದಾರೆ. ಈ ರೀತಿ 47 ಸಾವಿರ ರೂಪಾಯಿ ಬಾಕಿ ನಿಲ್ಲುವವರೆಗೂ ಏನು ಮಾಡುತ್ತಿದ್ದರು? ವಿದ್ಯಾರ್ಥಿಗಳನ್ನು ತಯಾರು ಮಾಡತಕ್ಕ ಉಪಾಧ್ಯಾಯರು ಶಿಕ್ಷಣ ಹೊಂದುವಂಥ ಜಾಗದಲ್ಲಿಯೇ ಇಂಥ ಅವ್ಯವಸ್ಥೆ. ಆದರೆ ಬೇರೆ ಸ್ಕೂಲುಗಳು ಎಷ್ಟರಮಟ್ಟಿಗೆ ನಡೆಯುತ್ತವೆ ಎನ್ನುವ ಅಂಶವನ್ನು ನಾವು ಗಮನದಲ್ಲಿಟ್ಟು ಯಾವುದೇ ಬಾಕಿಯನ್ನು ಕೊಡಬೇಕೋ ಏನೋ ಅದಕ್ಕಾಗಿ ಕಾಯದೆ ಅವರಿಗೆ ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸಿ, ನೀರು ಕುಡಿಯುವುದಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಹಾಗೆ ಮಾಡದೆ ಹೋದರೆ ಅನ್ಯಾಯವಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಸ್ಕಾಲರ್‌ಷಿಪ್‌ಗಳನ್ನು ಕೊಡುವಾಗ ವರ್ಷ ಪೂರೈಸಿದರೂ ಕೊಡುತ್ತಿಲ್ಲ. ಸ್ಕಾಲರ್‌ಷಿಪ್ ಸಕಾಲದಲ್ಲಿ ಸಂದಾಯವಾಗುತ್ತಿಲ್ಲ ಎಂದು ಪತ್ರಿಕೆಗಳಲ್ಲಿ ಕೂಡ ಬರುತ್ತಿದೆ. ಸ್ಕಾಲರ್‌ಷಿಪ್ ಕೊಡುವುದು ಅವರು ವಿದ್ಯಾಭ್ಯಾಸ ಮಾಡುವುದಕ್ಕೆ. ವಿದ್ಯಾಭ್ಯಾಸ ಮುಗಿದಮೇಲೆ ಕೊಟ್ಟರೆ ಅದರಿಂದ ಏನು ಪ್ರಯೋಜನ? ಬಡವರಿಗೆ ಅನುಕೂಲ ಮಾಡಬೇಕೆಂದು ಏನು ಸ್ಕಾಲರ್‌ಷಿಪ್ ಕೊಡುತ್ತಿದ್ದೀರಿ ಅದನ್ನು ನ್ಯಾಯವಿದ್ದವರಿಗೆ, ಸಕಾಲದಲ್ಲಿ ಕೊಟ್ಟರೆ ನಿಜವಾಗಿಯೂ ಸಹಾಯವಾಗುತ್ತದೆ. ಸ್ಕಾಲರ್‌ಷಿಪ್ ಹಂಚುವುದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡು ಯಾರಿಗೆ ಕೊಡಬೇಕೆಂಬುದರ ಬಗ್ಗೆ ತೀರ್ಮಾನ ಮಾಡಿ ಸರಿಯಾದ ಕಾಲದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸೂಚಿಸುತ್ತೇನೆ.

ಸ್ಕೂಲುಗಳಿಗೆ ಗ್ರಾಂಟುಗಳನ್ನು ಕೊಡುತ್ತಾರೆ. ಇದನ್ನು ಕೊಡುವಾಗ ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ. ಎನ್ನುವಂತೆ ಸಣ್ಣ ಪುಟ್ಟ ಗುಮಾಸ್ತರುಗಳಿಗೆ ಬೇರೆ ಬೇರೆ ರೀತಿಯಲ್ಲಿ ತೃಪ್ತಿಪಡಿಸಿದರೆ ಪೇಪರ್ ಹೊರಕ್ಕೆ ಬರುತ್ತದೆ. ಈ ಗುಮಾಸ್ತರ ಹಾವಳಿಯನ್ನು ತಪ್ಪಿಸಿದರೆ ಬಹಳ ಅನುಕೂಲವಾಗುತ್ತದೆ. ಯಾರು ಈ ಗುಮಾಸ್ತರುಗಳಿಗೆ ಮರ್ಯಾದೆ ಮಾಡುತ್ತಾರೆ ಅಂಥವರಿಗೆ ಗ್ರಾಂಟ್ ಬೇಗ ಸಿಕ್ಕುತ್ತದೆ. ಗ್ರಾಂಟ್ ಬೇಗ ಸಿಕ್ಕದೆ ಹೋದರೆ ಪಾಠ ಹೇಳುವವರಿಗೆ ಬಹಳ ತೊಂದರೆಯಾಗುತ್ತದೆ. ವಿಶ್ವವಿದ್ಯಾನಿಲಯದವರು ಕೊಡತಕ್ಕ ಗ್ರಾಂಟನ್ನು ಕೂಡ ಸರಿಯಾದ ಕಾಲಕ್ಕೆ ಕೊಡಬೇಕು. ಹಾಗೆ ಕೊಡದೆ ಹೋದರೆ ನಿಜವಾಗಿಯೂ ಕೂಡ ಸ್ಕೂಲುಗಳಿಗೆ ಬಹಳ ತೊಂದರೆಯಾಗುತ್ತದೆ. ಎಲ್ಲಿ ತೊಂದರೆಯಾಗಿದೆ ಎನ್ನುವುದನ್ನು ಕಂಡುಹಿಡಿದು ಸಾಧ್ಯವಾದಷ್ಟು ಬೇಗ ಗ್ರಾಂಟು ಕೊಡುವುದಕ್ಕೆ ಏರ್ಪಾಡು ಮಾಡಬೇಕು.

ಎಲ್ಲರಿಗೂ ತಿಳಿದಿರುವ ಹಾಗೆ ವಿದ್ಯಾ ಖಾತೆಯ ಖರ್ಚು ಮುವ್ವತ್ತ ಮೂರುವರೆ ಕೋಟಿ ರೂಪಾಯಿ ಆಗುತ್ತದೆ. ಇಷ್ಟು ಹೆಚ್ಚಾದರೂ ಪರವಾಇಲ್ಲ, ವಿದ್ಯಾಭ್ಯಾಸಕ್ಕೆ ಖರ್ಚು ಮಾಡತಕ್ಕದ್ದು ನಷ್ಟವಾಗುವ ಖರ್ಚಲ್ಲ. ಆದರೆ ಅದರಿಂದ ಎಷ್ಟು ಪ್ರತಿಫಲ ನಮಗೆ ದೊರೆಯಬೇಕೋ ಅಷ್ಟು ದೊರೆಯುತ್ತಿಲ್ಲ ಎನ್ನುವುದು ಶೋಚನೀಯ ಎಂದು ಹೇಳಬೇಕಾಗಿದೆ.

ಪಠ್ಯಪುಸ್ತಗಳ ವಿಷಯ ಹೇಳಬೇಕಾದರೆ, ಅವುಗಳನ್ನು ಪ್ರಕಟಿಸುವ ಹಕ್ಕನ್ನು ಯಾರಿಗೆ ಬೇಕೋ ಅವರಿಗೇ ಕೊಡುತ್ತಾರೆ. ಇದರಲ್ಲಿ ಒಂದು ರ್‍ಯಾಕೆಟ್ ಸಿಸ್ಟಂ ಇದೆ. ಇದನ್ನು ತಪ್ಪಿಸಬೇಕು. ಸರಿಯಾದ ರೀತಿಯಲ್ಲಿ ಬರೆಯತಕ್ಕ, ಸಾಹಿತ್ಯದಲ್ಲಿ ಪರಿಣತರಾಗಿರತಕ್ಕವರಿಗೆ ನ್ಯಾಯವಾಗಿ ಎಷ್ಟು ದುಡ್ಡು ಕೊಡಬೇಕೋ ಅಷ್ಟು ಕೊಟ್ಟು ಬರೆಸಬೇಕು. ಎಲ್ಲ ಬಾಬುಗಳಲ್ಲಿಯೂ ರಾಷ್ಟ್ರೀಕರಣ

ಮಾಡುತ್ತೇವೆ ಎಂದು ಹೇಳುತ್ತೀರಿ, ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದು ಹೇಳುತ್ತೀರಿ. ಆದರೆ ಪಠ್ಯ ಪುಸ್ತಕಗಳ ವಿಚಾರದಲ್ಲಿ ಇದನ್ನು ಅನ್ವಯಿಸುತ್ತಿಲ್ಲ. ತಮಗೆ ಬೇಕಾದ ಕೆಲವರಿಗೆ ಪೇಟ್ರನೇಜ್ ಕೊಡುವ ರೀತಿಯಲ್ಲಿ ಇದರ ಕೆಲಸ ನಡೆಯುತ್ತಿದೆ. ಇದನ್ನೆಲ್ಲಾ ತಪ್ಪಿಸಿ, ರಾಷ್ಟ್ರೀಕರಣ ಮಾಡಿ ಸರಿಯಾದ ಪಠ್ಯಪುಸ್ತಕಗಳನ್ನು ಬರೆಸಿ, ಸರ್ಕಾರದವರೇ ಅದನ್ನು ಹಂಚುವುದಕ್ಕೆ ಏರ್ಪಾಡು ಮಾಡಿ ಪೋಷಕವರ್ಗದವರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಈ ವಿದ್ಯಾ ಖಾತೆಗೆ ಆಗತಕ್ಕ ಖರ್ಚು ಇನ್ನೂ ಹೆಚ್ಚಾದರೂ ಪರವಾ ಇಲ್ಲ, ನ್ಯಾಯವಾದ ರೀತಿಯಲ್ಲಿ ಸರಿಯಾದ ವಿದ್ಯಾಭ್ಯಾಸ ಎಲ್ಲರಿಗೂ ದೊರೆಯುವಂತೆ ಮಾಡಬೇಕು, ಕಮರ್ಷಿಯಲ್ ವಿದ್ಯಾಭ್ಯಾಸದ ವ್ಯವಸ್ಥೆ ಸರಿಯಾಗಿ ಆಗದೆ ಹೋದರೆ ನಿಜವಾಗಿಯೂ ಕೂಡ ತೊಂದರೆಪಡಬೇಕಾದ ಕಾಲ ಬರುತ್ತದೆ. ಅದರ ಬಗ್ಗೆ ಶಿಕ್ಷಣ ಮಂತ್ರಿಯವರು ಸಂಬಂಧಪಟ್ಟವರನ್ನು ಕರೆಸಿ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಘನ ಸರ್ಕಾರದವರು ಮಂಡಿಸಿರತಕ್ಕ ವಿದ್ಯಾ ಇಲಾಖೆಯ ಆಯವ್ಯಯ ಅಂದಾಜನ್ನು ಅನುಮೋದಿಸುತ್ತ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಕೆಲವು ಮನವಿಗಳನ್ನು ಮಾಡಿಕೊಳ್ಳುವುದಕ್ಕೆ ಅಪೇಕ್ಷಿಸುತ್ತಿದ್ದೇನೆ. ಅನೇಕ ಮಾನ್ಯ ಸದಸ್ಯರು ಈಗಾಗಲೇ ಕೊಟ್ಟಿರುವ ಸಲಹೆಗಳನ್ನು ಪುಷ್ಟೀಕರಿಸುತ್ತ ನಾನು ಪ್ರಥಮವಾಗಿ ವಿದ್ಯಾಭ್ಯಾಸಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ಮತ್ತು ಸರ್ಕಾರದ ನಿಗಾ ಅತ್ಯಾವಶ್ಯಕವಾಗಿ ಬೇಕಾಗಿದೆ ಎನ್ನುವುದನ್ನು ಸಂಪೂರ್ಣವಾಗಿ ಸರ್ಕಾರದ ಗಮನಕ್ಕೆ ತಮ್ಮ ಮೂಲಕ ಈ ಸಂದರ್ಭದಲ್ಲಿ ತರುತ್ತಿದ್ದೇನೆ. ಕಟ್ಟಡಗಳ ಅವಶ್ಯಕತೆಯನ್ನು ಅನೇಕ ಜನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಕಟ್ಟಡಗಳನ್ನು ಹಳ್ಳಿಗಳಲ್ಲಿ ಪೂರೈಸುವುದು ಬಹಳ ಕಷ್ಟಕರವಾದ ವಿಚಾರ. ಗ್ರಾಮಾಂತರಗಳಲ್ಲಿರುವ ಆರ್ಥಿಕ ಸಮಸ್ಯೆ ಎಷ್ಟು ಮಟ್ಟಿಗೆ ಇದೆ, ಅವರು ಆರ್ಥಿಕವಾಗಿ ಯಾವ ರೀತಿ ಸಾಗುತ್ತಿದ್ದಾರೆ ಎನ್ನುವುದನ್ನು ನಾವೆಲ್ಲಾ ಚೆನ್ನಾಗಿ ಅರಿತಿದ್ದೇವೆ. ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಕಟ್ಟಡಗಳ ಹೊಣೆಗಾರಿಕೆಯನ್ನು ಬಹುಭಾಗ ಗ್ರಾಮಾಂತರ ಪ್ರದೇಶಗಳ ಜನಗಳ ಮೇಲೆ ಹಾಕಿರುವುದನ್ನು ಸ್ವಲ್ಪಮಟ್ಟಿಗೆ ಮಾರ್ಪಾಡು ಮಾಡಬೇಕು ಮತ್ತು ಸರ್ಕಾರ ಹೆಚ್ಚು ಭಾಗದ ಹಣವನ್ನು ವಹಿಸಿಕೊಳ್ಳುವುದು ಅಗತ್ಯ ಎಂದು ನನ್ನ ಸಲಹೆಯನ್ನು ಸರ್ಕಾರದ ಮುಂದೆ ತಮ್ಮ ಮೂಲಕ ಇಡುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಮೊನ್ನೆ ತಾನೆ ಸರ್ಕಾರದವರು ಒಂದು ಆರ್ಡರ್ ಮಾಡಿದ್ದಾರೆ. ಸ್ಥಳೀಯ ಸಂಸ್ಥೆಗಳ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಸೌಕರ್ಯವನ್ನು ಆಯಾ ಪ್ರದೇಶದಲ್ಲಿರುವವರಿಗೆ ಒದಗಿಸಿಕೊಡುವುದಕ್ಕಾಗಿ ಹೌಸಿಂಗ್ ಬೋರ್ಡ್‌ನವರು ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಗತ್ಯವಾಗಿ ಪೂರೈಸಿಕೊಳ್ಳಬೇಕಾದ ಕೆಲವು ಕಟ್ಟಡಗಳಿಗೂ ಈ ನಿಯಮವನ್ನು ಏಕೆ ಅನ್ವಯಿಸಬಾರದು, ಸರ್ಕಾರ ಈ ಹೊಣೆಗಾರಿಕೆಯನ್ನು ಹೊತ್ತು ಸ್ಥಳೀಯ ಸಂಸ್ಥೆಗಳಿಗೆ ಸಹಾಯ ಮಾಡಿ ಇಂಥ ಕಟ್ಟಡಗಳನ್ನು ಏಕೆ ಪೂರೈಸಿಕೊಡಬಾರದು ? ಈ ರೀತಿ ಮಾಡಿ, ಕಟ್ಟಡಗಳನ್ನು ಪೂರೈಸಿಕೊಟ್ಟರೆ ಯಾವ ಒಂದು ಸಮಸ್ಯೆ ಈಗ ಇದೆಯೋ ಅದು ಸುಲಭವಾಗಿ ಪರಿಹಾರವಾಗುತ್ತದೆ ಮತ್ತು ಗ್ರಾಮಾಂತರ ಜನಗಳಿಗೂ ಅಷ್ಟು ಅನುಕೂಲವಾದ ಕಾರ್ಯವಾಗುತ್ತದೆ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಟ್ಟಡಗಳಾದ ನಂತರ ಚಿಕ್ಕ ಮಕ್ಕಳ ಮನಸ್ಸನ್ನು ಪರಿವರ್ತನೆ ಮಾಡುವುದು ಅತ್ಯಗತ್ಯವಾಗಿ ಆಗಬೇಕಾಗಿದೆ. ಇದಕ್ಕೆ ನರ್ಸರಿ ಶಾಲೆಗಳು ಆಗಬೇಕಾದ್ದು ಅತ್ಯಗತ್ಯ ನರ್ಸರಿ ಶಾಲೆಗಳನ್ನು ಮತ್ತು ಪ್ರಿ ಪ್ರೈಮರಿ ಶಾಲೆಗಳನ್ನು ಸರ್ಕಾರ ನಡೆಸದೆ ಸಾರ್ವಜನಿಕರಿಗೆ ವಹಿಸಿಕೊಟ್ಟರೆ ಎಷ್ಟರ ಮಟ್ಟಿಗೆ ನಡೆಯುತ್ತದೆ ಎನ್ನುವುದನ್ನು ನಾವೆಲ್ಲರೂ ಚೆನ್ನಾಗಿ ಮನಗಾಣಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲವೆನ್ನುವುದನ್ನು ಮನಗಂಡೂ ನನ್ನ ಅನೇಕ ಜನ ಸ್ನೇಹಿತರು ಈ ತರಹ ಸಲಹೆ ಕೊಡುವುದನ್ನು ನೋಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಮನಸ್ಸು ಪರಿವರ್ತನೆಯಾಗಬಾರದೇ ಅನ್ನಿಸುತ್ತದೆ. ಮಕ್ಕಳ ಮನಸ್ಸು ಪರಿವರ್ತನೆಯಾಗದೆ ದೇಶದ ಅಭ್ಯುದಯವಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಇಂಥ ಯಾವುದೇ ಸೌಕರ್ಯಗಳನ್ನು ನೇರವಾಗಿ ಸಾರ್ವಜನಿಕರು ತಮ್ಮ ಸ್ವಂತ ವೆಚ್ಚದಿಂದ ನಿರ್ವಹಿಸುವುದಕ್ಕೆ ತುಂಬ ಕಷ್ಟಕರವಾಗಿದೆ. ಸರ್ಕಾರದವರು ಸೋಷಿಯಲ್ ಎಜುಕೇಷನ್, ಪ್ರಾಹಿಬಿಷನ್ ಇವುಗಳಿಂದ ಬರ

(ಶ್ರೀ ಬಿ. ಗಂಗಣ್ಣ)

ತಕ್ಕ ಅನೇಕ ವಿಧವಾದ ಉತ್ಪತ್ತಿಯನ್ನು ಸೇರಿಸಿ, ನಾನಾ ಆಫೀಸುಗಳಲ್ಲಿ ಖರ್ಚನ್ನು ಸ್ವಲ್ಪ ಕಡಮೆ ಮಾಡಿ ನರ್ಸರಿ ಶಾಲೆಗಳನ್ನು ತೆಗೆಯುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಈ ನರ್ಸರಿ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳ ಸೂಪರ್‌ವಿಷನ್‌ನಲ್ಲಿ ನಡೆಸುವುದಕ್ಕೆ ವ್ಯವಸ್ಥೆ ಮಾಡಿದರೆ ಮಾನಸಿಕ ಪರಿವರ್ತನೆ ಮಕ್ಕಳ ಮನಸ್ಸಿನಲ್ಲಿ ಆಗಿ ದೇಶದ ಅಭ್ಯುದಯವಾಗುವಂತೆ ಒಳ್ಳೆಯ ಮಕ್ಕಳನ್ನು ತಯಾರು ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಸಲಹೆಯನ್ನು ಕೂಡ ಸರ್ಕಾರದ ಮುಂದೆ ಇಡುತ್ತಿದ್ದೇನೆ.

ಪ್ರೈಮರಿಯಿಂದ ಸೆಕೆಂಡರಿ ವಿದ್ಯಾಭ್ಯಾಸದವರೆಗೆ ನಮ್ಮ ಮಿತ್ರರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ನಮ್ಮಲ್ಲಿ ಈಗ ಉಚಿತ ಶಿಕ್ಷಣವನ್ನು ಜಾರಿಗೆತಂದಿದ್ದಾರೆ, ಇದರಿಂದ ವಿದ್ಯಾಭ್ಯಾಸಕ್ಕೆ ಸೌಕರ್ಯವಾಗಿ ಜನರಿಗೆ ಉತ್ಸಾಹದಾಯಕವಾಗಿದೆ, ಇದರಿಂದ ದೇಶಕ್ಕೂ ಒಳ್ಳೆಯದಾಗುತ್ತದೆ. ಆದರೆ ಇನ್ನೂ ಕೆಲವು ಕಷ್ಟಗಳು ಇವೆ. ಮನೆಗಳನ್ನು ಒದಗಿಸಬೇಕಾದ್ದು ಅನಿವಾರ್ಯವಾಗಿದೆ. ಗ್ರಾಮಾಂತರಗಳಲ್ಲಿ ಅನೇಕರು ಎಲ್ಲಾ ವಿಧದಲ್ಲೂ ಹಿಂದುಳಿದವರಿದ್ದಾರೆ, ಅವರಿಗೆ ನಿತ್ಯ ಜೀವನ ನಡೆಸುವುದೇ ಕಷ್ಟವಾಗಿದೆ, ಅವರಿಗೆ ಮಕ್ಕಳನ್ನು ಶಾಲೆಗೆ ಸೇರಿಸಿ ವಿದ್ಯೆ ಕಲಿಸಲು ಶಕ್ತಿಯೇ ಇಲ್ಲ. ಪಕ್ಕದಲ್ಲಿರುವ ಅನುಕೂಲಸ್ಥರು ಅವರ ಮಕ್ಕಳನ್ನು ಶಾಲೆಗೆ ಕಳಿಸುವುದನ್ನು ನೋಡಿ ಅವರಲ್ಲಿ ಮಾನಸಿಕ ಪರಿಣಾಮವಾಗುತ್ತಿದೆ. ಹೀಗಾಗಿ ಬಡಮಕ್ಕಳಿಗೆ ವಿದ್ಯಾಭ್ಯಾಸಮಾಡಲು ಅವಕಾಶವಿಲ್ಲದಂತಾಗಿದೆ. ಆದುದರಿಂದ ಅಂಥವರ ಪ್ರೈಮರಿಯಿಂದ ಸೆಕೆಂಡರಿಯವರೆಗಿನ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಸರಕಾರ ವಹಿಸಿಕೊಂಡು ಆ ಮಕ್ಕಳಿಗೆ ಬಟ್ಟೆ, ಊಟ ತಿಂಡಿ, ಪುಸ್ತಕಗಳು ಒದಗಿಸಬೇಕು, ಏಕನಾಮಿಕಲ್ಲಾಗಿ ಮತ್ತು ಸೋಷಿಯಲ್ಲಾಗಿ ಹಿಂದುಳಿದಿರುವವರ ಮಕ್ಕಳಿಗೆ ಹೀಗೆ ಸಹಾಯ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಹಾಗೆಯೇ ಕಾಲೇಜು ವಿದ್ಯಾಭ್ಯಾಸವೂ ಒಂದು ಸಮಸ್ಯೆಯಾಗಿದೆ, ಇಂದು ಕಾಲೇಜುಗಳಿಗೆ ಸೇರಬೇಕಾದರೆ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆದಿರಬೇಕು, ಪಡೆಯದಿದ್ದರೆ ಕಾಲೇಜಿಗೆ ಸೇರಲು ಅವಕಾಶ ದೊರೆಯುವುದಿಲ್ಲ ಎಂಬುದು ಈ ವರ್ಷ ಚೆನ್ನಾಗಿ ಅರ್ಥವಾಗಿದೆ. ಇಂಥ ಸನ್ನಿವೇಶವನ್ನು ಹೋಗಲಾಡಿಸುವುದಕ್ಕೆ ಸರಕಾರ ಜಾರಿಗೆ ತಂದಿರುವ ಹೈಯರ್‌ಸೆಕೆಂಡರಿ ಶಿಕ್ಷಣದ ಪದ್ಧತಿಯು ಪ್ರೋತ್ಸಾಹದಾಯಕವಾಗಿದೆ. ಆದರೆ ಅಲ್ಲಿ ಟ್ರೈನ್ಡ್ ಸ್ಟಾಫ್ ಇಲ್ಲದೆ ರಿಸಲ್ಟ್ ಬಹಳ ಕಡಮೆಯಾಗಿದೆ, ಅನುತ್ತೀರ್ಣರಾಗುವವರ ಸಂಖ್ಯೆ ಹೆಚ್ಚಾಗಿದೆ. ಇದನ್ನು ಕಡಮೆ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕು. ಈಗ ಹೈಸ್ಕೂಲು ಮತ್ತು ಕಾಲೇಜುಗಳಿಗೆ ಬಹಳ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟಿದೆ, ಪಾಠ ಹೇಳುವವರಿಗೆ ಸೌಕರ್ಯ ಕಲ್ಪಿಸಿದೆ, ನೇರವಾಗಿ ಅವರಿಗೆ ಚೆಕ್ ಮೂಲಕ ಸಂಬಳ ಪಾವತಿಯಾಗುತ್ತಿರುವುದರಿಂದ ಅವರಿಗೆ ಬರಬೇಕಾದ ಸಂಬಳ ಪೂರ್ಣವಾಗಿ ದೊರೆಯುತ್ತದೆ. ಇದೇ ರೀತಿಯಲ್ಲಿ ಎಕ್ವಿಪ್‌ಮೆಂಟ್ ಗ್ರ್ಯಾಂಟನ್ನೂ ನೇರವಾಗಿ ಸರಕಾರದವರೇ ಕೊಡುವುದು ಅವಶ್ಯಕವಾಗಿದೆ. ಖಾಸಗಿಯವರು ಈಗ ವಿದ್ಯಾಸಂಸ್ಥೆಗಳನ್ನು ಕಾಳಸಂಸ್ಥೆ ಏಜೆನ್ಸಿಯಾಗಿ ಮಾಡಿದ್ದಾರೆ. ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಸಾಕಷ್ಟು ಎಕ್ವಿಪ್‌ಮೆಂಟಿಲ್ಲ, ಫರ್ನಿಚರ್ ಇಲ್ಲ ಇದರಿಂದ ಓದುವ ಮಕ್ಕಳಿಗೆ ಸೌಕರ್ಯ ಸಿಕ್ಕದೆ ತೊಂದರೆಯಾಗಿದೆ. ಇದಕ್ಕಾಗಿ ಒಂದು ಕಾರ್ಪೊರೇಷನ್ ಅಥವಾ ಸಂಸ್ಥೆ ಮಾಡಿ ಹೈಸ್ಕೂಲು ಮತ್ತು ಕಾಲೇಜುಗಳನ್ನು ನಡೆಸುವವರಿಂದ ಎಕ್ವಿಪ್‌ಮೆಂಟ್ ಮತ್ತು ಫರ್ನಿಚರ್ ಒದಗಿಸಲು ಅನುಕೂಲವಾಗುವಂತೆ ಸರಕಾರ ಮ್ಯಾಚಿಂಗ್ ಗ್ರ್ಯಾಂಟನ್ನು ಪಡೆದು ನೇರವಾಗಿ ಸರಕಾರವೇ ಒದಗಿಸಬೇಕು.

ಇನ್ನು ಟೆಕ್ನಿಕಲ್ ಎಜುಕೇಷನ್‌ಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ ವಿಚಾರ. ಗ್ರಾಮಾಂತರ ಪ್ರದೇಶಗಳವರಿಗೆ ತಮ್ಮ ಮಕ್ಕಳನ್ನು ಟೆಕ್ನಿಕಲ್ ಶಿಕ್ಷಣಕ್ಕೆ ಕಳಿಸಲು ಕಷ್ಟವಾಗಿದೆ, ಮೆರಿಟ್ ಮೇಲೆ ಸೀಟುಗಳನ್ನು ಅಲ್ಲಿ ಕೊಡುವುದರಿಂದ ಪಟ್ಟಣಗಳಲ್ಲಿರುವ ವಿದ್ಯಾವಂತರ ಮಕ್ಕಳಿಗೆ ಮಾತ್ರ ಹೆಚ್ಚು ಅಂಕಗಳನ್ನು ಪಡೆಯುವುದಕ್ಕೆ ಅವಕಾಶವಿರುವುದರಿಂದ ಅವರಿಗೆ ಹೆಚ್ಚು ಅವಕಾಶವಾಗುತ್ತದೆ. ಇಂಥ ಪ್ರಸಂಗವನ್ನು ಹೋಗಲಾಡಿಸುವುದಕ್ಕೆ ಒಂದು ಸಲಹೆಯೇನೆಂದರೆ ಮೆರಿಟ್ಟನ್ನು ಎರಡು ವಿಧವಾಗಿ ಪರಿಗಣಿಸಬಹುದು, ರೂರಲ್ ಮತ್ತು ಅರ್ಬನ್ ಮಕ್ಕಳಿಗೆ ಪ್ರತ್ಯೇಕವಾಗಿ ಮೆರಿಟ್ಟನ್ನು ಪರಿಗಣಿಸಿದರೆ ಗ್ರಾಮಾಂತರದವರಿಗೆ ಮತ್ತು ಪಟ್ಟಣದವರಿಗೆ ಹೀಗೆ ಎಲ್ಲರಿಗೂ ಅವಕಾಶ ದೊರೆತಂತಾಗುತ್ತದೆ. ಹೀಗೆ ಗ್ರಾಮಾಂತರದವರನ್ನು ಬೇರೆಯಾಗಿ ಒಂದು ಗುಂಪು ಮಾಡಿ ಅವರಲ್ಲಿ ಮೆರಿಟ್‌ಮೇಲೆ ಆರಿಸಿ, ಹಾಗೆಯೇ ಪಟ್ಟಣದವರನ್ನು ಬೇರೆ ಗುಂಪುಮಾಡಿ ಅವರಲ್ಲಿ ಕೆಲವರನ್ನು ಮೆರಿಟ್ ಮೇಲೆ ಆರಿಸಿ ಅವಕಾಶ ಕೊಟ್ಟರೆ ಎಲ್ಲ ಪ್ರದೇಶದವರಿಗೂ ಅವಕಾಶ ದೊರೆಯಲು ಅನುಕೂಲವಾಗುತ್ತದೆ. ವ್ಯವಸಾಯಗಾರರ ಮಕ್ಕಳಿಗೇ ಒಂದು ಪ್ರತ್ಯೇಕ ಪೂಲ್ ಇರಬೇಕು, ಈಗ ಪೊಲಿಟಿಕಲ್ ಸಫರರ್ಸ್, ಡಿಫೆನ್ಸ್ ಸರ್ವಿಸ್‌ನವರಿಗೆ, ಎಕ್ಸ್ ಸರ್ವಿಸ್‌ಮೆನ್‌ಗೆ, ಷೆಡ್ಯೂಲ್ಡ್

ಕ್ಯಾಸ್ಟ್ಸ್ ಮತ್ತು ಟ್ರೈಬ್ಸ್ ಮುಂತಾದವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಒಂದು ವಿಶೇಷ ಅವಕಾಶ ಇದೆ. ಇಂಥ ಅವಕಾಶ ವ್ಯವಸಾಯಗಾರರ ಮಕ್ಕಳಿಗಿಲ್ಲ, ಅವರಿಗೂ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಕಾಲೇಜುಗಳಿಗೆ ಸೇರಲು ಈ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿ ಗೊಂದಲವಾಗಿದೆ, ಸ್ಥಳಾವಕಾಶವಿಲ್ಲದೆ ಅನೇಕ ಮಕ್ಕಳು ಮನೆಯಲ್ಲೇ ಇರಬೇಕಾಗಿದೆ. ಇದನ್ನು ಮನಗಂಡು ವಿದ್ಯಾ ಮಂತ್ರಿಗಳು ಕಾಲೇಜುಗಳಲ್ಲಿ ಹೆಚ್ಚು ಅವಕಾಶಮಾಡಲು ತಿಳಿಸಿದ್ದಾರೆ, ಅವಕಾಶವಿರುವ ಕಡೆ ಹೆಚ್ಚು ಸೆಕ್ಷನ್ನುಗಳನ್ನು ತೆರೆಯಬಹುದು, ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಹುದು ಎಂದು ಸೂಚನೆ ಕೊಟ್ಟಿದ್ದರೂ ತೊಂದರೆಯಾಗಿದೆ. ಇದನ್ನು ಗಮನಿಸಿ ಎಲ್ಲರಿಗೂ ಅವಕಾಶ ದೊರೆಯುವಂತೆ ಮಂತ್ರಿಗಳು ಅವಕಾಶಮಾಡಿಕೊಡಬೇಕು.

ಇನ್ನೊಂದು ಮುಖ್ಯವಾದ ವಿಷಯವನ್ನು ನಾನು ಪ್ರಸ್ತಾಪಮಾಡಬೇಕಾಗಿದೆ, ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಪೂರೈಸಿ ಹೆಚ್ಚಿನ ವ್ಯಾಸಂಗಕ್ಕಾಗಿ ಕೆಲವರು ಹೊರದೇಶಗಳಿಗೆ ಹೋಗುತ್ತಿದ್ದಾರೆ. ಆದರೆ ಅವರ ಉಪಯೋಗ ನಮ್ಮ ದೇಶಕ್ಕೆ ಸಂಪೂರ್ಣವಾಗಿ ದೊರೆಯುತ್ತಿಲ್ಲ, ಇದನ್ನು ಸರಕಾರದವರು ಯೋಚನೆ ಮಾಡಬೇಕು. ಅನೇಕರು ಪಾಶ್ಚಾತ್ಯ ದೇಶಗಳಿಗೆ ಹೋಗಿ ಶಿಕ್ಷಣ ಪಡೆದು ಅನೇಕ ವರ್ಷಗಳವರೆಗೆ ಅಲ್ಲೇ ನಿಲ್ಲುತ್ತಿರುವ ನಿದರ್ಶನಗಳಿವೆ. ನಮ್ಮ ದೇಶದ ಹಣದಲ್ಲಿ ವಿದ್ಯಾಭ್ಯಾಸ ಮಾಡಲು ಪರದೇಶಗಳಿಗೆ ಹೋಗುವವರಿಂದ ನಮ್ಮ ದೇಶಕ್ಕೆ ಅನುಕೂಲವಾಗಬೇಕು, ಹಾಗೆ ಅನುಕೂಲವಾಗದಿದ್ದರೆ ಹಣ ಖರ್ಚುಮಾಡಿ ಪಾಶ್ಚಾತ್ಯ ದೇಶಗಳಿಗೆ ಹೋಗಲು ಸರಕಾರ ಅವಕಾಶ ಕೊಡಬಾರದು, ಹೊರದೇಶಗಳಿಗೆ ಕಳಿಸುವ ವಿದ್ಯಾರ್ಥಿಗಳಿಂದ ನಮಗೆ ಹೆಚ್ಚು ಉಪಯೋಗವಾಗಬೇಕು, ಹೆಚ್ಚು ಪ್ರತಿಫಲ ದೊರೆಯಬೇಕು. ಹೀಗಾಗುವಂತೆ ನೋಡಿಕೊಳ್ಳಬೇಕು, ಅದಕ್ಕೆ ತಕ್ಕ ವ್ಯವಸ್ಥೆಮಾಡಬೇಕು. ಈ ವಿದ್ಯಾಭ್ಯಾಸದ ವಿಚಾರದಲ್ಲಿ ಕಟ್ಟುನಿಟ್ಟಾದ ನಿಯಮ ರಚಿಸಿ ಹೊರದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ ಹೋದವರು ವಿದ್ಯಾಭ್ಯಾಸವು ಪೂರ್ಣವಾದ ಮೇಲೆ ತಕ್ಷಣ ನಮ್ಮ ದೇಶಕ್ಕೆ ವಾಪಸು ಬಂದು ಇಲ್ಲಿನ ಜನರಿಗೆ ಸೇವೆ ಸಲ್ಲಿಸುವುದಕ್ಕೆ ಅವಕಾಶವಾಗುವಂತೆ ಮಾಡಬೇಕು.

ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುವವರ ಯೋಗಕ್ಷೇಮವನ್ನು ಗಮನಿಸಿ ಈಗ ಸಣ್ಣ ಮಟ್ಟದಲ್ಲಿ ಸಂಬಳ ಪಡೆಯುತ್ತಿರುವವರಿಗೆ ಸರಕಾರ ಹೆಚ್ಚು ಸೌಕರ್ಯ ಕಲ್ಪಿಸಬೇಕು, ಗ್ರಾಮಾಂತರಗಳಲ್ಲಿರುವ ಉಪಾಧ್ಯಾಯರಿಗೆ ಲೋಕಲ್ ಬೋರ್ಡುಗಳ ಮೂಲಕ ಹೌಸಿಂಗ್ ಬೋರ್ಡ್ ಮನೆ ಕಟ್ಟಿಸಿಕೊಡಬೇಕು. ಹೀಗೆ ಮಾಡಿ ಸುಲಭವಾಗಿ ಅವರಿಗೆ ಮನೆ ದೊರೆಯಲು ಅವಕಾಶ ಮಾಡಬೇಕು. ಹಾಗೆಯೇ ಪ್ರೈಮರಿ ಮತ್ತು ಇತರೆ ಶಾಲೆಗಳ ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆ ಇದೆ, ಆದರೆ ಅವರಿಗೆ ಬಹಳ ಕಡಮೆ ಸ್ಟೈಪೆಂಡ್ ಇದೆ, ಅದರಿಂದ ಅವರು ಎರಡು ಕಡೆ ಸಂಸಾರ ನಡೆಸುವುದು ಕಷ್ಟವಾಗಿದೆ, ಕೇವಲ ತಿಂಗಳಿಗೆ 15 ರೂಪಾಯಿ ದೊರೆಯುತ್ತಿದೆ. ಇದನ್ನು ಸಾಧ್ಯವಾದಮಟ್ಟಿಗೆ ಈ ದಿವಸದ ಪರಿಸ್ಥಿತಿಗೆ ಹೊಂದುವಂತೆ ಹೆಚ್ಚುಮಾಡಿ ಅವರು ಟ್ರೈನಿಂಗ್ ಪೂರೈಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಪೂರೈಸುತ್ತೇನೆ.

12-30 P.M.

ಶ್ರೀ ಎನ್. ಎ. ಚೆನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕಂತಹ ಬೇಡಿಕೆಯನ್ನು ವಿರೋಧಿಸುತ್ತಾ ನಾನು ಒಂದೆರಡು ಮಾತಗಳಲ್ಲಿ, ವಿದ್ಯಾರಂಗದಲ್ಲಿರುವ ಅನೇಕ ಲೋಪದೋಷಗಳಲ್ಲಿ ಕೇವಲ ಒಂದೆರಡು ಲೋಪದೋಷಗಳನ್ನು ಎತ್ತಿ ತೋರಿಸುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾತಂತ್ರ್ಯ ಪಡೆದಮೇಲೆ ನಮ್ಮ ಆಹಾರ ಸ್ವಯಂಪರಿಪೂರ್ಣತೆ ಆರ್ಥಿಕ, ಸಮಾಜಿಕ ಸಮಾನತ್ವ ಮತ್ತು ರಾಷ್ಟ್ರದ ಇಂಟಿಗ್ರೇಶನ್ ಮುಂತಾದ—ಗುರಿ ಮುಟ್ಟಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಸೋಶಿಯಲಿಸ್ಟ್ ಡೆಮೋಕ್ರಸಿ ಸ್ಥಾಪನೆ ಮಾಡಬೇಕೆಂದು ಹೊರಟಿದ್ದೇವೆ. ಆದರೆ ವಾಸ್ತವಿಕವಾಗಿ ಅನುಸರಿಸುತ್ತಿರುವ ಮಾರ್ಗದಲ್ಲಿ ನಾವು ಈ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಮೇಲ್ಕಂಡ ಆಶಯಗಳನ್ನು ಕ್ರಾಂತಿಕಾರಿ ಬದಲಾವಣೆಗಳಿಲ್ಲದೆ ಸುಲಭವಾಗಿ ಪಡೆಯಬೇಕಾದರೆ, ಒಂದೇ ಒಂದು ಸಂಜೀವಿನಿ ಇದೆ. ಅದು ವಿದ್ಯೆ. ವಿದ್ಯೆಯನ್ನು ಯಾವ ರೀತಿ ಪ್ರಸಾರ ಮಾಡಿದರೆ, ನಮ್ಮ ಗುರಿಯನ್ನು ಸಾಧಿಸಬಹುದು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ನಮ್ಮ ಸರ್ಕಾರದವರು ಇಂದು ವಿದ್ಯಾ ಖಾತೆಯಲ್ಲಿ ಲಕ್ಷಾನುಗಟ್ಟಲೆ ಹಣ ಖರ್ಚು ಮಾಡುವುದನ್ನು ಬಿಟ್ಟು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದಾರೆ. ನಮ್ಮ ಮುಂದಿರುವ ಬಜೆಟ್ ಪ್ರಕಾರ 33 ಕೋಟಿ 57 ಲಕ್ಷ ಚಿಲ್ಲರೆ ರೂಪಾಯಿಯನ್ನು ಖರ್ಚು ಮಾಡುತ್ತಾರೆ. ಅದರಿಂದ ಪರ್‌ಕ್ಯಾಪಿಟಾ ಸುಮಾರು 17 ರೂಪಾಯಿಗಳಷ್ಟು ಖರ್ಚು ಮಾಡಿದಂತೆ

(ಶ್ರೀ ಎಚ್. ಎ. ಚನ್ನೇಗೌಡ)

ಆಗುತ್ತದೆ. ಇಷ್ಟು ಹಣ ಖರ್ಚು ಮಾಡಿದರೂ ವಿದ್ಯಾರಂಗದಲ್ಲಿ ನಾವು ನಮ್ಮ ಗುರಿಯನ್ನು ಮುಟ್ಟುತ್ತಾ ಇಲ್ಲ. ಇತ್ತೀಚೆಗೆ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವನ್ನು ತೆಗೆದುಕೊಂಡು ನೋಡಿದರೆ, ಅದರಲ್ಲಿ ಸುಮಾರು 35 ಪರ್‌ಸೆಂಟ್ ಉತ್ತೀರ್ಣರಾಗಿದ್ದಾರೆ. ನಾವು ಖರ್ಚು ಮಾಡುತ್ತಿರುವ ಹಣ ಎಷ್ಟು ಅಪವ್ಯಯವಾಗುತ್ತದೆ, ಎಷ್ಟು ಅನ್ಯಾಯವಾಗುತ್ತದೆ ಎಂದು ಇದರಿಂದ ಗೊತ್ತಾಗುತ್ತದೆ. ಉದಾಹರಣೆಗೆ ನನ್ನ ಕ್ಷೇತ್ರವಾದ ಪಾಂಡವಪುರ ಕೇಂದ್ರದಲ್ಲಿ 502 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದರು. ಅದರಲ್ಲಿ ಕೇವಲ 26 ಜನ ಪಾಸ್ ಮಾಡಿದ್ದಾರೆ. ಮೇಲ್ಕೋಟೆಯಲ್ಲಿ 57 ವಿದ್ಯಾರ್ಥಿಗಳಿಗೆ ಮೂರು ಜನ ಪಾಸ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಹೆಚ್ಚಿನ ಶೇಕಡಾವಾರು ವಿದ್ಯಾರ್ಥಿಗಳು ಪಾಸ್‌ಮಾಡಿದ್ದಾರೆ. ಅದರ ವಿಶ್ಲೇಷಣ ಇಷ್ಟೆ. ಎಲ್ಲೆಲ್ಲಿ ಪ್ರಿಪ್ರೈಮರಿ ಎಜ್ಯುಕೇಶನ್ ಅವಕಾಶ ಹೆಚ್ಚಾಗಿದೆಯೋ ಆ ಕಡೆ ಫಲಿತಾಂಶ ಚೆನ್ನಾಗಿದೆ. ವಿದ್ಯಾರ್ಥಿಯು ಚಿಕ್ಕ ವಯಸ್ಸಿನಲ್ಲೆ ವಿದ್ಯಾಭ್ಯಾಸವನ್ನು ಕ್ರಮವರಿತು ಹೇಳಿದರೆ ಚೆನ್ನಾಗಿ ಕಲಿಯುತ್ತಾನೆ. ಮೂರು ವರ್ಷದಲ್ಲಿ ಕಲಿಯುತ್ತಾರದ್ದನ್ನು ನೂರು ವರ್ಷವಾದರೂ ಕಲಿಯಲಾಗುವುದಿಲ್ಲ ಎಂದು ಒಂದು ಗಾದೆ ಇದೆ. ಚಿಕ್ಕ ವಯಸ್ಸಿನ ಮಕ್ಕಳಿಗೆ ಸೂಕ್ಷ್ಮತೆ ಹೆಚ್ಚು. ಕೆಲವು ನುರಿತ ಮನೋವಿಜ್ಞಾನಿಗಳು ಹೇಳುತ್ತಾರೆ—ಮೊದಲು 5 ವರ್ಷದಲ್ಲಿ ಕಲಿಯುವುದನ್ನು ಮುಂದಿನ 50 ವರ್ಷಗಳಲ್ಲಿ ಕಲಿಯಲಾಗದು ಎಂದು. ಕೊಠಾರಿ ಕಮಿಶನಿನವರು ಕೂಡ ಈ ರೀತಿ ಹೇಳುತ್ತಾರೆ : Modern researches have shown, that years between 3 and 10 are of the greater importance in the childs phyical, emotional and intellectual development''. ಆದ್ದರಿಂದ ನಾನಾದರೂ ಹೇಳುವುದಿಷ್ಟೆ—ರಾಜ್ಯದಲ್ಲಿ ಕಡ್ಡಾಯ ಉಚಿತ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿರುವಂತೆ ಕಡ್ಡಾಯವಾಗಿ ಉಚಿತ ಪ್ರೀ ಪ್ರೈಮರಿ ಎಜುಕೇಶನ್‌ನ್ನು ಜಾರಿಗೆ ತರಬೇಕು. ಹಣದ ಕೊರತೆಯನ್ನು ಮುಂದೆ ಮಾಡಿ ಪ್ರಿಪ್ರೈಮರಿ ಎಜುಕೇಶನ್ ಜಾರಿಗೆ ತರದೆ ಹೋದರೆ, ಸಮಾಜದಲ್ಲಿ ಪ್ರೈಮರಿ ಸ್ಕೂಲುಗಳಲ್ಲಿ ಹೋಗುತ್ತಾ ಹೋಗುತ್ತಾ ಹೆಚ್ಚು ಹೆಚ್ಚು ಹಣದ ಅಪವ್ಯಯ ಉಂಟಾಗುತ್ತದೆ. ಸ್ಟಾಗ್‌ನೇಷನ್ ಮತ್ತು ಸೆಗ್ರೆಗೇಷನ್ ಹೆಚ್ಚಿ ಪ್ರತಿಗಾಮಿ ಶಕ್ತಿ ಬೆಳೆಯುತ್ತವೆ. ಸ್ಟಾಟಿಸ್ಟಿಕ್ಸ್ ಕೊಡುವುದಾದರೆ, ಒಂದನೇ ಸ್ಟಾಂಡರ್ಡ್‌ನಲ್ಲಿ 100 ವಿದ್ಯಾರ್ಥಿಗಳಿದ್ದರೆ 58·2 ವಿದಾರ್ಥಿಗಳು, ಎರಡನೆ ಸ್ಟಾಂಡರ್ಡಿಗೆ ಬರುತ್ತಾರೆ, 47.1 ವಿದ್ಯಾರ್ಥಿಗಳು 3ನೇ ತರಗತಿಗೆ ಬರುತ್ತಾರೆ. ಕೊನೆಗೆ ಏಳನೆಯ ಕ್ಲಾಸಿನಲ್ಲಿ 15.4 ವಿದ್ಯಾರ್ಥಿಗಳಿರುತ್ತಾರೆ ಇದರಿಂದ ಸಮಾಜದ ಹಣ ಅಪವ್ಯಯವಾಗುತ್ತದೆ ಅಲ್ಲದೆ ಬೇರೇನೂ ಅಲ್ಲ ಆದ್ದರಿಂದ ನಾನು ಒತ್ತಾಯ ಪೂರ್ವಕವಾಗಿ ಉಚಿತ ಮತ್ತು ಕಡ್ಡಾಯವಾದ ಪ್ರಿಪ್ರೈಮರಿ ವಿದ್ಯಾಭ್ಯಾಸ ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಅಲ್ಲದೆ ನಮ್ಮ ಕಾನ್‌ಸ್ಟಿಟ್ಯೂಶನ್ ಕೂಡ ವಿರೋಧವಾಗಿಲ್ಲ. ರಾಜ್ಯಾಂಗದ 45ನೇ ಆರ್ಟಿಕಲ್ ಪ್ರಕಾರ 14ನೇ ವಯಸ್ಸಿನವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೊಡಬೇಕು ಎಂದು ಇದೆ, ಆರು ವರ್ಷದಿಂದ ಪ್ರಾರಂಭಿಸಬೇಕೆಂದು ಹೇಳಿಲ್ಲ, ಅದು ಯಾವ ಆಧಾರದ ಅಭಿಪ್ರಾಯ ಅಧಿಕಾರ ಮತ್ತು ಆಸಕ್ತಿ ಮೇಲೆ 6ನೇ ವರ್ಷದಿಂದ ಶಿಕ್ಷಣ ಪ್ರಾರಂಭಿಸಬೇಕೆಂದು ತೀರ್ಮಾನಿಸಿದರೋ ನನಗೆ ಗೊತ್ತಿಲ್ಲ. ರಾಜ್ಯದ 26,377 ಹಳ್ಳಿಗಳಲ್ಲಿ 20,430 ಪ್ರೈಮರಿ ಸ್ಕೂಲುಗಳಿವೆ; ಕೇವಲ 571 ನರ್ಸರಿ ಸ್ಕೂಲುಗಳಿವೆ. ನರ್ಸರಿ ಶಾಖೆಗೆ ಹಣ ಖರ್ಚು ಮಾಡುವುದು 7,77,900 ರೂಪಾಯಿ. ಸರ್ಕಾರಿ ನರ್ಸರಿ ಸ್ಕೂಲುಗಳಿಗೆ ಕೇವಲ 27,900 ಮಾತ್ರ; ಮಿಕ್ಕ 7,50,000 ರೂಪಾಯಿಗಳು ಖಾಸಗಿ ನರ್ಸರಿಗಳಿಗೆ ಅನುದಾನ ರೂಪದಲ್ಲಿ ಈ 7,50,00 ರೂಪಾಯಿಗಳಲ್ಲಿ 2,98,190 ರೂಪಾಯಿಗಳು ಬೆಂಗಳೂರು ಸಿಟಿಗೆ. ಬೆಂಗಳೂರು ಜಿಲ್ಲೆಗೆ 38,420 ರೂಪಾಯಿ ಮಂಡ್ಯ ಜಿಲ್ಲೆಗೆ ಕೇವಲ ರೂಪಾಯಿ 10,300. ಫಲವಿಶ್ಲೇಷಣೆ ಬೇಕಿಲ್ಲ ! ಈ ತಾರತಮ್ಯದಿಂದ ಸ್ವಾಭಾವಿಕವಾಗಿ ಹಳ್ಳಿಗಾಡಿನ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಅವರು ಪಟ್ಟಣದಲ್ಲಿ ತರಪೇತು ಪಡೆದ ವಿದ್ಯಾರ್ಥಿಗಳೊಡನೆ ಸಂಪೂರ್ಣವಾಗಿ ಕಾಂಪೀಟು ಮಾಡಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಪಾಸ್ ಮಾಡಿ ಮುಂದಿನ ತಾಂತ್ರಿಕ ಅಥವಾ ಹೆಚ್ಚಿನ ತರಗತಿಗೆ ಪ್ರವೇಶ ಪಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಉಚಿತ ಪ್ರೀ ಪ್ರೈಮರಿ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿ ಮಾಡಿದರೆ, ನಾವು ಖರ್ಚುಮಾಡಲಿರುವ ರಿಸೋರ್ಸಸ್‌ನಲ್ಲಿ, ವೇಸ್ಟೇಜ್, ಆಗಲಾರದು ಒಳ್ಳೆಯ ಫಲ ಸಿಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಪ್ರತಿಯೊಂದು ಪ್ರಾಥಮಿಕ ಶಾಲೆಯಲ್ಲೂ ಒಂದು ನರ್ಸರಿ ಸ್ಕೂಲು ಯೂನಿಟನ್ನು ಪ್ರಾರಂಭಿಸಬೇಕು. ಮಾನ್ಯ ಮಿತ್ರರಾದ ಗಂಗಣ್ಣನವರು ಹೇಳಿದಂತೆ ಹೌಸಿಂಗ್ ಬೋರ್ಡು ಮೂಲಕ ಶಾಲಾ ಕಟ್ಟಡಗಳನ್ನು ವಸತಿ ಕಟ್ಟಡಗಳನ್ನು ಕಟ್ಟಿಸಿ ಪಂಚಾಯ್ತಿಗಳ ಮುಖಾಂತರ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಮತ್ತು ಪಂಚಾಯಿತಿಗಳಿಂದ ಕಂತುವಾರು

ರೂಪದಲ್ಲಿ ಹಣವನ್ನು ತೆಗೆದುಕೊಳ್ಳಬೇಕು. ಶಾಲಾ ಆಡಳಿತವನ್ನು ಶಾಲಾ ಬೋರ್ಡುಗಳಿಗೆ ವಹಿಸುವುದನ್ನು ವಿರೋಧಿಸುತ್ತೇನೆ. ಅದರಿಂದ ಒಂದು ತರಹ ಡ್ಯೂಯಲ್ ಕಂಟ್ರೋಲ್ ಬರುತ್ತದೆ. ಅದು ಆರೋಗ್ಯಕರ ಚಿಹ್ನೆಯಲ್ಲ. 1920ರಲ್ಲಿ ಎಲಿಮೆಂಟರಿ ಎಜುಕೇಶನ್ ರೆಗ್ಯುಲೇಷನ್—ಪ್ರಕಾರ ಶಾಲೆಗಳ ಆಡಳಿತವನ್ನು ಜಿಲ್ಲಾ ಬೋರ್ಡುಗಳಿಗೆ ಸರಕಾರ ವಹಿಸಿ ಕೊಟ್ಟಿತು. ಆದರೆ ಪ್ರಯೋಗ ಪೂರ್ಣವಾಗಿ ವಿಫಲವಾದ್ದರಿಂದ 1941ರಲ್ಲಿ ಎಲಿಮೆಂಟರಿ ಎಜುಕೇಶನ್ ಆಕ್ಟ್ ಪಾಸ್ ಮಾಡಿ ಪುನಃ ಸರ್ಕಾರ ಶಾಲಾಡಳಿತವನ್ನು ವಾಪಸ್ ತೆಗೆದುಕೊಂಡರು. ಎಷ್ಟೇ ಖರ್ಚುಗಲಿ, ಕಷ್ಟವಾಗಲಿ ಸರ್ಕಾರದವರು ಈ ಕಂಪಲ್ಸರಿ ಫ್ರೀ ಪ್ರೈಮರಿ ಎಜುಕೇಶನ್ ಜೊತೆಗೆ ಕಡ್ಡಾಯ ಉಚಿತ ಫ್ರೀ ಪ್ರೈಮರಿ ಎಜುಕೇಶನ್‌ನ್ನು ಜಾರಿಗೆ ತಂದು ಚೆನ್ನಾಗಿ ನಡೆಸಬೇಕೆಂದು ಹೇಳಬಯಸುತ್ತೇನೆ.

ಇನ್ನು ಉಪಾಧ್ಯಾಯರುಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಪ್ರೈಮರಿ ಮತ್ತು ಪ್ರಿಪ್ರೈಮರಿ ಶಿಕ್ಷಕರ ಪೈಕಿ ಹೆಚ್ಚು ತಜ್ಞ ಶಿಕ್ಷಣ ಪಡೆದಂತಹವರನ್ನು ನೇಮಿಸಬೇಕು. ಸ್ಥಳದಲ್ಲಿ ಹುಟ್ಟಿದ ಉಪಾಧ್ಯಾಯರನ್ನು ಆಯಾ ಊರಿನಲ್ಲಿ ಅಥವಾ ಸಮೀಪದ ಹಳ್ಳಿ ಸ್ಕೂಲುಗಳಲ್ಲಿ ಇಡಬಾರದು. ಏಕೆಂದರೆ ಅವರು ರಾಜಕೀಯ ಮಾಡುವ ವ್ಯಕ್ತಿಗಳಾಗುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿರುವ ಉಪಾಧ್ಯಾಯರುಗಳು ಹೆಚ್ಚು ಹೆಚ್ಚು ವೈಯಕ್ತಿಕ ಕೆಲಸಗಳಿಗೆ ಗಮನ ಕೊಟ್ಟು, ಶಿಕ್ಷಣದ ಕಡೆಗೆ ಸ್ವಲ್ಪವೂ ಗಮನ ಕೊಡುವುದಿಲ್ಲ. ಉಪಾಧ್ಯಾಯರು ಈ ರೀತಿ ಮಾಡುವುದು ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳು ಹಿಂದೆ ಉಳಿಯುವುದಕ್ಕೆ ಒಂದು ಪ್ರಮುಖ ಕಾರಣವೆಂದು ಹೇಳಬಹುದು. ಕನಿಷ್ಟ ಪಕ್ಷ ಸ್ಥಳೀಯ ಉಪಾಧ್ಯಾಯರುಗಳನ್ನು ಅವರ ಸ್ಥಳದಿಂದ, 20 ಮೈಲಿಗಾದರೂ ದೂರ ಇಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಇವರು ಹೇಳಿದಂತಹ ಅಂಶ ಮಾನ್ಯ ಮಂತ್ರಿಯವರು ನೆನಪಿನಲ್ಲಿಟ್ಟುಕೊಳ್ಳಲಿಕ್ಕೆ ಹೇಳಿದಂತಹ ಅಂಶ.

ಶ್ರೀ ಎನ್. ಎ. ಚನ್ನೇಗೌಡ.—ಆದರೆ ಒಳ್ಳೆಯ ತರಬೇತು ಹೊಂದಿದ ಉಪಾಧ್ಯಾಯರುಗಳಿಗೆ ಹೆಚ್ಚಿನ ಸಂಬಳ ಕೊಡಬೇಕು; ಮತ್ತು ಅವರನ್ನು ರಾಜಕೀಯಕ್ಕೆ ಎಳೆಯಬಾರದು. ಇಂದು ವಿದ್ಯಾಕ್ಷೇತ್ರದಲ್ಲಿ ಪ್ರೈವೇಟ್ ಟ್ಯೂಶನ್ ಹಾವಳಿ ಬಹಳ ವಿಪರೀತ. ಒಬ್ಬೊಬ್ಬ ಟೀಚರ್ 100—150 ಹುಡುಗರಿಗೆ ಪಾಠ ಹೇಳಿಕೊಡುತ್ತಾರೆ. ಅವರಿಗೆ ಸರ್ಕಾರದಿಂದ ಬರತಕ್ಕ ವೇತನಕ್ಕಿಂತ ಪ್ರೈವೇಟ್ ಟ್ಯೂಷನಿನಲ್ಲಿ ಬರುವ ಆದಾಯವೇ ಹೆಚ್ಚು. ಪ್ರೈವೇಟ್ ಟ್ಯೂಷನ್ ಆಸೆಗೆ ಕ್ಲಾಸಿನಲ್ಲಿ ಪಾಠ ಸರಿಯಾಗಿ ಹೇಳದೆ, ಪ್ರೈವೇಟ್ ಟ್ಯೂಷನನ್ನೇ ಅವಲಂಬಿಸುವಂತೆ ಮಾಡುವುದರಿಂದ ಶಾಲೆಯಲ್ಲಿ ಸರಿಯಾದ ಶಿಕ್ಷಣ ಹುಡುಗರಿಗೆ ದೊರಕುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಪ್ರೈವೇಟ್ ಟ್ಯೂಷನ್ ತಪ್ಪಿಸಲು ಕಡ್ಡಾಯವಾದ ಮತ್ತು ಕಠಿಣವಾದ ಒಂದು ಕಾನೂನನ್ನು ಜಾರಿಗೆ ತಂದು, ಈ ಪ್ರೈವೇಟ್ ಟ್ಯೂಷನಿನ ಹಾವಳಿಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಂಟ್-ಇನ್-ಏಡ್ ರೂಲ್ಸನ್ನು ಜಾರಿಗೆ ಕೊಡುವ ವಿಚಾರ. ಯಾವ ಯಾವ ಸ್ಕೂಲುಗಳು, ಯಾವ ಯಾವ ಖಾಸಗೀ ಸಂಸ್ಥೆಗಳು ಗ್ರಾಂಟ್-ಇನ್-ಏಡ್ ರೂಲ್ಸನ್ನು ಅನುಷ್ಠಾನಕ್ಕೆ ತರುವುದಿಲ್ಲವೋ, ಅವಕ್ಕೆ ಗ್ರಾಂಟ್ ಕೊಡುವುದನ್ನು ಕೂಡಲೇ ನಿಲ್ಲಿಸಬೇಕು. ಮೈಸೂರು ನಗರ ವಿದ್ಯಾ ಸಂಸ್ಥೆಯಲ್ಲಿ ಒಬ್ಬ ಉಪಾಧ್ಯಾಯರನ್ನು ಕೆಲಸದಿಂದ ತೆಗೆದುಹಾಕಿದರು. ಡಿ. ಪಿ. ಐ. ಅವರು ಆ ಸಂಸ್ಥೆಯವರಿಗೆ ಆ ಉಪಾಧ್ಯಾಯರನ್ನು ಕೆಲಸದಿಂದ ತೆಗೆದುಹಾಕಿದ್ದು ತಪ್ಪು, ಅಕ್ರಮವಾದುದು, ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದರು. ಆದರೆ ಆ ಸಂಸ್ಥೆಯವರು ಡಿ. ಪಿ. ಐ. ರವರ ಆದೇಶವನ್ನು ತಿರಸ್ಕಾರ ಮಾಡಿದರು. ಯಾರ ಪ್ರಭಾವದಿಂದಲೋ ಏನೋ ಆ ಸಂಸ್ಥೆಗೆ ಸರ್ಕಾರದವರು ಗ್ರಾಂಟನ್ನು ಮತ್ತೆ ಕೊಟ್ಟರು. ಇದರಿಂದ ವಿದ್ಯಾಭ್ಯಾಸದ ಆಡಳಿತದಲ್ಲಿ ಬಿಗಿ ತಪ್ಪುತ್ತದೆ. ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗುತ್ತಿದೆ. ಬಡ ಉಪಾಧ್ಯಾಯರ ಗೋಳು ಹೆಚ್ಚುವುದನ್ನು ನೋಡುವುದಕ್ಕಾಗುತ್ತಿಲ್ಲ. ಪ್ರತಿಯೊಂದು ಅನುದಾನ ಪಡೆಯುವ ಶಾಲೆಯವರು ಗ್ರಾಂಟ್-ಇನ್-ಏಡ್ ರೂಲ್ಸನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.

ಕ್ಯಾಪಿಟೇಷನ್ ಫೀ ವಿಷಯವಾಗಿ ಕೆಲವು ಸದಸ್ಯರು ಹೇಳಿದ್ದಾರೆ. ಖಾಸಗೀ ಶಾಲೆಗಳಲ್ಲಿ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಎಷ್ಟು ವರ್ಷದವರಿಗೆ ಖಾಸಗೀ ವಿದ್ಯಾ ಸಂಸ್ಥೆಗಳು ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳಬೇಕು ? ಇದಕ್ಕೆ ಕಾಲಮಿತಿಯನ್ನು ಇಡುವುದಿಲ್ಲವೇ ? ಬರುತ್ತಾ, ಬರುತ್ತಾ ಮೊಬಲಗನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೇ ? ಮಾನ್ಯ ವಿದ್ಯಾಸಚಿವರು ಈ ಕ್ಯಾಪಿಟೇಷನ್ ಫೀ ಪದ್ಧತಿಗೆ ಒಂದು ಕಾಲಮಿತಿಯನ್ನು ಹಾಕಬೇಕೆಂದು ಒತ್ತಾಯಪಡಿಸಿ ಹೇಳುತ್ತೇನೆ. ಸರ್ಕಾರದ ಕಾಲೇಜುಗಳಲ್ಲಿ ಒಂದು ರೀತಿ ಫೀ ದರ ಇದ್ದರೆ, ಖಾಸಗೀ ಕಾಲೇಜು

(ಶ್ರೀ ಎನ್. ಎ. ಚನ್ನೇಗೌಡ.)

ಗಳಲ್ಲಿ ಒಂದು ರೀತಿಯ ಫೀ ದರ ಇರುತ್ತದೆ. ಈ ರೀತಿಯ ದರ ವ್ಯತ್ಯಾಸ ಖಂಡಿತ ಇರಕೂಡದು. ಸರ್ಕಾರೀ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳು ಕಡಿಮೆ ಫೀ ಕೊಟ್ಟು ಖಾಸಗೀ ಕಾಲೇಜು ಗಳಲ್ಲಿ ಓದುವ ವಿದ್ಯಾರ್ಥಿಗಳು ಕ್ಯಾಪಿಟೇಷನ್ ಫೀ ಜೊತೆಗೆ ಹೆಚ್ಚು ಫೀ ಕೊಡುವುದೆಂದರೆ ಅನ್ಯಾಯ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ರಾಮಣ್ಣ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಅನೇಕ ಸ್ನೇಹಿತರುಗಳು ಈ ಸಭೆಯ ಮುಂದಿರುವ ವಿದ್ಯಾಭ್ಯಾಸದ ಬೇಡಿಕೆ ಮೇಲೆ ಅದರಮೇಲೆ ಮಾತನಾಡಿದ್ದಾರೆ. ನಾನು ವಿಧ್ಯಾಭ್ಯಾಸದ ಬೇಡಿಕೆಯನ್ನು ಸ್ವಾಗತ ಮಾಡುತ್ತಾ ಕೆಲವಾರು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇವತ್ತಿನ ದಿವಸ ನನ್ನ ಸ್ನೇಹಿತರುಗಳು ಹೇಳಿದಂತೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬಹಳ ಮಹತ್ತರವಾದ ಒಂದು ಅವಕಾಶವನ್ನು ನಾವು ಮಾಡಿಕೊಡಬೇಕು. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅನೇಕ ಕಡೆ ಶಾಲಾ ಕಟ್ಟಡಗಳು ಇಲ್ಲದೆ ಬಹಳ ತೊಂದರೆಯಾಗಿದೆ. ಇದಕ್ಕೆ ಕಾರಣವಿಷ್ಟೆ. ಗ್ರಾಮಾಂತರ ಪ್ರದೇಶಗಳಿಗೆ ಬೇಕಾಗುವ ಏನಾದರೂ ಅನುಕೂಲಗಳನ್ನು ಸರ್ಕಾರದವರಲ್ಲಿ ಕೇಳಿದರೆ, ಹಳ್ಳಿಗಾಡಿನ ಜನರು, ರೈತರು ದುಡ್ಡನ್ನು ಕೊಡ ಬೇಕೆಂದು ಹೇಳುತ್ತಾರೆ. ಇವತ್ತಿನ ದಿವಸ ಜನಜೀವನ ಮಟ್ಟ ಏರುತ್ತಿರುವಾಗ, ಹಳ್ಳಿಗಳಲ್ಲಿರುವ ರೈತರು ತಮ್ಮ ಸಂಸಾರವನ್ನು ಸುಗಮವಾಗಿ ನಡೆಸುವುದೇ ಕಷ್ಟವಾಗಿರುವಾಗ, ಸ್ಕೂಲ್ ಕಟ್ಟಡ ಕಟ್ಟುವುದಕ್ಕೆ ತನ್ನ ಭಾಗದ ವಂತಿಕೆಯನ್ನು ಕೊಡಬೇಕೆಂದರೆ ಅವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಯಾವ ಯಾವ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳು ಇಲ್ಲ, ಅಲ್ಲಿ ಶಾಲಾ ಕಟ್ಟಡಗಳನ್ನು ತಾಲ್ಲೂಕ್ ಬೋರ್ಡ್ ವತಿಯಿಂದ, ಸರ್ಕಾರದ ವತಿಯಿಂದ ದುಡ್ಡು ಕೊಟ್ಟು ಕಟ್ಟಿಸಿ ಕೊಟ್ಟರೆ ಪ್ರೈಮರಿ ಶಾಲೆಗಳಿಗೆ ಬೇಕಾಗುವ ಕಟ್ಟಡಗಳ ಪೂರೈಕೆ ಸಾಧ್ಯವಾಗುತ್ತದೆ. ಇನ್ನಾದರೂ ಸರ್ಕಾರದವರು ಈ ಬಗ್ಗೆ ಮನಸ್ಸು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಉಪಾಧ್ಯಾಯರುಗಳಿಗೆ ಮನೆ ಕಟ್ಟಿಸಿಕೊಡುವ ವಿಚಾರ. ಯಾವುದಾದರೂ ಒಂದು ಹಳ್ಳಿಗೆ ಒಬ್ಬ ಉಪಾಧ್ಯಾಯರನ್ನು ಕಳಿಸಿದರೆ, ಅವರು ನಿಮ್ಮ ಊರಿನಲ್ಲಿ ಸರಿಯಾದ ಮನೆಯಿಲ್ಲ, ಯಾವ ರೀತಿ ಇರುವುದು ಎಂದು ಕೇಳುತ್ತಾರೆ. ಹಳ್ಳಿಗಳಲ್ಲಿರುವ ಮನೆಗಳು ಯಾವ ರೀತಿ ಇರುತ್ತವೆ ಎಂಬುದು ತಮ್ಮೆಲ್ಲರಿಗೂ ಗೊತ್ತು. ಅಂತಹ ಮನೆಗಳಲ್ಲಿ ಉಪಾಧ್ಯಾಯರುಗಳು ಇರುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಸ್ಕೂಲ್ ಸಮೀಪದಲ್ಲೇ ಮನೆ ಗಳನ್ನು ಕಟ್ಟಿಸಿಕೊಡಬೇಕು. ಅಲ್ಲದೆ ಯಾವ ಯಾವ ಭಾಗಗಳಲ್ಲಿ ಲೇಡಿ ಟೀಚರ್‌ಗಳು ಇರುತ್ತಾರೋ ಅಂತಹ ಕಡೆಗಳಲ್ಲಿ ಕಡ್ಡಾಯವಾಗಿ ಮನೆಗಳನ್ನು ಕಟ್ಟಿಸಿ ಕೊಡಲೇಬೇಕು. ಈ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ, ಆ ಮೂಲಕ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಹೇಳುತ್ತೇನೆ.

ಇನ್ನು ನನ್ನ ಸ್ನೇಹಿತರು ಹೇಳಿದರು, ಮನೆ, ಜಮೀನು ಇರುವ ಉಪಾಧ್ಯಾಯರುಗಳನ್ನು ಅವರವರ ಊರಿನಲ್ಲೇ ಇರಿಸಬಾರದು, ಕೊನೆಯ ಪಕ್ಷ 20 ಮೈಲಿಗಳ ದೂರದಲ್ಲಾದರು ಇರಬೇಕೆಂದು. ಒಂದು ತಾಲ್ಲೂಕ್‌ಗೂ ಇನ್ನೊಂದು ತಾಲ್ಲೂಕ್‌ಗೂ ಕೇವಲ 20 ಮೈಲಿಗಳ ಅಂತರವಿರುತ್ತದೆ. ಆದ್ದರಿಂದ ಇಂತಹ ಉಪಾಧ್ಯಾಯರುಗಳನ್ನು 50 ಮೈಲಿ ದೂರದಲ್ಲಿ ಇರುವಂತೆ ವರ್ಗ ಮಾಡಬೇಕು. ಇವರು ಸ್ವಂತ ಊರಿನಿಂದ ದೂರ ಇದ್ದಷ್ಟೂ ರಾಜಕೀಯ ತಿಳಿಯಾಗಿರುತ್ತದೆ. ಆಫೀಸ್‌ಗಳಿಗೆ ಬರುವ ಅರ್ಜಿಗಳು ಸಹ ಕಡಿಮೆಯಾಗುತ್ತವೆ. ಈ ಬಗ್ಗೆ ಸರ್ಕಾರ ತೀವ್ರವಾಗಿ ಆಲೋಚನೆ ಮಾಡಿ ಪ್ರಾಥಮಿಕ ಉಪಾಧ್ಯಾಯರುಗಳನ್ನು ಅವರ ಸ್ವಂತ ಊರಿನಿಂದ 50 ಮೈಲಿ ದೂರಕ್ಕೆ ವರ್ಗ ಮಾಡಬೇಕು. ಇವತ್ತಿನ ದಿವಸ ನಾನು ಸ್ವಂತ ಊರಿನಲ್ಲೇ ಇರುವ ಉಪಾಧ್ಯಾಯರುಗಳನ್ನು ನೋಡುತ್ತಿದ್ದೇನೆ. ಅವರು ತಮ್ಮ ಸ್ವಂತ ಕಸಬನ್ನು ಮುಗಿಸಿಕೊಂಡು ಬೆಳಿಗ್ಗೆ 9 ಘಂಟೆಗೆ ಶಾಲೆ ಯನ್ನು ಪ್ರಾರಂಭ ಮಾಡುತ್ತಿದ್ದಾರೆ. ಈಗ ಸರ್ಕಾರದವರು 300 ಪ್ರಜಾಸಂಖ್ಯೆ ಇರುವ ಪ್ರತಿಯೊಂದು ಹಳ್ಳಿಗೂ ಒಂದು ಪ್ರಾಥಮಿಕ ಶಾಲೆಯನ್ನು ಮಂಜೂರು ಮಾಡಿದ್ದಾರೆ. ಅಲ್ಲಿ ಸಿಂಗಲ್ ಟೀಚರ್ಸ್ ಎಂದು ಇರುತ್ತಾರೆ. ಅವರೇ ರಾಜ, ಮಂತ್ರಿ ಎಲ್ಲಾ ಆಗಿರುತ್ತಾರೆ. ತನಿಖೆ ಮಾಡುವ ಅಧಿಕಾರಿಗಳು ಅಂತಹ ಹಳ್ಳಿಗಳಿಗೆ ವಾಹನಗಳಲ್ಲಿ, ಸೈಕಲ್‌ಗಳಲ್ಲಿ ಹೋಗುವುದಕ್ಕೆ ಅನುಕೂಲವಿರುವುದಿಲ್ಲ. ಬಹಳ ಕಷ್ಟವಾಗುತ್ತದೆ. ಇಂತಹ ಕಡೆಗಳಲ್ಲಿ ಸ್ವಂತ ಮನೆ, ಜಮೀನು

ಇರುವವರು ಟೀಚರ್ ಆಗಿರುತ್ತಾರೆ. ಅವರು ಹುಡುಗರಿಗೆ ಪಾಠ ಹೇಳುವುದರಲ್ಲಿ ಹೆಚ್ಚಿನ ಆಸಕ್ತಿ ತೋರಿಸುವುದಕ್ಕಾಗುವುದಿಲ್ಲ. ಸ್ವಂತ ಕಸಬಿನಮೇಲೆ ಹೆಚ್ಚಿನ ನಿಗಾ ಇಟ್ಟಿರುತ್ತಾರೆ. ಇದನ್ನು ನಾವು ಸರ್ವೆ ಸಾಮಾನ್ಯವಾಗಿ ಕಾಣುತ್ತಿದ್ದೇವೆ. ಸರ್ಕಾರ ಈ ಬಗ್ಗೆ ಸೂಕ್ತವಾದ ಏರ್ಪಾಡು ಮಾಡಿ ಪ್ರಾಥಮಿಕ ಪಾಠಶಾಲೆಯ ಉಪಾಧ್ಯಾಯರುಗಳನ್ನು ಅವರು ಇರುವ ಸ್ವಂತ ಊರಿನಿಂದ 50 ಮೈಲಿ ದೂರದಲ್ಲಿ ಇರುವಂತೆ ವ್ಯವಸ್ಥೆ ಮಾಡಿದರೆ ನಿಜವಾಗಿ ವಿದ್ಯಾರ್ಥಿಗಳು ಮುಂದುವರೆಯುತ್ತಾರೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕೋಸ್ಕರ ಕಷ್ಟಪಟ್ಟು ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ. ಉಪಾಧ್ಯಾಯರುಗಳನ್ನು ಅವರ ಸ್ವಂತ ಊರುಗಳಿಂದ ದೂರವಿರುವಂತೆ ಮಾಡಿದರೆ ಮಾತ್ರ ಇಷ್ಟು ಹಣ ಖರ್ಚು ಮಾಡುವುದು ಸಾರ್ಥಕವಾಗುತ್ತದೆ, ಇಲ್ಲದಿದ್ದರೆ ಸಾರ್ಥಕವಾಗುವುದಿಲ್ಲವೆಂದು ಹೇಳಿದರೆ ತಪ್ಪಾಗಲಾರದೆಂದು ಕಾಣುತ್ತದೆ.

ಇನ್ನು ಮೂರನೆಯದಾಗಿ ಇವತ್ತಿನ ದಿವಸ 7ನೇ ತರಗತಿಯಲ್ಲಿ ಪರೀಕ್ಷೆ ನಡೆಸುತ್ತಿದ್ದಾರೆ. ಹಿಂದೆ ಯಾವ ಪದ್ಧತಿ ಇತ್ತೋ ಅದೇ ಪದ್ಧತಿಗೆ ಮತ್ತೆ ಬಂದಂತೆ ಕಾಣುತ್ತದೆ. ಮೊದಲಿದ್ದ ಪರೀಕ್ಷೆಯನ್ನು ರದ್ದು ಮಾಡಿ ನಂತರ 7ನೇ ತರಗತಿಗೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಪರೀಕ್ಷೆ ಮಾಡುತ್ತೇವೆಂದು ಹೇಳಿದರು. ಕೆಲವು ಶಾಲೆಗಳ ರಿಜಲ್ಟ್ ನೋಡಿದರೆ, ಅವರೇ ಬೋರ್ಡಿನಲ್ಲಿ ಉತ್ತರ ಬರೆದು, ಹುಡುಗರಿಂದ ಬರೆಸಿ ಪಾಸ್ ಮಾಡಿಸಿರುತ್ತಾರೋ ಎನಿಸುತ್ತದೆ. ಇನ್ನು ಕೆಲವು ಶಾಲೆಗಳ ರಿಜಲ್ಟ್ ಚೆನ್ನಾಗಿರುತ್ತದೆ. ಚೆನ್ನಾಗಿ ಪರೀಕ್ಷೆಯನ್ನು ಸಹ ನಡೆಸಿರುತ್ತಾರೆ. ನಾನು ಸರ್ಕಾರದವರಲ್ಲಿ ಪ್ರಾರ್ಥನೆಮಾಡಿಕೊಳ್ಳುವುದೇನೆಂದರೆ, 7ನೇ ತರಗತಿಯಲ್ಲಿ ಪರೀಕ್ಷೆಯನ್ನು ನಡೆಸುವುದೇ ಆದರೆ, ಅದನ್ನು ಸ್ಟೇಟ್ ಲೆವಲ್‌ನಲ್ಲಿ ಮಾಡುವುದು ಒಳ್ಳೆಯದು. ಸರ್ಕಾರಕ್ಕೆ ಕಷ್ಟವಿರುವುದು ನನಗೆ ಗೊತ್ತಿದೆ. ಎಸ್. ಎಸ್. ಎಲ್. ಸಿ. ಗೆ ಪ್ರತಿ ವರ್ಷ ಲಕ್ಷಾಂತರ ಹುಡುಗರು ಕಟ್ಟುತ್ತಾರೆ, ಅಂದಮೇಲೆ 7 ನೇ ತರಗತಿಯ ಪರೀಕ್ಷೆಗೆ ಅದಕ್ಕಿಂತ ಜಾಸ್ತಿ ಕಟ್ಟುತ್ತಾರೆ. ಸರ್ಕಾರದವರಿಗೆ ಈ ಪರೀಕ್ಷೆ ನಡೆಸುವುದು ಕಷ್ಟವಿದೆ, ಬೇಕಾದಷ್ಟು ಅಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಸುವುದಕ್ಕೆ ಬೇಕಾಗುವ 4ರಷ್ಟು ಸಿಬ್ಬಂದಿ ಬೇಕಾಗುತ್ತದೆ. ಆದರೂ ಸಹ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಬೇಕಾದರೆ, ಕಾಲೇಜುಗಳಿಗೆ ಸೀಟ್‌ಗಳು ಸಿಗಬೇಕಾದರೆ, 7ನೇ ತರಗತಿಯ ಪರೀಕ್ಷೆಯನ್ನು ಸ್ಟೇಟ್ ಲೆವಲ್‌ನಲ್ಲೇ ಮಾಡಬೇಕು. ಇದರಿಂದ ನಾವು ಕಾಲೇಜಿಗೆ ಸೀಟ್‌ಗಾಗಿ ಪಡುವ ತೊಂದರೆ ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತದೆ. 7ನೇ ತರಗತಿ ಪಾಸ್ ಮಾಡಿದ ಒಬ್ಬ ಹುಡುಗ ಇವತ್ತು ಬೆಂಗಳೂರಿನಲ್ಲಿ ಯಾವುದಾದರೂ ಒಂದು ಕಾಲೇಜಿಗೆ ಸೇರಲು ಸೀಟ್ ಕೊಡುತ್ತಿಲ್ಲ. ಹಳ್ಳಿಯಲ್ಲೇ ಹುಟ್ಟಿ ಬೆಳೆದ ಇವರು 40-45 ಪರ್ಸೆಂಟ್‌ವರೆಗೆ ನಂಬರ್ ತೆಗೆದುಕೊಂಡಿರುತ್ತಾರೆ. ಬೆಂಗಳೂರಿನಲ್ಲಿರುವ ಕಾಲೇಜ್‌ನವರು 60 ಪರ್ಸೆಂಟ್ ಬಂದಿದ್ದರೆ ಮಾತ್ರ ಸೀಟ್ ಕೊಡುತ್ತೇವೆಂದು ಹೇಳುತ್ತಾರೆ. ಇವತ್ತಿನ ದಿವಸ ಏನಾಗಿದೆಯೆಂದರೆ, ಖಾಸಗಿ ಸಂಸ್ಥೆಯವರು ವಿದ್ಯಾರ್ಥಿಗಳಿಗೆ ಚೆನ್ನಾಗಿ ವಿದ್ಯಾರ್ಜನೆ ಮಾಡಿಸಿ ಅವರು ರ್ಯಾಂಕ್ ಬರುವುದಕ್ಕೆ ಏರ್ಪಾಡು ಮಾಡಿರುತ್ತಾರೆ. ಆ ಹುಡುಗರು ರ್ಯಾಂಕ್ ಬಂದರೆ ನಮ್ಮ ಕಾಲೇಜಿನಲ್ಲಿ ಇಷ್ಟು ರ್ಯಾಂಕ್ ಬಂದಿದೆ, ನಮ್ಮ ಹುಡುಗರು ಪುಟ ಹಾಕಿದ ಚಿನ್ನವೆಂದು ಹೇಳುತ್ತಾರೆ. ಹಳ್ಳಿಗಾಡಿನಲ್ಲಿರುವ ವಿದ್ಯಾರ್ಥಿಗಳಿಗೂ ಸಹ ಸರಿಯಾದ ವಿದ್ಯಾಭ್ಯಾಸವನ್ನು ಕೊಟ್ಟರೆ ಪಟ್ಟಣಗಳಲ್ಲಿರುವಂತೆ ಅನುಕೂಲಗಳನ್ನು ಏರ್ಪಡಿಸಿದರೆ ಇವರೂ ಸಹ ಮೆರಿಟ್‌ನಲ್ಲಿ ಪಾಸ್ ಮಾಡುತ್ತಾರೆ. 40 ಪರ್ಸೆಂಟ್‌ಗಿಂತ ಜಾಸ್ತಿ ನಂಬರ್‌ಗಳನ್ನು ಪಡೆದು ಇವರು ಸಹ ಪುಟ ಹಾಕಿದ ಚಿನ್ನದಂತಾಗುತ್ತಾರೆ. ಇವರಿಗೂ ಸರ್ಕಾರದವರು ಬೇಕಾದ ಅನುಕೂಲಗಳನ್ನು ಏರ್ಪಡಿಸಬೇಕು.

ಫಸ್ಟ್‌ಕ್ಲಾಸ್ ಸ್ಟೂಡೆಂಟ್ಸ್ ಸೇರಿಕೊಂಡಿರತಕ್ಕ ಹೈಸ್ಕೂಲುಗಳಲ್ಲಿ ಮೆರಿಟ್‌ನಲ್ಲಿ ಪಾಸ್ ಮಾಡಿರತಕ್ಕ ವಿದ್ಯಾರ್ಥಿಗಳನ್ನು ನೋಡುತ್ತಾ ಇದ್ದೇವೆ. ದಡ್ಡರನ್ನು ಯಾರೂ ಸೇರಿಸಿಕೊಳ್ಳದೇ ಹೋದರೆ ಅವರು ಯಾವ ರೀತಿಯಲ್ಲೂ ಮುಂದೆ ಬಾಳುವೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದಡ್ಡರನ್ನು ಸರಿಮಾಡುವ ಜವಾಬ್ದಾರಿ ಸರ್ಕಾರದ ಮೇಲೂ ಇದೆ, ಸಂಸ್ಥೆಗಳನ್ನು ನಡೆಸತಕ್ಕ ಜನರ ಮೇಲೂ ಇದೆ. ಆದ್ದರಿಂದ ದಯವಿಟ್ಟು 7ನೇ ತರಗತಿಗೆ ಆದಷ್ಟು ಜಾಗ್ರತೆ ಪಬ್ಲಿಕ್ ಎಕ್ಸಾಮಿನೇಷನ್ ಮಾಡುವುದಕ್ಕೆ ತೀರ್ಮಾನ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಖಾಸಗೀ ಹೈಸ್ಕೂಲುಗಳಲ್ಲಿ ಫಲಿತಾಂಶ ಕಮ್ಮಿ ಬಂದರೆ ಗ್ರಾಂಟ್ ಕಟ್ ಮಾಡುತ್ತೇವೆ ಎಂದು ಸರ್ಕಾರದವರು ಹೇಳುತ್ತಾರೆ, ಕಟ್ ಮಾಡುತ್ತಾರೆ. ಅದನ್ನು ಒಂದು ವಿಧದಲ್ಲಿ ಸ್ವಾಗತಿಸಬೇಕು, ಅದರ ಉದ್ದೇಶ ಇಷ್ಟೇ, ಸರ್ಕಾರದ ದುಡ್ಡು ಖರ್ಚು ಮಾಡುತ್ತಾರೆ ಅದು ನ್ಯಾಯವಾಗಿ ಖರ್ಚಾಗಿ ಹೆಚ್ಚಿನ ಲಾಭ ದೊರೆಯಲಿ ಎಂಬುದಾಗಿದೆ. ಅದೇ ಪ್ರಕಾರ ಸರ್ಕಾರಿ ಹೈಸ್ಕೂಲುಗಳ ಬಗ್ಗೆ ಯಾವುದೇ ವಿಧವಾದ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ ಎಂದರೆ ತಪ್ಪಾಗುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ, ನಮ್ಮಲ್ಲಿ ಒಂದು ಹೈಸ್ಕೂಲು ಪ್ರಾರಂಭವಾಗಿ 6 ವರ್ಷವಾಗಿದೆ, 6 ಮಕ್ಕಳು ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ್ದಾರೆ. ಒಂದು ವರ್ಷ ಯಾರೂ ಪಾಸ್ ಆಗಲೇ

(ಶ್ರೀ ಎಂ. ಎನ್. ರಾಮಣ್ಣ)

ಇಲ್ಲ, ಒಟ್ಟಿನಲ್ಲಿ ಆರು ಜನ ಪಾಸ್ ಆಗಿದ್ದಾರೆ. ಎಂದರೆ ಎಷ್ಟುಮಟ್ಟಿಗೆ ಅಲ್ಲಿ ವಿದ್ಯಾಭ್ಯಾಸ ನಡೆದಿದೆ, ಎಷ್ಟು ಮುತುವರ್ಜಿಯಿಂದ ಶಾಲೆಯ ನೌಕರರು ಕೆಲಸ ಮಾಡಿದ್ದಾರೆ ಎಂಬುದನ್ನು ಊಹೆ ಮಾಡಬಹುದು. ಸರ್ಕಾರದವರು ಇದರ ಬಗ್ಗೆ ತನಿಖೆ ಮಾಡಿ ಸರ್ಕಾರಿ ಹೈಸ್ಕೂಲುಗಳಲ್ಲಿ ಉತ್ತಮ ಫಲಿತಾಂಶ ಬರುವಂತೆ ಮಾಡಬೇಕು. ಅವುಗಳ ಜೊತೆಗೆ ಮುನಿಸಿಪಲ್ ಹೈಸ್ಕೂಲುಗಳ ಫಲಿತಾಂಶ ಕೂಡ ಅದೇ ರೀತಿಯಾಗಿ ಬರುತ್ತಾ ಇದೆ. ಈ ವರ್ಷದ ಫಲಿತಾಂಶ ನೋಡುವುದಾದರೆ ಕೆಲವು ಕಡೆ ಶೇಕಡ 8, ಶೇಕಡ 4 ಬಂದಿರುವ ಮತ್ತು ಅಷ್ಟೂ ಕೂಡ ಬರದೆ ಇರುವ ಹೈಸ್ಕೂಲುಗಳೂ ಕೂಡ ಇವೆ. ದುಡ್ಡು ಸಂಪಾದನೆ ಮಾಡುವುದಕ್ಕೆ ಸಾಧ್ಯ ಆದರೆ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷ ಹೋದರೆ ಆ ಒಂದು ವರ್ಷವನ್ನು ಮತ್ತೆ ಪುನಃ ಸಂಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲ, ವಯಸ್ಸು ಹೆಚ್ಚುತ್ತಾ ಹೋಗುತ್ತದೆ. ಒಟ್ಟಿನಲ್ಲಿ ಪರೀಕ್ಷೆಯ ಫಲಿತಾಂಶ ಕಮ್ಮಿಯಾಗುತ್ತಾ ಇದೆ, ಅದನ್ನು ತಡೆ ಹಿಡಿದು ಉತ್ತಮ ಫಲಿತಾಂಶ ಬರುವಂತಹ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡಬೇಕೆಂದು ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಕಾಲೇಜಿನಲ್ಲಿ ಹಳ್ಳಿಯಿಂದ ಬರತಕ್ಕ ಮಕ್ಕಳನ್ನು ಸೇರಿಸುವುದು ಬಹಳ ಕಷ್ಟ. ಯಾವುದೇ ಕಾಲೇಜಿಗೆ ಹೋದರೂ ಸೀಟು ಸಿಕ್ಕುವುದಿಲ್ಲ. 45 ಪರ್ಸೆಂಟ್ ಇಲ್ಲದೇ ಇದ್ದರೆ ಅರ್ಜಿಯನ್ನೇ ಹಾಕಬೇಡಿ ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಹಳ್ಳಿಯಲ್ಲಿ ವಾಸಮಾಡತಕ್ಕ ಮನುಷ್ಯನ ಮಕ್ಕಳಿಗೆ ಮೆಡಿಕಲ್‌ಕಾಲೇಜಿನಲ್ಲಾಗಲಿ ಇತರ ಕಾಲೇಜುಗಳಲ್ಲಾಗಲಿ ಸೀಟುಸಿಕ್ಕುವುದಕ್ಕೆ ಸಾಧ್ಯವಿಲ್ಲ. ಅದೂ ಅಲ್ಲದೇ ಹೈಸ್ಕೂಲಿನಲ್ಲಿ ಕನ್ನಡ ಮೀಡಿಯಂ ತೆಗೆದುಕೊಂಡು ಪಾಸ್ ಮಾಡಿ ಪಿ. ಯು. ಸಿ. ಗೆ ಬಂದಕೂಡಲೇ ಇಂಗ್ಲೀಷ್ ಮೀಡಿಯಂಗೆ ಹೊಂದಿಕೊಳ್ಳಬೇಕಾದರೆ 6 ತಿಂಗಳು ಬೇಕಾಗುತ್ತದೆ, ಕಾಲೇಜಿನ ವಿದ್ಯಾಭ್ಯಾಸ ಎಂದರೆ ಏನು ಅಂತ ಅರ್ಥಮಾಡಿಕೊಳ್ಳುವುದಕ್ಕೆ ಆರು ತಿಂಗಳು ಬೇಕಾಗಿರುವಾಗ ಇನ್ನು 60-65 ಪರ್ಸೆಂಟ್ ತೆಗೆದುಕೊಂಡು ಪಾಸ್ ಮಾಡಿ ಮುಂದೆ ಬರಬೇಕೆಂದರೆ ಖಂಡಿತವಾಗಿಯೂ ಅವರಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಸ್ನೇಹಿತರು ಹೇಳಿದಹಾಗೆ ಅರ್ಬನ್ ಮತ್ತು ರೂರಲ್ ಏರಿಯಾ ಅಂತ ಎರಡು ಭಾಗ ಮಾಡಿ ಹಳ್ಳಿಯಿಂದ ಬರತಕ್ಕ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು. ಆ ರೀತಿ ಮಾಡಿದರೆ ಮಾತ್ರ ಹಳ್ಳಿಯಿಂದ ಬರತಕ್ಕ ಮಕ್ಕಳು ಓದುವುದಕ್ಕೆ ಸಾಧ್ಯ, ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ. ಇದನ್ನು ಸರ್ಕಾರದವರು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ದೇಶದಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ಸುಮಾರು 30 ವರ್ಷದಿಂದ ವಯಸ್ಕರ ಶಿಕ್ಷಣ ಸಮಿತಿ ಬಹಳ ಉನ್ನತವಾದ ಮಟ್ಟದಲ್ಲಿ ತನ್ನ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ತಮ್ಮದೇ ಆದಂತಹ ಒಂದು ಪ್ರತಿಭೆ, ಪ್ರಭಾವವನ್ನು ಬೀರಿ ಹೊರದೇಶಗಳವರಿಂದಲೂ ಕೂಡ ಸಹಾಯವನ್ನು ಪಡೆದುಕೊಂಡಿದ್ದಾರೆ, ಇವತ್ತಿನ ದಿವಸ ಆ ವಯಸ್ಕರ ಶಿಕ್ಷಣ ಸಮಿತಿಯವರು ಮಾಡುತ್ತಾ ಇದ್ದಂಥ ಕೆಲಸವನ್ನು ಸರ್ಕಾರದವರು ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ದೇಶದಲ್ಲಿ ಖಾಸಗಿ ಜನರು ಉತ್ತಮವಾದಂತಹ ಕೆಲಸವನ್ನು ಮಾಡುತ್ತಾ ಇದ್ದರೆ, ಅಂತಹ ಸಂಸ್ಥೆಗಳಿಗೆ ಸರ್ಕಾರದವರ ಮನ್ನಣೆ ಕೊಟ್ಟು ಅದರ ಬಗ್ಗೆ ಇನ್ನೂ ಹೆಚ್ಚಿನ ಪುರಸ್ಕಾರ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯ. ಆ ರೀತಿ ಮಾಡಿ ಸರ್ಕಾರ ತನ್ನ ಹೊರೆಯನ್ನು ಕಡಿಮೆ ಮಾಡಿಕೊಳ್ಳಬೇಕು. ಅದರ ಬದಲಾಗಿ ಬೇರೆ ವಿಧವಾದ ಜವಾಬ್ದಾರಿಯನ್ನೂ ಕೂಡ ತೆಗೆದುಕೊಂಡು ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಇವತ್ತು ರಾಷ್ಟ್ರೀಯ ಯೋಜನೆಯಲ್ಲಿ ವಯಸ್ಕರಿಗೆ ಶಿಕ್ಷಣ ಕೊಡುತ್ತಾರೆ. ಅದೇ ರೀತಿ ವಯಸ್ಕರ ಶಿಕ್ಷಣ ಸಮಿತಿಯವರೂ ಕೂಡ ವಯಸ್ಕರಿಗೆ ಶಿಕ್ಷಣ ಕೊಡುತ್ತಾರೆ. ಇವೆರಡನ್ನೂ ಹೋಲಿಸಿ ನೋಡಿದರೆ ಅವುಗಳಿಗೆ ಇರತಕ್ಕ ತಾರತಮ್ಯ ತಮಗೆ ಚೆನ್ನಾಗಿ ಅರ್ಥವಾಗುತ್ತದೆ. ತಮ್ಮಲ್ಲಿ ನಾನು ವಿನಂತಿ ಮಾಡುವುದು ಇಷ್ಟೆ; ಯಾವ ಒಂದು ಸಂಸ್ಥೆ ಬಹಳ ಅತ್ಯುತ್ತಮವಾದ ಸೇವೆಯನ್ನು ಮಾಡಿ ದೇಶದ ವಿದ್ಯಾಭ್ಯಾಸದ ಕ್ರಮವನ್ನು ಉನ್ನತ ಮಟ್ಟಕ್ಕೆ ತಂದು ಪರದೇಶದಲ್ಲಿ ತನ್ನದೇ ಆದಂತಹ ಪ್ರಭಾವವನ್ನು ಬೀರಿ, ಪರದೇಶದ ಜನತೆಯ ಸಹಾಯವನ್ನು ಪಡೆಯಲು ಅರ್ಹವಾಯಿತೋ ಅಂತಹ ಒಂದು ಸಂಸ್ಥೆ ಮಾಡತಕ್ಕ ಕೆಲಸದಲ್ಲಿ ಸರ್ಕಾರ ಕೈ ಹಾಕಿ ಅದನ್ನು ತಾವೇ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ವಿಷಯದಲ್ಲಿ ಸರ್ಕಾರ ಎಲ್ಲಾ ವಿಧದಲ್ಲೂ ಹಸ್ತಕ್ಷೇಪ ಮಾಡುತ್ತಾ ಇದೆ. ಆದ್ದರಿಂದ ಸರ್ಕಾರದವರು ಇದನ್ನು ದಯವಿಟ್ಟು ಉತ್ತಮವಾದಂತಹ ರೀತಿಯಲ್ಲಿ ಆಲೋಚನೆ ಮಾಡಿ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯವರು ಈಗ ಯಾವ ಒಂದು ಕೆಲಸ ಮಾಡುತ್ತಾ

ಇದ್ದಾರೆ ಅದರಲ್ಲಿ ಕೈ ಹಾಕಬಾರದು ಎಂದು ಸರ್ಕಾರದವರಲ್ಲಿ ನಾನು ಬಹಳ ವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಡೆಯದಾಗಿ, ವಿದ್ಯಾಪೀಠಗಳ ಬಗ್ಗೆ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಎಲ್ಲರಿಗೂ ಗೊತ್ತಿರುವ ಹಾಗೆ ವಯಸ್ಕರ ಶಿಕ್ಷಣ ಸಮಿತಿಯವರು ವಿದ್ಯಾಪೀಠಗಳನ್ನು ಬಹಳ ಉತ್ತಮವಾಗಿ ನಡೆಸಿಕೊಂಡು ಬಂದಿದ್ದಾರೆ. ಮಾನ್ಯ ವಿದ್ಯಾಸಚಿವರಾದ ಶ್ರೀಮಾನ್ ಶಂಕರೇಗೌಡರ ಡಿಸ್ಟ್ರಿಕ್ಟ್‌ನಲ್ಲೂ ಒಂದು ವಿದ್ಯಾ ಪೀಠ ಇದೆ, ಅದನ್ನು ಅವರು ನೋಡಿದ್ದಾರೆ. ಪರದೇಶದವರೂ ಕೂಡ ಅದರ ಬಗ್ಗೆ ಅವರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಅಂತಹ ವಿದ್ಯಾಪೀಠಗಳನ್ನು ಸ್ಥಾಪನೆ ಮಾಡಿ ಅವಕ್ಕೆ ಉತ್ತಮ ಮಟ್ಟದಲ್ಲಿ ಧನಸಹಾಯವನ್ನು ಒದಗಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. 'ಜೈ ಹಿಂದ''

Mr. DEPUTY SPEAKER.—The House now stands adjourned to meet at 1 P.M. on Monday, the 17th July 1967.

The House adjourned at One of the Clock to meet again at One of th Clock on Monday, the 17th July 1967.